
ಮಂಗಳವಾರ, ಫೆಬ್ರುವರಿ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 32 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,014 ▲	17,340 ▲	₹49,380 (ಬೆಂಗಳೂರು)	₹62,900 (ಬೆಂಗಳೂರು)	74.65 ▲

ಆರ್ಥಿಕ ಸಮೀಕ್ಷೆ ವರದಿ ಮಂಡಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್

ಮುಂದಿನ ವರ್ಷ ತಗ್ಗಲಿದೆ ಜಿಡಿಪಿ

● ಅನ್ನಪೂರ್ಣಾ ಸಿಂಗ್

ನವದೆಹಲಿ: ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆಯು ಶೇಕಡ 9.2ರಷ್ಟು ಇರಲಿದೆ ಎಂದು ಸೋಮವಾರ ಸಂಸತ್ತಿನಲ್ಲಿ ಮಂಡನೆಯಾಗಿರುವ ಆರ್ಥಿಕ ಸಮೀಕ್ಷೆ ವರದಿಯು ಹೇಳಿದೆ. ಮುಂದಿನ ಹಣಕಾಸು ವರ್ಷದಲ್ಲಿ (2022–23) ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ತುಸು ತಗ್ಗಲಿದ್ದು, ಅದು ಶೇ 8ರಿಂದ ಶೇ 8.5ರ ನಡುವೆ ಇರಲಿದೆ ಎಂದು ವರದಿ ಅಂದಾಜು ಮಾಡಿದೆ.



ನಿರ್ಮಲಾ ಸೀತಾರಾಮನ್

2022–23ರಲ್ಲಿ ಸಾಂಕ್ರಾಮಿಕದಿಂದಾಗಿ ಯಾವುದೇ ತೊಂದರೆಗಳು ಎದುರಾಗದೆ ಇದ್ದರೆ, ಮುಂಗಾರು ಮಳೆಯು ಸಹಜ ಪ್ರಮಾಣದಲ್ಲಿ ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 70 ಡಾಲರ್‌ನಿಂದ 75 ಡಾಲರ್ ನಡುವೆ ಇದ್ದರೆ ಹಾಗೂ ಜಾಗತಿಕ ಮಟ್ಟದಲ್ಲಿ ಸರಕುಗಳ ಪೂರೈಕೆ ವ್ಯವಸ್ಥೆಯಲ್ಲಿ ಸೃಷ್ಟಿಯಾಗಿರುವ ಸಮಸ್ಯೆಗಳು ನಿವಾರಣೆ ಆದರೆ ಮಾತ್ರ ಶೇ 8–8.5ರ ಬೆಳವಣಿಗೆ ಸಾಧ್ಯವಾಗಲಿದೆ ಎಂದು ವರದಿ ಹೇಳಿದೆ. ಆದರೆ, ಕಚ್ಚಾ ತೈಲದ ಬೆಲೆಯು ಈಗಲೇ ಪ್ರತಿ ಬ್ಯಾರೆಲ್‌ಗೆ 90 ಡಾಲರ್‌ಗೆ ತಲುಪಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಮೀಕ್ಷೆ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದರು.

ಅರ್ಥ ವ್ಯವಸ್ಥೆಯು ಭವಿಷ್ಯದ ಸವಾಲುಗಳನ್ನು ಎದುರಿಸಲು ಸಜ್ಜಾಗಿದೆ ಎಂದು ಸಮೀಕ್ಷೆ ಹೇಳಿದೆ. ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಲಿದೆ, ಹೂಡಿಕೆ ಕೂಡ ಜಾಸ್ತಿ ಆಗಲಿದೆ ಎಂಬ ಆಶಾಭಾವನೆಯನ್ನು ವರದಿಯು ವ್ಯಕ್ತಪಡಿಸಿದೆ. ‘ಖಾಸಗಿ ಹೂಡಿಕೆಯ ಚೇತರಿಕೆಯು ಶೈಶವಾವಸ್ಥೆಯಲ್ಲಿ ಇದೆ. ಆದರೆ, ಹೂಡಿಕೆ ಹೆಚ್ಚಾಗುತ್ತದೆ ಎಂಬುದರ ಸೂಚನೆಗಳು ಕಂಡುಬರುತ್ತಿವೆ’ ಎಂದು ಸಮೀಕ್ಷೆಯಲ್ಲಿ ಉಲ್ಲೇಖಿಸಲಾಗಿದೆ.

ಕೇಂದ್ರ ಸರ್ಕಾರವು ಬಂಡವಾಳ ವೆಚ್ಚವನ್ನು ಇನ್ನೂ ಹೆಚ್ಚು ಮಾಡುವ ಅಗತ್ಯ ಇದೆ. ಅದು ಈ ಬಾರಿಯ ಬಜೆಟ್ ಮೂಲಕ ಆಗಲಿದೆ ಎಂಬ ನಿರೀಕ್ಷೆ ಇದೆ ಎಂದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಅಸೋಚಾಂ) ಹೇಳಿದೆ.

10ನೇ ಪುಟ ನೋಡಿ

ಜಿಎಸ್‌ಟಿ ಸಂಗ್ರಹ ₹ 1.38 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಜನವರಿ ತಿಂಗಳಿನಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹ ₹ 1.38 ಲಕ್ಷ ಕೋಟಿ ಆಗಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಶೇಕಡ 15ರಷ್ಟು ಹೆಚ್ಚಳ ಆಗಿದೆ.

ಜನವರಿಯಲ್ಲಿ ಇಷ್ಟು ಮೊತ್ತ ಸಂಗ್ರಹ ಆಗಿರುವುದರಿಂದಾಗಿ, ಸತತ ನಾಲ್ಕು ತಿಂಗಳುಗಳಿಂದ ಜಿಎಸ್‌ಟಿ ಸಂಗ್ರಹವು ₹ 1.30 ಲಕ್ಷ ಕೋಟಿಗಿಂತ ಹೆಚ್ಚಾದಂತೆ ಆಗಿದೆ.

ಜನವರಿಯಲ್ಲಿ ಆಗಿರುವ ಸಂಗ್ರಹದಲ್ಲಿ ಕೇಂದ್ರ ಜಿಎಸ್‌ಟಿ ಪಾಲು ₹ 24,674 ಕೋಟಿ, ರಾಜ್ಯ ಜಿಎಸ್‌ಟಿ ಪಾಲು ₹ 32,016 ಕೋಟಿ ಹಾಗೂ ಏಕೀಕೃತ ಜಿಎಸ್‌ಟಿ ಪಾಲು ₹ 72,030 ಕೋಟಿ, ಸೆಸ್‌ನ ಪಾಲು ₹ 9,674 ಕೋಟಿ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಇದುವರೆಗೆ ತಿಂಗಳೊಂದರಲ್ಲಿ ಆಗಿರುವ ಅತಿ ಹೆಚ್ಚಿನ ಜಿಎಸ್‌ಟಿ ಸಂಗ್ರಹ ಮೊತ್ತ ₹ 1.39 ಲಕ್ಷ ಕೋಟಿ. ಇದು 2021ರ ಏಪ್ರಿಲ್‌ನಲ್ಲಿ ಆಗಿತ್ತು.

ಬಜೆಟ್ ಮಂಡನೆ ಇಂದು

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2022–23ನೇ ಸಾಲಿನ ಬಜೆಟ್‌ಅನ್ನು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಲೋಕಸಭೆಯಲ್ಲಿ ಮಂಡಿಸಲಿದ್ದಾರೆ. ಐಷಾರಾಮಿ ವಸ್ತುಗಳ ಮೇಲೆ ಹೆಚ್ಚುವರಿ ಸೆಸ್ ವಿಧಿಸುವ ಪ್ರಸ್ತಾವನೆ ಬಜೆಟ್‌ನಲ್ಲಿ ಇರುವ ನಿರೀಕ್ಷೆ ಇದೆ. ವೆಚ್ಚಗಳನ್ನು ಜಾಗರೂಕವಾಗಿ ಮಾಡುವುದು ಹಾಗೂ ಬೆಳವಣಿಗೆಗೆ ಇಂಬು ಕೊಡುವುದರ ನಡುವೆ ಸಮತೋಲ ಸಾಧಿಸುವ ಯತ್ನವನ್ನು ನಿರ್ಮಲಾ ಅವರು ಮಾಡುವ ನಿರೀಕ್ಷೆ ಇದೆ.

> ಸಮೀಕ್ಷೆಯಲ್ಲಿನ ಕೆಲವು ನಿರೀಕ್ಷೆಗಳು ಈಡೇರಲಿಕ್ಕಿಲ್ಲ. ಜಾಗತಿಕ ರಾಜಕೀಯ ಬಿಕ್ಕಟ್ಟುಗಳಿಂದಾಗಿ ಹೊಸ ಸಮಸ್ಯೆಗಳು ಎದುರಾಗಬಹುದು. ಹಾಗಾಗಿ, 2022–23ರಲ್ಲಿ ಅರ್ಥ ವ್ಯವಸ್ಥೆಯು ಶೇ 8ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸಬಹುದು ಎಂಬ ಅಂದಾಜನ್ನು ನಾವು ಹೊಂದಬಹುದು
>
> **ರಾನೆನ್ ಬ್ಯಾನರ್ಜಿ,** ಪಿಡಬ್ಲ್ಯುಸಿ ಇಂಡಿಯಾದ ಆರ್ಥಿಕ ಸಲಹಾ ಸೇವೆಗಳ ಪಾಲುದಾರ

ಸೆನ್ಸೆಕ್ಸ್ ಜಿಗಿತ

ಮುಂಬೈ (ಪಿಟಿಐ): ಜಿಡಿಪಿ ಬೆಳವಣಿಗೆ ಉತ್ತಮವಾಗಿರುವ ಅಂದಾಜು ಮತ್ತು ಜಾಗತಿಕ ಮಾರುಕಟ್ಟೆಗಳ ಸಕಾರಾತ್ಮಕ ಚಲನೆಯಿಂದಾಗಿ ದೇಶದ ಷೇರುಪೇಟೆಗಳ ಸೂಚ್ಯಂಕಗಳು ಸೋಮವಾರ ಏರಿಕೆ ಹಾದಿಗೆ ಮರಳಿದವು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 42 ಪೈಸೆ ವೃದ್ಧಿಯಾಗಿದ್ದು ಸಹ ವಹಿವಾಟಿನ ಮೇಲೆ ಪ್ರಭಾವ ಬೀರಿತು ಎಂದು ವರ್ತಕರು ಹೇಳಿದ್ದಾರೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 814 ಅಂಶ ಹೆಚ್ಚಾಗಿ 58,014 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 238 ಅಂಶ ಹೆಚ್ಚಾಗಿ 17,340 ಅಂಶಗಳಿಗೆ ತಲುಪಿತು.



ತಲೆಗೆ ಪೆಟ್ಟಾದ ವಿದ್ಯಾರ್ಥಿನಿ ಜೊತೆಯಲ್ಲಿ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು ವಿ.ವಿ. ಆವರಣದಲ್ಲಿ ಎರಡು ಪ್ರತಿಭಟನೆ

ವಿದ್ಯಾರ್ಥಿಗಳ ಮಧ್ಯೆ ಚಕಮಕಿ ಲಘು ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಪ್ರತಿಭಟನೆ ವಿಚಾರವಾಗಿ ಸೋಮವಾರ ಮಾತಿನ ಚಕಮಕಿ ನಡೆದಿದ್ದು, ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

'ಬೆಂಗಳೂರು ವಿಶ್ವವಿದ್ಯಾಲಯ ಸಂಶೋಧನಾ ವಿದ್ಯಾರ್ಥಿಗಳ ಸಂಘಟನೆ’ ಹಾಗೂ ‘ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ)’ ನೇತೃತ್ವದಲ್ಲಿ ವಿದ್ಯಾರ್ಥಿಗಳ ಗುಂಪು ಪ್ರತ್ಯೇಕವಾಗಿ ಪ್ರತಿಭಟನೆ ಹಮ್ಮಿಕೊಂಡಿದ್ದವು. ಇದೇ ವೇಳೆ ಪರಸ್ಪರ ಮಾತಿನ ಚಕಮಕಿ ಉಂಟಾಗಿ, ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿತ್ತು.

ಪರಿಸ್ಥಿತಿ ತಿಳಿಗೊಳಿಸಲು ಹೋದ ಎಸಿಪಿ ಕೋದಂಡರಾಮ್ ಮೇಲೂ ಪ್ರತಿಭಟನಕಾರರು ಮುಗಿಬಿದ್ದರು. ಇದರಿಂದ ಅವರ ಕೈಗೆ ಪೆಟ್ಟಾಯಿತು. ನಂತರ ಪೊಲೀಸರು, ಲಘು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದರು. 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

4ನೇ ಪುಟ ನೋಡಿ

‘ಅನುಮತಿ ಪಡೆಯದ ಎಬಿವಿಪಿ’

‘ಪ್ರತಿಭಟನೆ ನಡೆಸಲು ಎಬಿವಿಪಿ ಕಾರ್ಯಕರ್ತರು ಅನುಮತಿ ಪಡೆದಿರಲಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. ಲಘು ಲಾಠಿ ಪ್ರಹಾರ ಕುರಿತು ಪ್ರತಿಕ್ರಿಯಿಸಿದ ಅವರು, ‘ಬೆಂಗಳೂರು ವಿಶ್ವವಿದ್ಯಾಲಯ ಸಂಶೋಧನಾ ವಿದ್ಯಾರ್ಥಿಗಳ ಸಂಘಟನೆ ಹಾಗೂ ಎಬಿವಿಪಿ ನಡುವೆ ಗಲಾಟೆ ಆಗುವ ಸಾಧ್ಯತೆ ಇತ್ತು. ಅದನ್ನು ತಪ್ಪಿಸಲು ಲಘು ಲಾಠಿ ಪ್ರಹಾರ ಮಾಡಬೇಕಾಯಿತು’ ಎಂದಿದ್ದಾರೆ. ‘ರಕ್ತ ಗಾಯವಾಗುವಷ್ಟು ಯಾರಿಗೂ ಹೊಡೆದಿಲ್ಲ. ವಿದ್ಯಾರ್ಥಿನಿಯೊಬ್ಬರ ತಲೆಗೆ ಹೇಗೆ ಪೆಟ್ಟಾಯಿತೆಂಬುದು ಗೊತ್ತಿಲ್ಲ’ ಎಂದೂ ಹೇಳಿದ್ದಾರೆ.

‘ಪ್ರತಿಭಟನೆ ಹತ್ತಿಕ್ಕಲು ಲಾಠಿ ಪ್ರಹಾರ’

‘ಪ್ರತಿಭಟನೆ ಬಗ್ಗೆ ಜ್ಞಾನಭಾರತಿ ಠಾಣೆಗೆ ಭಾನುವಾರವೇ ಮಾಹಿತಿ ನೀಡಲಾಗಿತ್ತು. ಪೊಲೀಸರು ಲಾಠಿ ಬೀಸಿ ಪ್ರತಿಭಟನೆ ಹತ್ತಿಕ್ಕಲು ಯತ್ನಿಸಿದ್ದಾರೆ. ಇದರ ಹಿಂದೆ ವಿಶ್ವವಿದ್ಯಾಲಯದ ಕುಲಪತಿ ಒತ್ತಡವಿರುವಂತೆ ಕಾಣುತ್ತಿದೆ’ ಎಂದು ಎಬಿವಿಪಿ ಕಾರ್ಯಕರ್ತರು ದೂರಿದರು. ‘ಮಹಿಳಾ ಕಾನ್‌ಸ್ಟೆಬಲ್‌ಗಳು ಇರಲಿಲ್ಲ. ವಿದ್ಯಾರ್ಥಿನಿ ಮೇಲೆಯೇ ಪುರುಷ ಸಿಬ್ಬಂದಿಯೇ ಲಾಠಿ ಬೀಸಿದರು. ವಿದ್ಯಾರ್ಥಿ ತಲೆಗೆ ಪೆಟ್ಟಾಗಿದ್ದು, ಇದಕ್ಕೆ ಕಾರಣವಾಗಿರುವ ಪೊಲೀಸರನ್ನು ಅಮಾನತು ಮಾಡಬೇಕು‘ ಎಂದೂ ಆಗ್ರಹಿಸಿದರು.

ಮಧ್ಯಪ್ರದೇಶ ಹೈಕೋರ್ಟ್‌ನಿಂದ ಮಹತ್ವದ ಆದೇಶ

ವಯಸ್ಕ ಜೋಡಿ ಸ್ವಇಚ್ಛೆಯಿಂದ ಒಟ್ಟಿಗಿದ್ದರೆ ಮತೀಯ ಗೂಂಡಾಗಿರಿ ಸಲ್ಲ

ಮುಖ್ಯಾಂಶಗಳು
- ಮಧ್ಯಪ್ರದೇಶದಲ್ಲಿ ಅನ್ಯ ಕೋಮಿನ ವಯಸ್ಕರ ಮದುವೆ
- ಸಂಬಂಧದಲ್ಲಿ ಬಲವಂತ ಇಲ್ಲದಿದ್ದರೆ ತಪ್ಪಿಲ್ಲ

ಭೋಪಾಲ್ (ಪಿಟಿಐ): ಇಬ್ಬರು ವಯಸ್ಕರು ಮದುವೆ ಅಥವಾ ಸಹಜೀವನ ಮೂಲಕ ಒಟ್ಟಿಗೆ ಇರಲು ಸಿದ್ಧರಿದ್ದರೆ ಯಾವುದೇ ಮತೀಯ ಗೂಂಡಾಗಿರಿಗೆ ಅವಕಾಶ ಇಲ್ಲ ಎಂದು ಮಧ್ಯಪ್ರದೇಶ ಹೈಕೋರ್ಟ್ ಹೇಳಿದೆ.

ಜಬಲ್ಪುರ್ ನಿವಾಸಿ ಗುಲ್ಜಾರ್ ಖಾನ್ ಅವರು ಮಹಾರಾಷ್ಟ್ರದಲ್ಲಿ ಆರತಿ ಸಾಹು (19) ಅವರನ್ನು ವಿವಾಹವಾಗಿದ್ದರು. ಆರತಿ ಸ್ವಇಚ್ಛೆಯಿಂದ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎಂದು ಅವರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ವಿಲೇವಾರಿ ಮಾಡಿದ ನ್ಯಾಯಮೂರ್ತಿ ನಂದಿತಾ ದುಬೆ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆರತಿ ಸಾಹು ಅವರನ್ನು ಆಕೆಯ ಪೋಷಕರು ಬಲವಂತವಾಗಿ ವಾರಾಣಸಿಗೆ ಕರೆದೊಯ್ದು ಅಕ್ರಮ ಬಂಧನದಲ್ಲಿಟ್ಟಿದ್ದಾರೆ ಎಂದು ಗುಲ್ಜಾರ್ ಮನವಿಯಲ್ಲಿ ಆರೋಪಿಸಿದ್ದರು. ಜನವರಿ 28 ರಂದು ಅಡ್ವೊಕೇಟ್ ಜನರಲ್ ಕಚೇರಿಯಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಹು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.

‘ಇಬ್ಬರು ವಯಸ್ಕ ವ್ಯಕ್ತಿಗಳು ಮದುವೆಯ ಮೂಲಕ ಅಥವಾ ಸಹಜೀವನ (ಲಿವ್ ಇನ್ ರಿಲೇಶನ್‌ಶಿಪ್) ಒಟ್ಟಿಗೆ ಇರಲು ಸಿದ್ಧರಿದ್ದರೆ, ಅದರಲ್ಲಿ ಯಾವುದೇ ಬಲವಂತ ಇಲ್ಲ ಎಂದಾದರೆ ಮತೀಯ ಗೂಂಡಾಗಿರಿಯನ್ನು ಅನುಮತಿಸಲಾಗುವುದಿಲ್ಲ’ ಎಂದು ನ್ಯಾಯಮೂರ್ತಿ ಹೇಳಿದರು.

ಮಧ್ಯಪ್ರದೇಶದ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ, 2021 ರ ನಿಬಂಧನೆಗಳ ದೃಷ್ಟಿಯಿಂದ ರಾಜ್ಯ ಸರ್ಕಾರವು ಆಕ್ಷೇಪಣೆಯನ್ನು ಎತ್ತಿತ್ತು. ಮಧ್ಯಪ್ರದೇಶದ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆಯ ಸೆಕ್ಷನ್ 3 ಅನ್ನು ಈ ಮದುವೆ ಮೂಲಕ ಉಲ್ಲಂಘಿಸಲಾಗಿದೆ. ಆ ರೀತಿ ನಡೆದ ಮದುವೆಯನ್ನು ಅನೂರ್ಜಿತಗೊಳಿಸಬೇಕು ಎಂದು ಸರ್ಕಾರಿ ವಕೀಲರು ವಾದಿಸಿದ್ದರು. ಆದರೆ, ಕಾಯ್ದೆಯಲ್ಲಿ ಯಾವುದೇ ವ್ಯಕ್ತಿಯನ್ನು ಮದುವೆಯ ಉದ್ದೇಶಕ್ಕಾಗಿ ಮತಾಂತರ ಮಾಡಬಾರದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಈ ಪ್ರಕರಣದಲ್ಲಿ ಆ ರೀತಿಯ ಕಾನೂನು ಉಲ್ಲಂಘನೆ ಆಗಿಲ್ಲ ಎಂದು ನ್ಯಾಯಾಲಯವು ಗಮನಿಸಿದೆ.

ಮಹಿಳೆ ತಾನು ಅರ್ಜಿದಾರನನ್ನು ಸ್ವಇಚ್ಛೆಯಿಂದ ಮದುವೆಯಾಗಿದ್ದೇನೆ ಮತ್ತು ಅವರೊಂದಿಗೆ ಇರಲು ಬಯಸುತ್ತೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾಳೆ ಎಂದು ಹೈಕೋರ್ಟ್ ಹೇಳಿದೆ.

‘ಸಂವಿಧಾನವು ಈ ದೇಶದ ಪ್ರತಿಯೊಬ್ಬ ವಯಸ್ಕ ನಾಗರಿಕರಿಗೆ ಅವಳ ಅಥವಾ ಅವನ ಸ್ವಂತ ಇಚ್ಛೆಯಂತೆ ಬದುಕುವ ಹಕ್ಕನ್ನು ನೀಡುತ್ತದೆ’ಎಂದು ಹೈಕೋರ್ಟ್ ಒತ್ತಿ ಹೇಳಿದೆ. ಆರತಿ ಸಾಹು ಅವರನ್ನು ನಾರಿ ನಿಕೇತನಕ್ಕೆ ಕಳುಹಿಸಬೇಕೆಂಬ ಸರ್ಕಾರಿ ವಕೀಲರ ಮನವಿಯನ್ನು ತಿರಸ್ಕರಿಸಲಾಗಿದೆ ಎಂದು ನ್ಯಾಯಾಲಯವು ತನ್ನ ಆದೇಶದಲ್ಲಿ ತಿಳಿಸಿದೆ.

ವಿದ್ಯುತ್ ಕ್ಷೇತ್ರದ ನೌಕರರಿಂದ ಇಂದು ಪ್ರತಿಭಟನೆ

ನವದೆಹಲಿ (ಪಿಟಿಐ): ಖಾಸಗೀಕರಣ ನೀತಿಗಳನ್ನು ವಿರೋಧಿಸಿ ಫೆಬ್ರುವರಿ 1ರಂದು ವಿದ್ಯುತ್ ಕ್ಷೇತ್ರದ ನೌಕರರು ದೇಶವ್ಯಾಪಿ ಪ್ರತಿಭಟನೆ ನಡೆಸಲಿದ್ದಾರೆ ಎಂದು ಅಖಿಲ ಭಾರತ ವಿದ್ಯುತ್ ಎಂಜಿನಿಯರ್‌ಗಳ ಒಕ್ಕೂಟ (ಎಐಪಿಇಎಫ್) ತಿಳಿಸಿದೆ.

ವಿದ್ಯುತ್ ಕ್ಷೇತ್ರದ ನೌಕರರ, ಎಂಜಿನಿಯರ್‌ಗಳ ರಾಷ್ಟ್ರೀಯ ಸಮನ್ವಯ ಸಮಿತಿ (ಎನ್‌ಸಿಸಿ-ಒಇಇ) ಕರೆ ನೀಡಿರುವಂತೆ, ಕೇಂದ್ರ ಸರ್ಕಾರದ ಖಾಸಗೀಕರಣ ನೀತಿಗಳ ವಿರುದ್ಧ ನೌಕರರು ಹಾಗೂ ಎಂಜಿನಿಯರ್‌ಗಳು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಿದ್ದಾರೆ ಎಂದು ಎಐಪಿಇಎಫ್ ಪ್ರಕಟಣೆ ತಿಳಿಸಿದೆ.

ಒಳ ಪುಟಗಳು




ಚಿನಕುರಳಿ

ಪ್ರಕಾಶ್ ಶೆಟ್ಟಿ









ಕೆಎಎಸ್ ಅಧಿಕಾರಿಗಳು, ಎಂಜಿನಿಯರ್‌ಗಳ ವಿರುದ್ಧ ಎಸಿಬಿ ವಿಚಾರಣೆಗೆ ಸಮ್ಮತಿ

ಬಿಡಿಎ ಖರೀದಿಸಿದ್ದ ಜಮೀನಿಗೆ ಅಕ್ರಮವಾಗಿ ನಿರಾಕ್ಷೇಪಣಾ ಪತ್ರ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಡಿಎ) ಭೂ ಸ್ವಾಧೀನಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಮೂವರು ಕೆಎಎಸ್ ಅಧಿಕಾರಿಗಳು ಹಾಗೂ ಮೂವರು ಎಂಜಿನಿಯರ್‌ಗಳನ್ನು ನಿಯಮಬಾಹಿರವಾಗಿ ನಿರಾಕ್ಷೇಪಣಾ ಪತ್ರ ನೀಡಿದ ಪ್ರಕರಣವೊಂದರ ಸಂಬಂಧ ಎಸಿಬಿಯಿಂದ ವಿಚಾರಣೆಗೆ ಒಳಪಡಿಸಲು ಪ್ರಾಧಿಕಾರದ ಆಯುಕ್ತರು ಶಿಫಾರಸು ಮಾಡಿದ್ದಾರೆ.

ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಕಾಡುಬೀಸನಹಳ್ಳಿ ಗ್ರಾಮದ ಸರ್ವೆ ನಂಬರ್ 26/1ರಲ್ಲಿ 1.18 ಎಕರೆ ಜಮೀನನ್ನು ಬಿಡಿಎ 1995ರ ನವೆಂಬರ್‌ನಲ್ಲಿ ಸ್ವಾಧೀನಪಡಿಸಿಕೊಂಡಿತ್ತು. ನಂತರ 2001ರ ಏ.23ರಂದು ಸರ್ಕಾರ ಅಧಿಸೂಚನೆ ಹೊರಡಿಸಿ ಈ ಜಮೀನುಗಳನ್ನು ಭೂಸ್ವಾಧೀನದಿಂದ ಕೈಬಿಟ್ಟಿತ್ತು. ಈ ಜಮೀನಿನಲ್ಲಿ ಕಟ್ಟಡಗಳು ನಿರ್ಮಾಣವಾಗಿದ್ದವು. ರಸ್ತೆ ನಿರ್ಮಿಸುವುದಕ್ಕಾಗಿ ಈ ಕಟ್ಟಡಗಳ ಮಾಲೀಕರಿಂದ 1998ರ ಸೆ.29ರಂದು ಬಿಡಿಎ ಜಮೀನು ಖರೀದಿಸಿತ್ತು. ಮಾಲೀಕರಿಗೆ ಪರ್ಯಾಯ ನಿವೇಶನ ನೀಡಿ, ಕಟ್ಟಡಗಳಿಗೆ ಪರಿಹಾರವನ್ನೂ ಪಾವತಿಸಲಾಗಿತ್ತು. ಮತ್ತೆ ಕೈತಪ್ಪಿನಿಂದ ಈ ಜಮೀನನ್ನು 1999 ಜುಲೈ 28ರಲ್ಲಿ ಬಿಡಿಎ ಕಾಯ್ದೆ ಕಲಂ 20 ರಂತೆ ಅಭಿವೃದ್ಧಿ ಶುಲ್ಕ ಪಾವತಿಸಿಕೊಳ್ಳುವ ಮೂಲಕ ಸೇರ್ಪಡೆಗೊಳಿಸಲಾಗಿತ್ತು. ಇದು ಭೂಸ್ವಾಧೀನ ವಿಭಾಗದ ಕರ್ತವ್ಯ ಲೋಪ ಆಗಿದೆ.

ಆ ಬಳಿಕ, ದಿವಂಗತ ಚಿನ್ನಪ್ಪ ಇವರ ಮಕ್ಕಳಾದ ಮುನಿಸಂಜೀವಯ್ಯ ಹಾಗೂ ಇತರರು ಸಲ್ಲಿಸಿದ ಅರ್ಜಿ ಮೇರೆಗೆ ಸರ್ವೆ ನಂ.26/4ರಲ್ಲಿದ್ದ 0.08 ಗುಂಟೆ ಜಮೀನನ್ನು ₹ 1,000.96 ಅಭಿವೃದ್ಧಿ ಶುಲ್ಕ ಪಾವತಿಸಿಕೊಂಡು ನಕ್ಷೆ ಮಂಜೂರಾತಿ ಪಡೆಯಲು 2005ರಲ್ಲಿ ನಿರಾಪೇಕ್ಷಣಾ ಪತ್ರ ನೀಡಲಾಗಿದೆ. ನಂತರ ಇದನ್ನು ರದ್ದುಪಡಿಸಲಾಗಿದೆ. ಈ ಲೋಪಕ್ಕೆ ಭೂಸ್ವಾಧೀನ ವಿಭಾಗದ ಅಧಿಕಾರಿಗಳೇ ಹೊಣೆ. ನೇರ ಖರೀದಿ ಮಾಡಿದ್ದ ಈ ಜಮೀನು ಬಿಡಿಎ ಸ್ವತ್ತು. ಹಾಗಾಗಿ ಅದರ ಖಾತೆಯನ್ನೂ ಪ್ರಾಧಿಕಾರದ ಹೆಸರಿಗೆ ಬದಲಾವಣೆ ಮಾಡಿಸಿಕೊಳ್ಳಬೇಕಾಗಿತ್ತು. ಆ ರೀತಿ ಮಾಡದ ಕಾರಣ, ನಿರಾಕ್ಷೇಪಣಾ ಪತ್ರ ನೀಡಿದ ಜಮೀನಿಗೆ ಜಿಲ್ಲಾಧಿಕಾರಿಯವರು ಭೂಪರಿವರ್ತನೆ ಆದೇಶ ಮಾಡಿದ್ದರು. ನಂತರ ಅದನ್ನು ರದ್ದುಪಡಿಸಬೇಕಾದ ಪ್ರಮೇಯ ಎದುರಾಗಿತ್ತು. ಅಷ್ಟೇ ಅಲ್ಲ, ಮೊದಲು 26/1 ಎಂದು ಇದ್ದ ಸರ್ವೆ ನಂಬರ್ ಅನ್ನು 26/3, 26/4, 26/5 ಎಂದು ಪರಿಷ್ಕರಣೆ ಮಾಡಲಾಗಿದ್ದು, ಅದನ್ನೂ ರದ್ದುಪಡಿಸಬೇಕಾಗಿದೆ.

ಈ ಜಮೀನಿನಲ್ಲಿದ್ದ ನಾಗರಿಕ ಸೌಕರ್ಯ ನಿವೇಶನವನ್ನು ಬೆಸ್ಕಾಂಗೆ ಭೋಗ್ಯಕ್ಕೆ ನೀಡಲಾಗಿದೆ. ಆದರೂ ಈ ಸ್ವತ್ತಿನ ಮೂಲ ಒಡೆತನ ಪ್ರಾಧಿಕಾರದ್ದು. ಭೂಸ್ವಾಧೀನಾಧಿಕಾರಿಗಳು ನಿಯಮಬಾಹಿರವಾಗಿ ನೀಡಿದ್ದ ನಿರಾಕ್ಷೇಪಣಾ ಪತ್ರದ ಆಧಾರದ ಮೇಲೆ ಮುನಿಸಂಜೀವಯ್ಯ ಹಾಗೂ ಇತರರು ಆ ಜಮೀನಿನಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಮಾಡಿದ್ದರು. ಅದನ್ನು ತಡೆಯಲು ಕಾರ್ಯಪಾಲಕ ಎಂಜಿನಿಯರ್ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿದ್ದಾರೆ. ಸರ್ವೆ ನಂಬರ್ 26/1ರ ಜಮೀನನ್ನು ಪ್ರಾಧಿಕಾರವು ಖರೀದಿ ಮಾಡಿದ ನಂತರ ಅದನ್ನು ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರಿಸಲಾಗಿತ್ತು. ಆದರೂ, ಪೂರ್ವ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು ನಾಗರಿಕ ಸೌಕರ್ಯ ವಿಭಾಗದ ಕೋರಿಕೆಯಂತೆ ಬೆಸ್ಕಾಂಗೆ ನಿವೇಶನ ಹಂಚಿಕೆ ಮಾಡಲು ಖಚಿತ ಅಳತೆ ವರದಿ ಕಳುಹಿಸಿದ್ದರು.

ಆರೋಪ ಎದುರಿಸುತ್ತಿರುವ ಅಧಿಕಾರಿಗಳು

ಸ್ವಾಧೀನಪಡಿಸಿಕೊಂಡಿದ್ದ ಜಮೀನನ್ನು ಸುಪರ್ದಿಗೆ ಪಡೆಯದೆ ಅನಗತ್ಯ ವ್ಯಾಜ್ಯ ಸೃಷ್ಟಿಸಲು ಕಾರಣವಾದ ಆರೋಪವನ್ನು ಪ್ರಾಧಿಕಾರದಲ್ಲಿ ಭೂಸ್ವಾಧೀನ ಅಧಿಕಾರಿಯಾಗಿದ್ದ ಕೆ.ಎ.ಎಸ್ ಅಧಿಕಾರಿ ಶಂಕರಪ್ಪ, ಎಂ.ಎನ್.ಮಂಜುನಾಥ್ ಹಾಗೂ ಚಿ.ಲಿಂಗಮೂರ್ತಿ, ಪೂರ್ವ ವಿಭಾಗದಲ್ಲಿ ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ಮಹದೇವಗೌಡ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ಗೋವಿಂದರಾಜು ಹಾಗೂ ಸಹಾಯಕ ಎಂಜಿನಿಯರ್ ಆಗಿದ್ದ ಅರವಿಂದ ಅವರು ಎದುರಿಸುತ್ತಿದ್ದಾರೆ. ಅವರು ತಪ್ಪೆಸಗಿದ್ದು ಪ್ರಾಧಿಕಾರದ ದಾಖಲೆಗಳಿಂದ ಮೇಲ್ನೋಟಕ್ಕೆ ಸಾಬೀತಾಗಿದೆ. 1988ರ ಭ್ರಷ್ಟಾಚಾರ ತಡೆ ಕಾಯ್ದೆ ನಿಯಮ 17(ಎ) ಅನ್ವಯ ಅವರನ್ನು ವಿಚಾರಣೆಗೆ ಒಳಪಡಿಸಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ ಅನುಮತಿ ನೀಡಬಹುದು ಎಂದು ಬಿಡಿಎ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ 2022ರ ಜ. 17ರಂದು ಬರೆದ ಪತ್ರದಲ್ಲಿ ಶಿಫಾರಸು ಮಾಡಿದ್ದಾರೆ.

ಮಲೆಯಾಳಿ ನಟ ಬಾಬನ್ ಚಿತ್ರ: ಡಿ.ಕೆ. ಸುರೇಶ್ ಟೀಕೆ

ಬೆಂಗಳೂರು: ಕರ್ನಾಟಕ ಸರ್ಕಾರದ ಶಾಲಾ ಪಠ್ಯಪುಸ್ತಕದಲ್ಲಿ ಮಲೆಯಾಳಿ ಚಿತ್ರ ನಟ ಕುಂಚಾಕೋ ಬಾಬನ್ ಅವರ ಚಿತ್ರವನ್ನು ಅಂಚೆಯಣ್ಣನ ಶೀರ್ಷಿಕೆ ಜತೆ ಪ್ರಕಟಿಸಿರುವುದರ ಔಚಿತ್ಯ ಪ್ರಶ್ನಿಸಿರುವ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್, ಸರ್ಕಾರದ ನಡೆಯನ್ನು ಟೀಕಿಸಿದ್ದಾರೆ.

ಪಠ್ಯಪುಸ್ತಕದಲ್ಲಿ ತಮ್ಮ ಚಿತ್ರ ಇರುವುದನ್ನು ಟ್ಯಾಗ್ ಮಾಡಿ ಬಾಬನ್ ಮಾಡಿರುವ ಟ್ವೀಟ್ ಅನ್ನು ಮರು ಟ್ವೀಟ್ ಮಾಡಿರುವ ಸುರೇಶ್, 'ಪಠ್ಯಪುಸ್ತಕ ಸಂಘವು ಯಾವುದೇ ಪರಿಶೀಲನೆ ನಡೆಸದೇ ಅಂತರ್ಜಾಲದಿಂದ ಚಿತ್ರಗಳನ್ನು ತೆಗೆದು ಪ್ರಕಟಿಸುತ್ತಿದೆ. ಬಿಜೆಪಿ ಆಡಳಿತದ ಅವಧಿಯಲ್ಲಿ ಶಿಕ್ಷಣದ ಗುಣಮಟ್ಟ ಕುಸಿಯುತ್ತಿರುವುದಕ್ಕೆ ಇದಕ್ಕಿಂತ ಸಾಕ್ಷಿಬೇಕೇ'ಎಂದು ಪ್ರಶ್ನಿಸಿದ್ದಾರೆ.

'ಶಾಲಾ ಪಠ್ಯಕ್ರಮದಲ್ಲಿರುವ ಚಿತ್ರಗಳು ಮತ್ತು ಪಠ್ಯಗಳನ್ನು ಗಮನಿಸಿದರೆ ಪುಸ್ತಕಗಳನ್ನು ಶಿಕ್ಷಣ ಇಲಾಖೆಯ ಮೇಲುಸ್ತುವಾರಿಯಲ್ಲಿ ಸಿದ್ಧಪಡಿಸಲಾಗುತ್ತಿದೆಯೇ ಅಥವಾ ಕೇಶವಕೃಪದಲ್ಲೋ ಎಂಬುದನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹಾಗೂ ಹಿಂದಿನ ಸಚಿವ ಎಸ್. ಸುರೇಶ್‌ಕುಮಾರ್ ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬಿಜೆಪಿ ಸರ್ಕಾರದ ತೀವ್ರ ಅಸಡ್ಡೆ ಹಾಗೂ ಅವ್ಯವಸ್ಥೆಯಿಂದ ಕರ್ನಾಟಕವು ಇಡೀ ದೇಶದ ಎದುರು ತಲೆತಗ್ಗಿಸುವಂತಾಗಿದೆ ಎಂದಿದ್ದಾರೆ. ತಮ್ಮ ಚಿತ್ರ ಇರುವ ಪಠ್ಯ ಪುಸ್ತಕದ ಪುಟವನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ನಟ ಬಾಬನ್, 'ಕೊನೆಗೂ ತಮಗೊಂದು ಸರ್ಕಾರಿ ಕೆಲಸ ಸಿಕ್ಕಿತು' ಎಂದು ತಮಾಷೆಯಿಂದ ಹೇಳಿಕೊಂಡಿದ್ದರು.

ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ

ಬೆಂಗಳೂರು: ನಗರದ ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ ಕುಲಪತಿ ವಿ.ಜಿ.ಜೋಸೆಫ್ ಅವರು 2022ನೇ ಸಾಲಿನ 'ಶ್ರೀ ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ಈ ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿರಲಿದೆ. 'ವಿ.ಜಿ.ಜೋಸೆಫ್ ಅವರು ಕನ್ನಡ ಮಾಧ್ಯಮ ಶಾಲೆಗಳನ್ನು ಸ್ಥಾಪಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ತಮ್ಮ ಶಿಕ್ಷಣ ಸಂಸ್ಥೆಗೆ ಸೇರುವ ವಿದ್ಯಾರ್ಥಿಗಳು ಕನ್ನಡ ಕಲಿಯುವುದನ್ನು ಕಡ್ಡಾಯಗೊಳಿಸಿದ್ದು, ಪಠ್ಯದ ಮೂಲಕ ಕನ್ನಡದ ನೆಲ, ಜಲ, ಭಾಷೆ ಹಾಗೂ ಸಂಸ್ಕೃತಿಯ ಬಗೆಗೆ ವಿದ್ಯಾರ್ಥಿಗಳಿಗೆ ಮಾಹಿತಿ ಪಸರಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ವತಿಯಿಂದ ಕನ್ನಡ ಉತ್ಸವವನ್ನೂ ಆಚರಿಸುತ್ತಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ಅಮಿತಾ ಪ್ರಸಾದ್, ನಾಗಾಂಬಿಕಾದೇವಿ ನಿವೃತ್ತಿ

ಬೆಂಗಳೂರು: ಇಬ್ಬರು ಹಿರಿಯ ಐಎಎಸ್ ಅಧಿಕಾರಿಗಳಾದ ಅಮಿತಾ ಪ್ರಸಾದ್ ಮತ್ತು ಎನ್. ನಾಗಾಂಬಿಕಾ ದೇವಿ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ.

ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಅಮಿತಾ ಪ್ರಸಾದ್ ಅವರ ಹುದ್ದೆಯ ಹೊಣೆಗಾರಿಕೆಯನ್ನು ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ನಾಗಾಂಬಿಕಾ ದೇವಿ ನಿವೃತ್ತಿಯಿಂದ ತೆರವಾದ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಯ ಜವಾಬ್ದಾರಿಯನ್ನು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್‌ಕುಮಾರ್ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ಅಮಿತಾ ಪ್ರಸಾದ್ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದ್ದ ದೆಹಲಿಯ ಕರ್ನಾಟಕ ಭವನದ ಸ್ಥಾನಿಕ ಆಯುಕ್ತರ ಹುದ್ದೆಗೆ ಎಂ. ಇಂಕೊಂಗ್ಲಾ ಜಮೀರ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಪಶ್ಚಿಮ ಕಾರ್ಡ್ ರಸ್ತೆ ಹೆಚ್ಚುವರಿ ಮೇಲ್ಸೇತುವೆ ಕಾಮಗಾರಿ

ಟೆಂಡರ್ ಕರೆಯಲು ನಗರಾಭಿವೃದ್ಧಿ ಇಲಾಖೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಕೆಟಿಪಿಪಿ ಕಾಯ್ದೆಯ ಅನ್ವಯ ಟೆಂಡರ್ ಕರೆದೇ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣ ಮಾಡಬೇಕು ಎಂದು ನಗರಾಭಿವೃದ್ಧಿ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಹೆಚ್ಚುವರಿ ಕಾಮಗಾರಿಗಳ ನೆಪದಲ್ಲಿ ಮೂಲ ಗುತ್ತಿಗೆ ಮೊತ್ತಕ್ಕಿಂತ ಅನೇಕ ಪಟ್ಟು ಹೆಚ್ಚು ಮೊತ್ತದ ಕಾಮಗಾರಿಯನ್ನು ಒಬ್ಬರೇ ಗುತ್ತಿಗೆದಾರರಿಗೆ (ಎಂ. ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ) ವಹಿಸಲು ಕೆಟಿಪಿಪಿ ಕಾಯ್ದೆಯ 4ಜಿ ಸೆಕ್ಷನ್ ಅಡಿ ವಿನಾಯಿತಿ ನೀಡಬೇಕು ಹಾಗೂ ರಾಜ್ಯ ಸರ್ಕಾರವೇ ಅನುದಾನ ನೀಡಬೇಕು ಎಂದು ನಗರಾಭಿವೃದ್ಧಿ ಇಲಾಖೆಯು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಕಳೆದ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿತ್ತು. ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯನ್ನು ಯಾರಿಗೆ ವಹಿಸಬೇಕು ಎಂಬ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ತಾಂತ್ರಿಕ ವರದಿ ಪಡೆದು ಕೆಟಿಪಿಪಿ ಕಾಯ್ದೆಯನ್ನು ಅನುಸರಿಸಿ ಸೂಕ್ತ ನಿರ್ಣಯ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದರು.

ವರದಿ ಪರಿಣಾಮ

ಟೆಂಡರ್ ಕರೆದೇ ಕಾಮಗಾರಿ ನಡೆಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ತಾಂತ್ರಿಕ ಕೋಶ ಸಹ ಅಭಿಪ್ರಾಯ ನೀಡಿದೆ. ಅದರ ಆಧಾರದಲ್ಲಿ ಇಲಾಖೆ ಈ ಆದೇಶ ಹೊರಡಿಸಿದೆ. ನಿಯಮ ಉಲ್ಲಂಘಿಸಿ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಿರುವ ಬಗ್ಗೆ 'ಪ್ರಜಾವಾಣಿ' ಸರಣಿ ವರದಿಗಳನ್ನು ಪ್ರಕಟಿಸಿತ್ತು.

ಈ ಯೋಜನೆಗೆ ಅಗತ್ಯವಿರುವ ₹20.64 ಕೋಟಿಗಳನ್ನು ಇತ್ತೀಚೆಗೆ ಅನುಮೋದನೆಗೊಂಡ ಬೆಂಗಳೂರು ಅಮೃತ್ ನಗರೋತ್ಥಾನ ಯೋಜನೆಯಡಿ ಸೇರಿಸಲು ಸಹ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿದೆ.

ಪಶ್ಚಿಮ ಕಾರ್ಡ್ ರಸ್ತೆಗೆ ರಾಜಾಜಿನಗರದಲ್ಲಿ – ಮಂಜುನಾಥನಗರ ಮುಖ್ಯರಸ್ತೆ ಕೂಡುವಲ್ಲಿ ದ್ವಿಪಥ ಸಂಚಾರದ ಮೇಲ್ಸೇತುವೆ, ಶಿವನಗರದ 8ನೇ ಮತ್ತು 1ನೇ ಮುಖ್ಯ ರಸ್ತೆಗಳು ಕೂಡುವಲ್ಲಿ ದ್ವಿಮುಖ ಸಂಚಾರದ ಇಂಟಿಗ್ರೇಟೆಡ್ ಅಂಡರ್ ಪಾಸ್ ಮತ್ತು ಬಸವೇಶ್ವರ ನಗರದ ಮುಖ್ಯರಸ್ತೆ ಕೂಡುವಲ್ಲಿ ಏಕಮುಖ ಸಂಚಾರದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಳ ಪ್ಯಾಕೇಜ್‌ನ ಗುತ್ತಿಗೆಯನ್ನು ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ನೀಡಲಾಗಿದೆ. ಒಟ್ಟು ₹ 89.86 ಕೋಟಿ ವೆಚ್ಚದ ಈ ಪ್ಯಾಕೇಜ್‌ಗೆ 2015ರ ಫೆ.11ರಂದು ಅನುಮೋದನೆ ನೀಡಲಾಗಿತ್ತು.

ಮಂಜುನಾಥನಗರದ ಮುಖ್ಯರಸ್ತೆ ಕೂಡುವಲ್ಲಿನ ಮೇಲ್ಸೇತುವೆ 2018ರ ಆ. 27ರಂದು ಲೋಕಾರ್ಪಣೆಗೊಂಡಿದೆ. ಶಿವನಗರ 8ನೇ ಮತ್ತು 1ನೇ ಮುಖ್ಯ ರಸ್ತೆ ಕೂಡುವಲ್ಲಿ ಇಂಟಿಗ್ರೇಟೆಡ್ ಅಂಡರ್‌ಪಾಸ್ ಬದಲಿಗೆ ಮೇಲ್ಸೇತುವೆಯನ್ನೇ ನಿರ್ಮಿಸಲಾಗಿದ್ದು, 2021ರ ಅ. 4ರಂದು ವಾಹನ ಸಂಚಾರಕ್ಕೆ ಮುಕ್ತಗೊಂಡಿದೆ.

ಶಿವನಗರ ಮುಖ್ಯರಸ್ತೆಗಳು ಕೂಡುವಲ್ಲಿನ ಮೇಲ್ಸೇತುವೆಯ ಉದ್ಘಾಟನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿದ ವಸತಿ ಸಚಿವ ವಿ.ಸೋಮಣ್ಣ ಹಾಗೂ ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್, ಬಸವೇಶ್ವರನಗರದ ಮುಖ್ಯರಸ್ತೆ ಕೂಡುವಲ್ಲಿಯೂ ದ್ವಿಮುಖ ಸಂಚಾರದ ಮೇಲ್ಸೇತುವೆ ನಿರ್ಮಿಸುವಂತೆ ಕೋರಿಕೆ ಸಲ್ಲಿಸಿದ್ದರು. ಈ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿದ ಮುಖ್ಯಮಂತ್ರಿಯವರು, ಬಿಬಿಎಂಪಿ ಅಧಿಕಾರಿಗಳಿಗೆ ಮೌಖಿಕ ಆದೇಶವನ್ನೂ ನೀಡಿದ್ದರು.

ನಗರಾಭಿವೃದ್ಧಿ ಇಲಾಖೆ ವಿಧಿಸಿರುವ ಷರತ್ತುಗಳು

- ಈಗ ನೀಡಿರುವ ಅನುಮೋದನೆಯು ಕಾಮಗಾರಿಯ ಕ್ರಿಯಾಯೋಜನೆಗೆ ಅನುಮೋದನೆಯೇ ಹೊರತು ಕಾಮಗಾರಿಯ ಅಂದಾಜುಪಟ್ಟಿಗಳಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲ. ಅನುಮೋದನೆಗೊಂಡ ಕಾಮಗಾರಿಗೆ ಬಿಬಿಎಂಪಿಯು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ ತಾಂತ್ರಿಕ ಅನುಮೋದನೆ ಪಡೆದು ಕಾಮಗಾರಿ ಅನುಷ್ಠಾನ ಮಾಡಬೇಕು.
- ಈ ಕ್ರಿಯಾಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಯು ಇತರ ಯಾವುದೇ ಯೋಜನೆಯಡಿ ಪುನರಾವರ್ತನೆ ಆಗಿರುವುದಿಲ್ಲ ಎಂಬುದನ್ನು ಬಿಬಿಎಂಪಿಯ ಮುಖ್ಯ ಆಯುಕ್ತರು ಖಚಿತಪಡಿಸಿಕೊಳ್ಳಬೇಕು.
- ಬಿಬಿಎಂಪಿ ವತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ನಡೆಸಬೇಕು.



ಎಚ್‌ಪಿಸಿಎಲ್ ಕಂಪನಿ ಆರಂಭಿಸಿರುವ ಹೊಸ ಪ್ಯಾಕೇಜ್ಡ್ ಕುಡಿಯುವ ನೀರು 'ಎಚ್‌ಪಿ ಪಾನಿ'ಯನ್ನು ಬೆಂಗಳೂರು ಪ್ರಾದೇಶಿಕ ಕಚೇರಿಯ ಉಪ ಮಹಾ ಪ್ರಬಂಧಕ ಎಂ.ಆರ್. ಕುಮಾರ್ ಅನಾವರಣಗೊಳಿಸಿದರು

ಬಜೆಟ್: ಫೆ.2ಕ್ಕೆ ಪ್ರಧಾನಿ ಭಾಷಣ ನೇರ ಪ್ರಸಾರ

ಬೆಂಗಳೂರು: ಕೇಂದ್ರ ಬಜೆಟ್‌ಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರು ಫೆಬ್ರುವರಿ 2 ರಂದು ಭಾಷಣ ಮಾಡಲಿದ್ದು, ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಬೃಹತ್ ಪರದೆ ಮೂಲಕ ಭಾಷಣದ ನೇರ ಪ್ರಸಾರ ಮಾಡಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಸಂಸದರು, ಶಾಸಕರು, ಸಚಿವರು ಮತ್ತು ಆರ್ಥಿಕ ತಜ್ಞರು ಭಾಗವಹಿಸಲಿದ್ದಾರೆ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಫೆ. 5 ರಿಂದ 15 ರವರೆಗೆ ರಾಜ್ಯದ ಜಿಲ್ಲಾ ಮತ್ತು ಪ್ರಮುಖ ಕೇಂದ್ರಗಳಲ್ಲಿ ಆರ್ಥಿಕ ತಜ್ಞರು, ಚೇಂಬರ್ ಆಫ್ ಕಾಮರ್ಸ್‌ನ ಪದಾಧಿಕಾರಿಗಳು, ವಿಷಯ ತಜ್ಞರಿಂದ ಬಜೆಟ್ ಬಗ್ಗೆ ವಿಚಾರಗೋಷ್ಠಿ ಸಂವಾದ, ಮಂಥನಗಳೂ ನಡೆಯಲಿವೆ ಎಂದರು.

ಬಿಜೆಪಿ ಆರ್ಥಿಕ ಪ್ರಕೋಷ್ಠದ ರಾಜ್ಯ ಸಂಚಾಲಕ ಸಮೀರ್ ಕಾಗಲ್ಕರ್ ಮಾತನಾಡಿ, ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆಯಾಗಿ ಭಾರತ ಹೊರ ಹೊಮ್ಮಿದೆ. ಕಚ್ಚಾ ತೈಲ ದರ ತೀವ್ರ ಹೆಚ್ಚಳ, ಸರಕು ಸಾಮಗ್ರಿ ದರ ಹೆಚ್ಚಳ ಮತ್ತಿತರ ಕಾರಣದಿಂದ ಹಣದುಬ್ಬರವೂ ಹೆಚ್ಚಿದೆ. ಆದರೆ, ಇ ವೇ ಬಿಲ್ ಹೆಚ್ಚಳ, ಟೋಲ್ ಸಂಗ್ರಹ ಹೆಚ್ಚಳ, ಹೆಚ್ಚುತ್ತಿರುವ ಜಿಎಸ್‌ಟಿ ಸಂಗ್ರಹ ಅಂಕಿ ಅಂಶಗಳನ್ನು ಗಮನಿಸಿದರೆ ಆರ್ಥಿಕ ಪ್ರಗತಿ ಅರಿವಿಗೆ ಬರುತ್ತದೆ. ಇದು ದೇಶದ ಆರ್ಥಿಕ ಪುನಶ್ಚೇತನದ ಪ್ರತಿಬಿಂಬ ಎಂದು ಹೇಳಿದರು.

ಕೈಗೆ ಸಿಗದ ಒಲಾ, ಉಬರ್ ಸಿಬ್ಬಂದಿ: ಚಾಲಕರಿಗೆ ದಂಡ

ಬೆಂಗಳೂರು: ಆ್ಯಪ್ ಆಧಾರಿತ ಸೇವೆ ಒದಗಿಸುತ್ತಿರುವ ಒಲಾ ಮತ್ತು ಉಬರ್ ಸಂಸ್ಥೆಗಳ ಪರವಾನಗಿ ಅವಧಿ ಮುಗಿದಿದ್ದರೂ ನವೀಕರಣ ಮಾಡಿಕೊಳ್ಳದಿರುವುದು ಚಾಲಕರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಕಂಪನಿಯ ಸಿಬ್ಬಂದಿ ಹುಡುಕಿ ಸುಸ್ತಾಗಿರುವ ಸಾರಿಗೆ ಇಲಾಖೆ ಅಧಿಕಾರಿಗಳು ಈಗ ಕಾರುಗಳನ್ನು ಅಡ್ಡಗಟ್ಟಿ ದಂಡ ವಿಧಿಸುವ ಕಾರ್ಯ ಆರಂಭಿಸಿದ್ದಾರೆ.

ಒಲಾ ಕಂಪನಿಗೆ ನೀಡಿದ್ದ ಪರವಾನಗಿ ಕಳೆದ ಫೆಬ್ರುವರಿಯಲ್ಲಿ ಮುಗಿದಿದ್ದು, ಉಬರ್ ಕಂಪನಿಯ ಪರವಾನಗಿ ಅವಧಿ ಡಿಸೆಂಬರ್‌ನಲ್ಲಿ ಮುಕ್ತಾಯಗೊಂಡಿದೆ. ಶುಲ್ಕ ಪಾವತಿಸಿ ನವೀಕರಣ ಮಾಡಿಕೊಳ್ಳದೆ ಎರಡೂ ಕಂಪನಿಗಳು ಸೇವೆ ಮುಂದುವರಿಸಿವೆ.

ಕಂಪನಿಗಳ ಕಚೇರಿಗಳಿಗೆ ನೋಟಿಸ್ ಕಳಿಸಿದ್ದರೂ ಉತ್ತರಗಳು ಬಂದಿಲ್ಲ. ಕೋವಿಡ್ ಬಳಿಕ ಸಿಬ್ಬಂದಿ ಮನೆಯಿಂದಲೇ ಕೆಲಸ ಮಾಡುತ್ತಿರುವುದರಿಂದ ಸಾರಿಗೆ ಇಲಾಖೆ ಅಧಿಕಾರಿಗಳ ಕೈಗೆ ಎರಡೂ ಕಂಪನಿಗೆ ಸಂಬಂಧಿಸಿದವರು ಸಿಗುತ್ತಿಲ್ಲ. ಆದ್ದರಿಂದ ಕಾರುಗಳನ್ನು ಅಡ್ಡಗಟ್ಟಿ ಆ್ಯಪ್ ಆಧಾರಿತ ಸೇವೆ ಒದಗಿಸುತ್ತಿದ್ದರೆ ಅಂತಹ ಚಾಲಕರಿಗೆ ದಂಡ ವಿಧಿಸುವ ಕಾರ್ಯವನ್ನು ಸಾರಿಗೆ ಇಲಾಖೆ ಮಾಡುತ್ತಿದೆ.

ಪರವಾನಗಿ ಇಲ್ಲದೆ ಸೇವೆ ಒದಗಿಸುವುದು ಕಾನೂನು ಬಾಹಿರ. ಆದ್ದರಿಂದ ದಂಡ ವಿಧಿಸುವ ಕಾರ್ಯ ಆರಂಭಿಸಲಾಗಿದೆ ಎಂದು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

ಪರವಾನಗಿ ನವೀಕರಣ ಮಾಡಿಸಿಕೊಳ್ಳದ ಕಂಪನಿಗಳ ವಿರುದ್ಧ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳುವ ಬದಲು ಅಮಾಯಕ ಚಾಲಕರಿಗೆ ತೊಂದರೆ ನೀಡುತ್ತಿರುವುದು ಎಷ್ಟು ಸರಿ ಎಂಬುದು ಟ್ಯಾಕ್ಸಿ ಚಾಲಕರ ಪ್ರಶ್ನೆ.

'ಕಂಪನಿಯ ಸಿಇಒಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲು ಅವಕಾಶ ಇದೆ. ಆ್ಯಪ್‌ಗಳು ಕಾರ್ಯ ನಿರ್ವಹಿಸದಂತೆ ಬಂದ್ ಮಾಡಲು ಸರ್ಕಾರಕ್ಕೆ ಅವಕಾಶ ಇದೆ. ಅದನ್ನು ಮಾಡದೆ ಚಾಲಕರಿಗೆ ದಂಡ ವಿಧಿಸಿದರೆ ಏನು ಪ್ರಯೋಜನ. ಗುಬ್ಬಿಗಳ ಮೇಲೆ ಸರ್ಕಾರ ಬ್ರಹ್ಮಾಸ್ತ್ರ ಪ್ರಯೋಗ ಮಾಡುತ್ತಿದೆ' ಎಂದು ಟ್ಯಾಕ್ಸಿ ಮಾಲೀಕರ ಸಂಘದ ಅಧ್ಯಕ್ಷ ತನ್ವೀರ್ ಪಾಷಾ ಹೇಳಿದರು.

'ದಿನವಿಡೀ ಕಾರು ಚಾಲನೆ ಮಾಡಿ ದುಡಿದಿದ್ದ ಹಣವನ್ನು ಸಾರಿಗೆ ಇಲಾಖೆ ಅಧಿಕಾರಿಗಳು ದಂಡವಾಗಿ ವಸೂಲಿ ಮಾಡಿದರೆ, ಚಾಲಕರು ಏನು ಮಾಡಬೇಕು. ಚಾಲಕರಿಗೆ ದಂಡ ವಿಧಿಸದೆ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸರ್ಕಾರ ಸೂಚಿಸಬೇಕು' ಎಂದು ಒತ್ತಾಯಿಸಿದರು.

ರ‍್ಯಾಪಿಡೊ ಬೈಕ್ ಟ್ಯಾಕ್ಸಿಗೆ ಕಡಿವಾಣ ಹಾಕಿ:ಎಎಪಿ

ಬೆಂಗಳೂರು: 'ಆಟೊ ಚಾಲಕರ ಆದಾಯಕ್ಕೆ ಹೊಡೆತ ನೀಡುತ್ತಿರುವ ಅನಧಿಕೃತ ರ‍್ಯಾಪಿಡೊ ಬೈಕ್ ಟ್ಯಾಕ್ಸಿಗೆ ಕಡಿವಾಣ ಹಾಕಬೇಕು' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಆಟೊ ಚಾಲಕರ ಘಟಕದ ಅಧ್ಯಕ್ಷ ವೆಂಕಟೇಗೌಡ ಆಗ್ರಹಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,'ರ‍್ಯಾಪಿಡೊ ಬೈಕ್‌ಗಳು ಕಾನೂನುಬಾಹಿರವಾಗಿ ಕಾರ್ಯನಿರ್ವಹಿಸುತ್ತಿವೆ. ಸರ್ಕಾರದಿಂದ ಯಾವುದೇ ಪರವಾನಗಿ ಪಡೆಯದೆ, ಪ್ರಯಾಣಿಕರನ್ನು ಕರೆದೊಯ್ಯಲಾಗುತ್ತಿದೆ. ಇದರಿಂದ ಆಟೊ ಚಾಲಕರಿಗೆ ಭಾರಿ ನಷ್ಟ ಆಗುತ್ತಿದೆ' ಎಂದು ದೂರಿದರು.

ಆಟೊ ಘಟಕದ ಪ್ರಧಾನ ಕಾರ್ಯದರ್ಶಿ ಉಸ್ಮಾನ್,'ಆಟೊ ಸೇರಿದಂತೆ ವಾಹನಗಳ ಚಾಲಕರಿಗೆ ಸರ್ಕಾರದಿಂದ ಯಾವುದೇ ಸವಲತ್ತುಗಳು ಸಿಗುತ್ತಿಲ್ಲ. ಆಂಧ್ರ ಪ್ರದೇಶದ ಮಾದರಿಯಲ್ಲಿ ಚಾಲಕರಿಗೆ ಇಎಸ್‌ಐ ಸೌಲಭ್ಯ ನೀಡಬೇಕು. ವಸತಿರಹಿತರಿಗೆ ನಿವೇಶನಗಳನ್ನು ನೀಡಬೇಕು. ಈ ಬೇಡಿಕೆಗಳನ್ನು ಈಡೇರಿಸದಿದ್ದರೆ, ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಸಿದರು.

ವೈದ್ಯ ಸೂರಿರಾಜುಗೆ 'ಗೋಲ್ಡನ್ ಬುಕ್' ಪುರಸ್ಕಾರ



ಡಾ.ವಿ. ಸೂರಿರಾಜು

ಬೆಂಗಳೂರು: ರೀಗಲ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ವಿ. ಸೂರಿರಾಜು ಬರೆದಿರುವ 'ಕಿಡ್ನಿ ಸೀಕ್ರೆಟ್ಸ್ ರಿವೀಲ್ಡ್' ಪುಸ್ತಕಕ್ಕೆ 2022ನೇ ಸಾಲಿನ 'ಗೋಲ್ಡನ್ ಬುಕ್' ಪುರಸ್ಕಾರ ಲಭಿಸಿದೆ.

'ಸೂರಿರಾಜು ಅವರು ಮೂತ್ರಪಿಂಡಗಳ ಕುರಿತು ತಮ್ಮ ಕೃತಿಯಲ್ಲಿ ಸಾಮಾನ್ಯ ಜನರಿಗೆ ಅರ್ಥವಾಗುವ ಹಾಗೆ ಬರೆದಿದ್ದಾರೆ. ಹೀಗಾಗಿಯೇ ಭಾರತದ ಅತ್ಯುತ್ತಮ ಲೇಖಕರಿಗೆ ಕೊಡಲಾಗುವ ಪ್ರಶಸ್ತಿ ಅವರಿಗೆ ಸಂದಿದೆ' ಎಂದು ಪ್ರಕಟಣೆ ತಿಳಿಸಿದೆ.

'ಪ್ರಶಸ್ತಿಗೆ ಜಗತ್ತಿನ ವಿವಿಧ ಭಾಗಗಳಿಂದ ಒಟ್ಟು 5 ಸಾವಿರಕ್ಕೂ ಹೆಚ್ಚು ಕೃತಿಗಳು ಬಂದಿದ್ದವು. ಈ ಪೈಕಿ ಸೂರಿರಾಜು ಕೃತಿ ಸೇರಿ 35 ಪುಸ್ತಕಗಳು ಪ್ರಶಸ್ತಿಗೆ ಆಯ್ಕೆಯಾಗಿವೆ' ಎಂದು ಹೇಳಿದೆ.

ವಿದ್ಯಾರ್ಥಿಗಳ ಮೇಲೆ ಹಲ್ಲೆ: ಖಂಡನೆ

ಬೆಂಗಳೂರು: ಪ್ರತಿಭಟನೆ ನಡೆಸುತ್ತಿದ್ದ ಎಬಿವಿಪಿ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿರುವುದು ಖಂಡನೀಯ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದ್ದಾರೆ.

ಬೆಂಗಳೂರು ಜ್ಞಾನಭಾರತಿ ವಿಶ್ವವಿದ್ಯಾಲಯ ಸಾವಿರಾರು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪರೀಕ್ಷಾ ಫಲಿತಾಂಶ ಪ್ರಕಟಿಸದಿರುವ ಮತ್ತು ಇತರೆ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು. ಈ ಸಂದರ್ಭದಲ್ಲಿ ಪೊಲೀಸರು ಕೌರ್ಯದಿಂದ ನಡೆದುಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಸಫಾಯಿ ಕರ್ಮಚಾರಿ ನಿಗಮಕ್ಕೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮಲ ಹೊರುವ ಪದ್ಧತಿ ಮನುಕುಲದ ಮೌಲ್ಯಕ್ಕೆ ಅಪಚಾರ ಎಸಗಿದಂತೆ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, 'ಶೌಚಗುಂಡಿ ಸ್ವಚ್ಛಗೊಳಿಸುವ ಉದ್ಯೋಗ ನಿಷೇಧ ಮತ್ತು ಪುನರ್ವಸತಿ ಕಾಯ್ದೆಯ ನಿಯಮಗಳನ್ನು ರಾಜ್ಯದಾದ್ಯಂತ ಸಮರೋಪಾದಿಯಲ್ಲಿ ಜಾರಿಗೊಳಿಸಬೇಕು' ಎಂದು ಖಡಕ್ ಆದೇಶ ನೀಡಿದೆ.

'ಸಹಾಯ ಧನ ಒದಗಿಸಲು ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಆಂಟೋನಿ ಸೇರಿದಂತೆ ಕೋಲಾರ ಜಿಲ್ಲೆಯ 44 ಸಫಾಯಿ ಕರ್ಮಚಾರಿಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಅರ್ಜಿದಾರರು 2018ರಲ್ಲಿಯೇ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಈವರೆಗೂ ನೀವು ಅವರ ಅರ್ಜಿಗಳನ್ನು ಪರಿಗಣಿಸಿ ಸಹಾಯ ಧನ ಬಿಡುಗಡೆ ಮಾಡಿಲ್ಲ. ಹೈಕೋರ್ಟ್ ಸೂಚನೆ ನೀಡಿದ್ದರೂ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ' ಎಂದು ನ್ಯಾಯಪೀಠ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವಿರುದ್ಧ ಕಿಡಿ ಕಾರಿದೆ.

'ಈ ಅನಿಷ್ಠ ಪದ್ಧತಿಯನ್ನು ಕೊನೆಗೊಳಿಸಲು ಇಷ್ಟು ವರ್ಷಗಳಾದರೂ ನೀವು ಏನೂ ಮಾಡಿಲ್ಲ. ಅರ್ಜಿದಾರರಿಗೆ ಸಹಾಯ ಧನ ಕಲ್ಪಿಸುವ ಸಂಬಂಧ ಎರಡು ವಾರಗಳಲ್ಲಿ ಕ್ರಮ ಕೈಗೊಳ್ಳಬೇಕು. ತಪ್ಪಿದರೆ ನ್ಯಾಯಾಂಗ ನಿಂದನೆ ದಾಖಲಿಸಿಕೊಂಡು ಸಫಾಯಿ ಕರ್ಮಚಾರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಜೈಲಿಗೆ ಕಳುಹಿಸಲಾಗುವುದು' ಎಂದು ನ್ಯಾಯಪೀಠ ಎಚ್ಚರಿಕೆ ನೀಡಿದೆ.

ಅತ್ಯಾಚಾರ: ಎಎಸ್‌ಐಗೆ 20 ವರ್ಷ ಕಠಿಣ ಶಿಕ್ಷೆ

ಪ್ರಜಾವಾಣಿ ವಾರ್ತೆ

ತುಮಕೂರು: ಐದು ವರ್ಷದ ಹಿಂದೆ ಬುದ್ಧಿಮಾಂದ್ಯ ಮಹಿಳೆ ಮೇಲೆ ಅತ್ಯಾಚಾರ ನಡೆಸಿದ್ದ ಸಹಾಯಕ ಸಬ್‌ಇನ್‌ಸ್ಪೆಕ್ಟರ್ ಆಗಿದ್ದ ಎಸ್.ಉಮೇಶ್‌ಗೆ ಇಲ್ಲಿಯ ಎರಡನೇ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯವು ಸೋಮವಾರ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿದೆ.

ದಂಡದ ಮೊತ್ತವನ್ನು ಮೇಲ್ಮನವಿ ಅವಧಿ ಮುಗಿದ ಬಳಿಕ ಸಂತ್ರಸ್ತೆಗೆ ನೀಡುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಪರಿಹಾರ ನಿಗದಿಪಡಿಸಲು ಪ್ರಕರಣದ ಕಡತವನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ.

ಘಟನೆಯ ನಂತರ ಉಮೇಶ್‌ನನ್ನು ಬಂಧಿಸಲಾಗಿದ್ದು, ಅಂದಿನಿಂದ ಜೈಲಿನಲ್ಲೇ ಇದ್ದಾನೆ. ಜೈಲಿನಲ್ಲಿ ಇರುವ ಅವಧಿಯನ್ನು ಕಳೆದು ಉಳಿದ ಅವಧಿಯ ಶಿಕ್ಷೆ ಅನುಭವಿಸಬೇಕಿದೆ.

ವಿವರ: 2017ರ ಜನವರಿ 15ರಂದು ನಸುಕಿನ ಜಾವ ನಗರದ ಅಂತರಸನಹಳ್ಳಿ ಸೇತುವೆ ಬಳಿ ನಡೆದುಕೊಂಡು ಹೊರಟಿದ್ದ ಮಹಿಳೆಯನ್ನು ಆಕೆಯ ಮನೆಗೆ ಬಿಡುವ ನೆಪದಲ್ಲಿ ಅತ್ಯಾಚಾರ ನಡೆಸಿದ್ದ. ಈ ಘಟನೆ ರಾಜ್ಯಮಟ್ಟದಲ್ಲಿ ಸದ್ದು ಮಾಡಿತ್ತು.

ಸಂಕ್ರಾಂತಿ ಹಬ್ಬದ ದಿನ ರಾತ್ರಿ ಮಹಿಳೆ ಕೋಟೆ ಆಂಜನೇಯ ದೇವಸ್ಥಾನಕ್ಕೆ ಬಂದಿದ್ದರು. ಮನೆಯಿಂದ ನಡೆದುಕೊಂಡು ಬರುವಷ್ಟರಲ್ಲಿ ದೇವಸ್ಥಾನ ಮುಚ್ಚಿದ್ದರಿಂದ ಸುಸ್ತಾಗಿ ಮೆಟ್ಟಿಲುಗಳ ಮೇಲೆ ಮಲಗಿದ್ದರು. ಎಚ್ಚರವಾದಾಗ ಕತ್ತಲೆಯಲ್ಲಿ ಯಾವ ಕಡೆಗೆ ಹೋಗಬೇಕು ಎಂಬುದು ತಿಳಿಯದೆ ಮಹಿಳೆ ಶಿರಾ ರಸ್ತೆಯಲ್ಲಿ ಹೊರಟಿದ್ದರು. ಅಂತರಸನಹಳ್ಳಿ ಸೇತುವೆ ಬಳಿ ರಾತ್ರಿ ಗಸ್ತಿನಲ್ಲಿದ್ದ ಗ್ರಾಮಾಂತರ ಠಾಣೆ ಎಎಸ್‌ಐ ಉಮೇಶ್ ಗಮನಿಸಿದ್ದ.

ಅಲ್ಲೇ ಬೈಕ್ ನಿಲ್ಲಿಸಿ, ಮಧುಗಿರಿ ಕಡೆಯಿಂದ ಬಂದ ವಾಹನದಲ್ಲಿದ್ದ ಮೂವರನ್ನು ಕೆಳಗೆ ಇಳಿಸಿದ್ದಾನೆ. ನಂತರ ಮಹಿಳೆಯನ್ನು ವಾಹನದಲ್ಲಿ ಹತ್ತಿಸಿಕೊಂಡು ನಗರದಲ್ಲಿ ಸುತ್ತಾಟ ನಡೆಸಿ, ವಾಹನದಲ್ಲೇ ಅತ್ಯಾಚಾರ ನಡೆಸಿದ್ದ. ನಂತರ ಮಹಿಳೆಯ ಮನೆಯವರಿಗೆ ಕರೆಮಾಡಿ, ಆಕೆಯನ್ನು ಬಿಟ್ಟು ಹೋಗಿದ್ದ. ಮನೆಯವರಿಗೆ ಮಹಿಳೆ ಅತ್ಯಾಚಾರದ ವಿಚಾರ ತಿಳಿಸಿದ್ದರು.

ನಂತರ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ ಘಟನೆಯನ್ನು ಮುಚ್ಚಿಹಾಕುವ ಪ್ರಯತ್ನ ಕೂಡ ನಡೆದಿತ್ತು. ರಾಜ್ಯಮಟ್ಟದಲ್ಲಿ ಸುದ್ದಿಯಾಗಿದ್ದರಿಂದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ನ್ಯಾಯಾಧೀಶ ಮಲ್ಲಿಕಾರ್ಜುನ ಸ್ವಾಮಿ ಈ ಆದೇಶ ನೀಡಿದ್ದಾರೆ. ಸರ್ಕಾರಿ ವಕೀಲರಾದ ವಿ.ಎ.ಕವಿತ ವಾದ ಮಂಡಿಸಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಕಾರ್ಮಿಕರು

ಐಟಿಐ ಕಾರ್ಮಿಕರಿಂದ ಉಪವಾಸ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐಟಿಐ ಆಡಳಿತ ಮಂಡಳಿಯು ಪ್ರಾದೇಶಿಕ ಕಾರ್ಮಿಕ ಆಯುಕ್ತರು ನೀಡಿರುವ ಸೂಚನೆ ಪಾಲಿಸಬೇಕು. ವಜಾಗೊಳಿಸಿರುವ 80 ಮಂದಿಯನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು' ಎಂದು ಒತ್ತಾಯಿಸಿ ಐಟಿಐ ಕಾರ್ಮಿಕರು ಸೋಮವಾರ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

'ನಮ್ಮನ್ನು ಕಾನೂನು ಬಾಹಿರವಾಗಿ ಕೆಲಸದಿಂದ ವಜಾಗೊಳಿಸಿರುವ ಐಟಿಐ ಆಡಳಿತ ಮಂಡಳಿಯ ಕ್ರಮವನ್ನು ಖಂಡಿಸಿ ಅಹೋರಾತ್ರಿ ಧರಣಿ ನಡೆಸುತ್ತಿದ್ದೇವೆ. ಅದು 62ನೇ ದಿನಕ್ಕೆ ಕಾಲಿಟ್ಟಿದೆ. ಹೀಗಿದ್ದರೂ ಆಡಳಿತ ಮಂಡಳಿಯಿಂದ ಬೇಡಿಕೆ ಈಡೇರಿಸುವ ಭರವಸೆ ಸಿಕ್ಕಿಲ್ಲ. ಹೀಗಾಗಿ ಉಪವಾಸ ಸತ್ಯಾಗ್ರಹಕ್ಕೆ ಮುಂದಾಗಿದ್ದೇವೆ' ಎಂದು ಪ್ರತಿಭಟನಾಕಾರರು ತಿಳಿಸಿದ್ದಾರೆ.

'ಐಟಿಐ ಲಿಮಿಟೆಡ್ ಭಾರತದ ಮೊದಲ ಸಾರ್ವಜನಿಕ ವಲಯದ ಉದ್ದಿಮೆಯಾಗಿದೆ. ಸಂಘಟನೆ ಕಟ್ಟಿಕೊಂಡು ಆ ಮೂಲಕ ಕಾನೂನುಬದ್ಧ ಹಕ್ಕುಗಳಿಗೆ ಒತ್ತಾಯಿಸಿದ್ದಕ್ಕಾಗಿ ನಮ್ಮನ್ನು ಏಕಾಏಕಿ ಕೆಲಸದಿಂದ ವಜಾಗೊಳಿಸಲಾಗಿದೆ. ಸುಮಾರು 5 ಹಾಗೂ 30 ವರ್ಷಗಳಿಂದ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ್ದೇವೆ. ಹೀಗಿದ್ದರೂ ನಮ್ಮನ್ನು ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿದೆ' ಎಂದು ದೂರಿದ್ದಾರೆ.

'ಐಟಿಐ ಲಿಮಿಟೆಡ್, ಭಾರತದ ದೂರಸಂಪರ್ಕ ಹಾಗೂ ಸಂವಹನ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಸೂಕ್ಷ್ಮ ಹಾಗೂ ರಕ್ಷಣಾ ಸಂಬಂಧಿತ ಯೋಜನೆಗಳಲ್ಲಿ ಪ್ರಮುಖ ಪಾತ್ರ ನಿಭಾಯಿಸುತ್ತದೆ. ವಜಾಗೊಂಡಿರುವ ಕಾರ್ಮಿಕರು ಈ ಯೋಜನೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕೋವಿಡ್ ಮೊದಲ ಅಲೆಯ ವೇಳೆ 3 ಸಾವಿರಕ್ಕೂ ಅಧಿಕ ವೆಂಟಿಲೇಟರ್ ಹಾಗೂ ಫೇಸ್‌ಶೀಲ್ಡ್ ತಯಾರಿಕೆಯಲ್ಲಿ ಭಾಗಿಯಾಗಿದ್ದಾರೆ. ಸುದೀರ್ಘ ಸೇವೆ ಸಲ್ಲಿಸಿದ್ದರೂ ಅವರನ್ನು 'ಗುತ್ತಿಗೆ ಕಾರ್ಮಿಕರು' ಎಂದು ಬಿಂಬಿಸಲಾಗುತ್ತಿದೆ. ಅಗತ್ಯ ಮೂಲ ಸೌಕರ್ಯಗಳನ್ನು ನಿರಾಕರಿಸಲಾಗಿದೆ' ಎಂದು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ರಾಜ್ಯ ಸಮಿತಿ ಸದಸ್ಯೆ ಮೈತ್ರೇಯಿ ಕೃಷ್ಣನ್ ಆರೋಪಿಸಿದ್ದಾರೆ.

'ವಜಾಗೊಳಿಸಿರುವ ಎಲ್ಲಾ ಕಾರ್ಮಿಕರನ್ನೂ ಮರು ನೇಮಕ ಮಾಡಿಕೊಳ್ಳುವಂತೆ ಐಟಿಐ ಆಡಳಿತ ಮಂಡಳಿಗೆ ಪ್ರಾದೇಶಿಕ ಕಾರ್ಮಿಕ ಆಯುಕ್ತರು ಸೂಚನೆ ನೀಡಿದ್ದಾರೆ. ಸಂಘಟನೆ ಕಟ್ಟಿ ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಡುತ್ತಿರುವುದನ್ನು ಸಹಿಸದ ಆಡಳಿತ ಮಂಡಳಿ ಆಯುಕ್ತರ ಸೂಚನೆಗೂ ಮನ್ನಣೆ ನೀಡುತ್ತಿಲ್ಲ. ವಜಾಗೊಂಡಿರುವವರ ಪೈಕಿ ಬಹುತೇಕರು ದಲಿತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಹಲವು ಮಹಿಳೆಯರೂ ಇದ್ದಾರೆ. ವಜಾಗೊಂಡಿರುವವರ ಬದಲು ಹೊಸದಾಗಿ ಕಾರ್ಮಿಕರನ್ನು ನೇಮಿಸಿಕೊಳ್ಳಲು ಐಟಿಐ ಆಡಳಿತ ಮಂಡಳಿ ಮುಂದಾಗಿದೆ. ಇದು ಕಾನೂನು ಬಾಹಿರ ನಡೆ. ಇದನ್ನು ಸಹಿಸಲು ಸಾಧ್ಯವಿಲ್ಲ' ಎಂದು ತಿಳಿಸಿದ್ದಾರೆ.

ಜೀವ ಬೆದರಿಕೆ: ರಕ್ಷಣೆ ಕೋರಿದ ವಕೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಕಚೇರಿಯನ್ನು ಕೆಲ ವಕೀಲರೇ ಮುಂದೆ ನಿಂತು ಬಲವಂತವಾಗಿ ಹಾಗೂ ಕಾನೂನು ಬಾಹಿರವಾಗಿ ಖಾಲಿ ಮಾಡಿಸಿದ್ದಾರೆ. ನನಗೆ ಜೀವ ಬೆದರಿಕೆ ಇದೆ. ಆದ್ದರಿಂದ, ನನಗೆ ಅಗತ್ಯ ರಕ್ಷಣೆ ನೀಡಬೇಕು' ಎಂದು ಹೈಕೋರ್ಟ್ ವಕೀಲ ಎನ್. ಪಿ.ಅಮೃತೇಶ್ ಬೆಂಗಳೂರು ವಕೀಲರ ಸಂಘಕ್ಕೆ ಮನವಿ ಮಾಡಿದ್ದಾರೆ.

ಈ ಕುರಿತಂತೆ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಅವರಿಗೆ ಪತ್ರ ಬರೆದಿರುವ ಅಮೃತೇಶ್, 'ಕೂಡಲೇ ಮಧ್ಯಪ್ರವೇಶಿಸಿ ಅಗತ್ಯ ರಕ್ಷಣೆ ನೀಡಬೇಕು' ಎಂದು ಕೋರಿದ್ದಾರೆ.

'ನಾನು ಕಳೆದ 35 ವರ್ಷಗಳಿಂದ ಹೈಕೋರ್ಟ್‌ನಲ್ಲಿ ವಕೀಲಿಕೆ ಮಾಡುತ್ತಿದ್ದು, ಬೆಂಗಳೂರು ವಕೀಲರ ಸಂಘದ ಆಡಳಿತ ಮಂಡಳಿಯ (ಹೈಕೋರ್ಟ್ ಘಟಕ) ಸದಸ್ಯನೂ ಆಗಿದ್ದೇನೆ. ಇದೇ 29ರಂದು ಕೆಲ ಗೂಂಡಾಗಳು ಮಲ್ಲೇಶ್ವರ ಸಂಪಿಗೆ ರಸ್ತೆಯ 3ನೇ ತಿರುವಿನಲ್ಲಿರುವ ನನ್ನ ಕಚೇರಿಯ ಬಾಗಿಲು ಮುರಿದು, ಒಳ ನುಗ್ಗಿ ₹ 5 ಲಕ್ಷಕ್ಕೂ ಹೆಚ್ಚು ಮೌಲ್ಯದ ವಸ್ತುಗಳನ್ನು ಹೊತ್ತೊಯ್ದಿದ್ದಾರೆ. ಘಟನೆ ಬಗ್ಗೆ ಅರಿತ ನಾನು ಸ್ಥಳಕ್ಕೆ ಹೋಗಿ ಪರಿಶೀಲಿಸಲು ಮುಂದಾದಾಗ ಅಲ್ಲಿದ್ದ ಮಹಿಳೆಯೊಬ್ಬರು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಸುಳ್ಳು ಆಪಾದನೆ ಹೊರಿಸಿದರು' ಎಂದು ವಿವರಿಸಿದ್ದಾರೆ.

'ಈ ಎಲ್ಲಾ ಘಟನೆಗಳಿಂದ 61 ವರ್ಷ ವಯಸ್ಸಿನ ಹಿರಿಯ ನಾಗರಿಕನಾದ ನನಗೆ ತೀವ್ರ ಮುಜುಗರವಾಯಿತು. ಮಾನಸಿಕ ಸಂಕಟ ಮತ್ತು ಕಿರುಕುಳ ಸಹಿಸಲಾಗದೆ ರಾತ್ರಿ 10:50ರ ಸುಮಾರಿಗೆ ಪೊಲೀಸರಿಗೆ ಕರೆ ಮಾಡಿದೆ. ಅವರು ಕೇವಲ ಮಾತುಕತೆ ನಡೆಸುವ ಮೂಲಕ ಬಗೆಬಹರಿಸುವ ನಾಟಕವಾಡಿದರು. ಬೆಂಗಳೂರು ವಕೀಲರ ಸಂಘದ ಖಜಾಂಚಿ ಎಂ.ಟಿ.ಹರೀಶ್ ರಾತ್ರಿ 1 ಗಂಟೆಯವರೆಗೆ ಸ್ಥಳದಲ್ಲಿದ್ದರೂ ಸಮಸ್ಯೆ ಬಗೆಹರಿಯಲಿಲ್ಲ' ಎಂದು ತಿಳಿಸಿದ್ದಾರೆ.

ಬ್ಯಾಡರಹಳ್ಳಿ– ರಸ್ತೆ ಗುಂಡಿಯಿಂದಾಗಿ ಸಂಭವಿಸಿದ ಅಪಘಾತ

ಶಿಕ್ಷಕಿ ಸಾವು: ಪ್ರತಿಭಟನಕಾರರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿಯಿಂದಾಗಿ ಅಪಘಾತ ಸಂಭವಿಸಿ ಶಿಕ್ಷಕಿ ಶರ್ಮಿಳಾ (38) ಮೃತಪಟ್ಟಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿದ ಆಮ್ ಆದ್ಮಿ ಪಾರ್ಟಿಯ (ಎಎಪಿ) 50 ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಮಾಗಡಿಗೆ ಸಂಪರ್ಕ ಕಲ್ಪಿಸುವ ಬ್ಯಾಡರಹಳ್ಳಿ ಮುಖ್ಯರಸ್ತೆಯಲ್ಲಿ ಭಾನುವಾರ ಸಂಭವಿಸಿದ್ದ ಅಪಘಾತದಲ್ಲಿ ಶರ್ಮಿಳಾ ಮೃತಪಟ್ಟಿದ್ದರು. ಅಪಘಾತದ ಸ್ಥಳದಲ್ಲಿ ಸೋಮವಾರ ಸೇರಿದ್ದ ಎಎಪಿ ಕಾರ್ಯಕರ್ತರು, ಹೂವಿನ ಅಲಂಕಾರ ಮಾಡಿ ಪೂಜೆ ಸಲ್ಲಿಸಿ ಆಕ್ರೋಶ ಹೊರಹಾಕಿದರು.

‘ಬ್ಯಾಡರಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಗಳು ಹೆಚ್ಚಾಗಿವೆ. ಗುಂಡಿ ತಪ್ಪಿಸಲು ಹೋಗಿ ಅಪಘಾತವಾಗಿದ್ದರಿಂದ ಶರ್ಮಿಳಾ ಮೃತಪಟ್ಟಿದ್ದಾರೆ. ಆದರೆ, ಇದು ಅಪಘಾತವಲ್ಲ. ವ್ಯವಸ್ಥಿತ ಕೊಲೆ. ಇದಕ್ಕೆ ಬಿಬಿಎಂಪಿ, ಜಲಮಂಡಳಿ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಕಾರಣ’ ಎಂದು ಪ್ರತಿಭಟನಕಾರರು ಆರೋಪಿಸಿದರು.



ಪ್ರತಿಭಟನೆ ನಡೆಸುತ್ತಿದ್ದ ಆಪ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಎಳೆದೊಯ್ದರು – ಪ್ರಜಾವಾಣಿ ಚಿತ್ರ

ರಸ್ತೆಯಲ್ಲಿ ವಾಹನಗಳ ಸಂಚಾರ ತಡೆದು ಘೋಷಣೆ ಕೂಗಿದ್ದ ಕಾರ್ಯಕರ್ತರು, ಸಾವಿಗೆ ನ್ಯಾಯ ಸಿಗಬೇಕೆಂದು ಒತ್ತಾಯಿಸಿದರು. ಸ್ಥಳದಲ್ಲಿದ್ದ ಪೊಲೀಸರು, ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸದಂತೆ ಕೋರಿದರು. ಅದೇ ವಿಚಾರವಾಗಿ ಮಾತಿನ ಚಕಮಕಿ ನಡೆಯಿತು. ನಂತರ, ಪ್ರತಿಭಟನಕಾರರನ್ನು ವಶಕ್ಕೆ ಪಡೆದ ಪೊಲೀಸರು ಜೀಪಿನಲ್ಲಿ ಕರೆದೊಯ್ದರು.

‘ಸ್ಥಳೀಯ ಶಾಸಕರ ಪ್ರಭಾವಕ್ಕೆ ಒಳಗಾಗಿ ಪೊಲೀಸರು ಕಾರ್ಯಕರ್ತರನ್ನು ವಶಕ್ಕೆ ಪಡೆದಿದ್ದಾರೆ. ಶಿಕ್ಷಕಿ ಸಾವು ಖಂಡಿಸುವುದು ತಪ್ಪಾ. ಪ್ರತಿಭಟನೆ ನಡೆಸುವ ಹಕ್ಕು ನಮಗಿಲ್ಲವೇ ? ಪ್ರತಿಭಟನೆ ನಡೆಸಿದರೆ ವಶಕ್ಕೆ ಪಡೆಯುವುದು ಯಾವ ನ್ಯಾಯ’ ಎಂದು ಪ್ರತಿಭಟನಕಾರರು ಪ್ರಶ್ನಿಸಿದರು.

ರಸ್ತೆ ಅಪಘಾತಕ್ಕೆ ಶಿಕ್ಷಕಿ ಬಲಿ; ಇ.ಇ ನಂದೀಶ್ ಅಮಾನತು

ಬೆಂಗಳೂರು: ಬ್ಯಾಡರಹಳ್ಳಿ ಮುಖ್ಯರಸ್ತೆಯ ಅಂಜನಾನಗರ ವೃತ್ತದಲ್ಲಿ ಭಾನುವಾರ ಸಂಭವಿಸಿದ ಅಪಘಾತದಲ್ಲಿ ಶಿಕ್ಷಕಿ ಮೃತಪಟ್ಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಬಿಬಿಎಂಪಿ, ಇಲ್ಲಿನ ರಸ್ತೆಯ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳದ ಕಾರ್ಯಪಾಲಕ ಎಂಜಿನಿಯರ್ ಜೆ.ಆರ್. ನಂದೀಶ್ ಅವರನ್ನು ಸೇವೆಯಿಂದ ಅಮಾನತು ಮಾಡಿದೆ.

ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸೋಮವಾರ ಈ ಬಗ್ಗೆ ಆದೇಶ ಮಾಡಿದ್ದಾರೆ.

‘ಬಿಬಿಎಂಪಿಯ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ಅಗತ್ಯ ಇರುವ ಕಡೆ ಡಾಂಬರೀಕರಣ ನಡೆಸಲು ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸ್ವತಃ ಮುಖ್ಯಮಂತ್ರಿಯವರೇ ಹಲವಾರು ಸಭೆಗಳಲ್ಲಿ ಸೂಚನೆ ನೀಡಿದ್ದರು. ಆದರೆ, ರಾಜರಾಜೇಶ್ವರಿ ನಗರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ನಂದೀಶ್ ತಮ್ಮ ವ್ಯಾಪ್ತಿಯ ಬ್ಯಾಡರಹಳ್ಳಿ ಪ್ರದೇಶದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವಲ್ಲಿ ನಿರ್ಲಕ್ಷ್ಯ ತೋರಿದ್ದಾರೆ. ಜಲಮಂಡಳಿಯವರು ಕತ್ತರಿಸಿದ್ದ ರಸ್ತೆಯನ್ನು ದುರಸ್ತಿಗೊಳಿಸಲು ವಿಳಂಬ ಧೋರಣೆ ಅನುಸರಿಸಿದ್ದಾರೆ. ಅದರಿಂದಾಗಿ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಾಗಾಗಿ ಕರ್ತವ್ಯಲೋಪ ಎಸಗಿದ ನಂದೀಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ’ ಎಂದು ಆದೇಶದಲ್ಲಿ ಹೇಳಲಾಗಿದೆ.



ಜೆ.ಆರ್. ನಂದೀಶ್

‘ನಂದೀಶ್ ಅವರನ್ನು ಅಮಾನತುಗೊಳಿಸಲು ನಿನ್ನೆ ನಡೆದ ಅಪಘಾತ ಒಂದೇ ಕಾರಣವಲ್ಲ. ಅವರು ತಮ್ಮ ವ್ಯಾಪ್ತಿಯ ರಸ್ತೆಗಳ ಗುಂಡಿ ಮುಚ್ಚುವಲ್ಲಿ ನಿರ್ಲಕ್ಷ್ಯ ವಹಿಸಿದ್ದರು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ‘ಪ್ರಜಾವಾಣಿ’ಗೆ ತಿಳಿಸಿದರು.

‘ಎಲ್ಲ ಕಾರ್ಯಪಾಲಕ ಎಂಜಿನಿಯರ್‌ಗಳು ತಮ್ಮ ವ್ಯಾಪ್ತಿಯ ರಸ್ತೆ ಗುಂಡಿ ಮುಚ್ಚುವುದಕ್ಕೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು’ ಎಂದು ಅವರು ಸೂಚನೆ ನೀಡಿದರು.

ಬ್ಯಾಡರಹಳ್ಳಿ ಮುಖ್ಯ ರಸ್ತೆಯಲ್ಲಿ ಭಾನುವಾರ ಸಂಭವಿಸಿದ ಅಪಘಾತದಲ್ಲಿ ಶಿಕ್ಷಕಿ ಶರ್ಮಿಳಾ (38) ಎಂಬುವರು ಮೃತಪಟ್ಟಿದ್ದರು. ಅವರು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ರಸ್ತೆ ಗುಂಡಿಯ ಕಾರಣದಿಂದಾಗಿ ಆಯತಪ್ಪಿ ಬಿದ್ದಿದ್ದರು. ಅದೇ ವೇಳೆ ರಸ್ತೆಯಲ್ಲಿ ಸಾಗಿಬಂದ ಗೂಡ್ಸ್ ಲಾರಿ ಅವರ ತಲೆಯ ಮೇಲೆ ಹರಿದಿತ್ತು.

ಶ್ರೀಕಿ ಅರ್ಜಿ: ಇ.ಡಿಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ವಿದೇಶ ಪ್ರಯಾಣ ನಿರ್ಬಂಧಿಸಿ ಹ್ಯಾಕರ್ ಶ್ರೀಕಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿರುವ ಹಿಂಬರಹ ರದ್ದುಗೊಳಿಸಬೇಕು‘ ಎಂದು ಕೋರಿದ ಅರ್ಜಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಶ್ರೀಕಿ ಸಹೋದರ ಸುದರ್ಶನ ರಮೇಶ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, ಪ್ರತಿವಾದಿ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೂ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

’ಶ್ರೀಕಿ ಮೆಕ್ಯಾನಿಕಲ್ ಎಂಜಿನಿಯರ್ ಆಗಿದ್ದು, ದಕ್ಷಿಣ ನೆದರ್‌ಲೆಂಡ್‌ನ ಇಂಡೊವೆನ್ ನಗರದಲ್ಲಿ ಕೆಲಸ ಮಾಡುತ್ತಿದ್ದಾರೆ. ಡಚ್ ನಿವಾಸಿಯಾಗಿರಲು ಅವಕಾಶ ಪಡೆದಿರುವ ಆತನಿಗೆ ಆರು ತಿಂಗಳಿಗಿಂತಲೂ ಹೆಚ್ಚು ಕಾಲ ನೆದರ್‌ಲೆಂಡ್‌ನಿಂದ ಹೊರಗಿರಲು ಆಗುವುದಿಲ್ಲ. ಪಾರ್ಕಿನ್‌ಸನ್ ಕಾಯಿಲೆಯಿಂದ ಬಳಲುತ್ತಿರುವ ತನ್ನ ತಂದೆಯನ್ನು ನೋಡಲು ಶ್ರೀಕಿ ಕಳೆದ ವರ್ಷ ಆಗಸ್ಟ್ 12ರಂದು ಬೆಂಗಳೂರಿಗೆ ಬಂದಿದ್ದರು. ಇದೇ 13ರಂದು ನೆದರ್‌ಲೆಂಡ್‌ಗೆ ವಾಪಸು ತೆರಳಬೇಕಿತ್ತು. ಆದರೆ, ವಿದೇಶ ಪ್ರಯಾಣ ಕೈಗೊಳ್ಳದಂತೆ ಇದೇ 13ರಂದು ಶ್ರೀಕಿಗೆ ಇ.ಡಿ ಹಿಂಬರಹ ನೀಡಿದೆ. ಹೀಗಾಗಿ ವಿಮಾನ ನಿಲ್ದಾಣ ಅಧಿಕಾರಿಗಳು ಪ್ರಯಾಣಕ್ಕೆ ಅವಕಾಶ ನೀಡದೆ ತಡೆದಿದ್ದಾರೆ. ಇದು ಶ್ರೀಕಿಯ ಮೂಲಭೂತ ಹಕ್ಕಿನ ಉಲ್ಲಂಘನೆ‘ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ. ವಿಚಾರಣೆಯನ್ನು ಫೆಬ್ರುವರಿ 3ಕ್ಕೆ ಮುಂದೂಡಲಾಗಿದೆ. ಅರ್ಜಿದಾರರ ಪರ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ಹಾಜರಾಗಿದ್ದರು.

ಟೋಯಿಂಗ್ ಹೊಣೆ ಖಾಸಗಿ ಹೆಗಲಿಗೆ • ಗೃಹ ಸಚಿವ, ಕಮಿಷನರ್ ಆದೇಶಕ್ಕೂ ಕಿಮ್ಮತ್ತಿಲ್ಲ

‘ಟೋಯಿಂಗ್’ ಸುಲಿಗೆಗೆ ಜನಾಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳ ಸುಗಮ ಸಂಚಾರಕ್ಕಾಗಿ ಜಾರಿಯಲ್ಲಿರುವ ‘ಟೋಯಿಂಗ್’ ವ್ಯವಸ್ಥೆಯನ್ನು ಜನರ ಸುಲಿಗೆಗೆ ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಚಾಲ್ತಿಯಲ್ಲಿರುವ ನಿಯಮಗಳನ್ನು ಮೀರಿ ಕಾನೂನು ಬಾಹಿರವಾಗಿ ವಾಹನಗಳ ‘ಟೋಯಿಂಗ್’ ಮಾಡಲಾಗುತ್ತಿದ್ದು, ಕೆಲ ಸಂಚಾರ ಪೊಲೀಸರ ವರ್ತನೆಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಗರದ ಪ್ರಮುಖ ರಸ್ತೆಗಳಲ್ಲಿ ಸಂಚಾರಕ್ಕೆ ಅಡ್ಡಿಪಡಿಸುವ ಹಾಗೂ ನೋ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸುವ ವಾಹನಗಳನ್ನು ಎತ್ತಿಕೊಂಡು ಹೋಗಿ ದಂಡ ವಿಧಿಸಲು ಟೋಯಿಂಗ್ ವ್ಯವಸ್ಥೆ ಜಾರಿ ಮಾಡಲಾಗಿದೆ. ಖಾಸಗಿ ಏಜೆನ್ಸಿ ಮೂಲಕ ಸಂಚಾರ ಪೊಲೀಸರು, ವಾಹನಗಳನ್ನು ಟೋಯಿಂಗ್ ಮಾಡುತ್ತಿದ್ದಾರೆ.

ವಾಹನಗಳ ಟೋಯಿಂಗ್ ಮಾಡುವ ‘ಟೈಗರ್’ ವಾಹನದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರು ಹಾಗೂ ಏಜೆನ್ಸಿಗಳ ಸಿಬ್ಬಂದಿ ದುರ್ವರ್ತನೆ ತೋರುತ್ತಿದ್ದು, ಇದು ಇತ್ತೀಚಿನ ದಿನಗಳಲ್ಲಿ ಅಸಹನೀಯ ಹಾಗೂ ಅಮಾನವೀಯವಾಗುತ್ತಿದೆ ಎಂದು ಸಾರ್ವಜನಿಕರು ಸಿಟ್ಟಿನಿಂದ ಹೇಳುತ್ತಿದ್ದಾರೆ.

ಟೋಯಿಂಗ್ ವಾಹನದ ಪೊಲೀಸ್‌ಗೆ ಕಲ್ಲಿನಿಂದ ಹೊಡೆದರೆಂಬ ಕಾರಣಕ್ಕೆ ಅಂಗವಿಕಲ ಮಹಿಳೆಯನ್ನು ಬೂಟುಗಾಲಿನಿಂದ ಒದ್ದಿದ್ದ ಹಲಸೂರು ಗೇಟ್ ಸಂಚಾರ ಠಾಣೆ ಎಎಸ್‌ಐ ನಾರಾಯಣ ವಿರುದ್ಧ ಜನ ಕಿಡಿ ಕಾರಿದ್ದರು. ಟೋಯಿಂಗ್ ವ್ಯವಸ್ಥೆಯೇ ಅಕ್ರಮವಾಗಿರುವುದಾಗಿ ಆರೋಪಿಸಿದ್ದರು. ಇದರಿಂದ ಎಚ್ಚೆತ್ತ ಹಿರಿಯ ಅಧಿಕಾರಿಗಳು, ಘಟನೆ ಬಗ್ಗೆ ತನಿಖೆ ನಡೆಸಿ ಎಎಸ್‌ಐ ಅವರನ್ನು ಅಮಾನತು ಮಾಡಿದ್ದಾರೆ.

ಇಂದಿರಾನಗರದಲ್ಲಿ ಟೋಯಿಂಗ್ ವಾಹನದ ಹಿಂದೆಯೇ ಬೈಕ್ ಸವಾರರೊಬ್ಬರು ಓಡಿದ್ದ ಘಟನೆ ಬಗ್ಗೆಯೂ ಜನ ಸಿಟ್ಟು ತೋರಿದ್ದರು. ಟೋಯಿಂಗ್ ವಿಚಾರವಾಗಿ ಇಂಥ ಹಲವು ಘಟನೆಗಳು ನಗರದಲ್ಲಿ ನಡೆಯುತ್ತಿದ್ದು, ಕೆಲ ಸಂಚಾರ ಪೊಲೀಸರ ವರ್ತನೆಗೆ ಜನ ಬೇಸರಗೊಂಡಿದ್ದಾರೆ.

‘ಟೋಯಿಂಗ್ ಮುನ್ನ ವಾಹನದ ನೋಂದಣಿ ಸಂಖ್ಯೆಯನ್ನು ಮೈಕ್‌ನಲ್ಲಿ ಮೂರು ಸಲ ಕೂಗಬೇಕು. ಮಾಲೀಕರು ಸ್ಥಳದಲ್ಲೇ ಇದ್ದರೆ, ಅಲ್ಲಿಯೇ ದಂಡ ಕಟ್ಟಿಸಿಕೊಂಡು ವಾಹನ ಬಿಡಬೇಕು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹಾಗೂ ಕಮಿಷನರ್ ಕಮಲ್ ಪಂತ್ ಹಲವು ಬಾರಿ ಸೂಚನೆ ನೀಡಿದ್ದಾರೆ. ಇದಕ್ಕೆಲ್ಲ ಕಿಮ್ಮತ್ತು ನೀಡದ ಕೆಲ ಸಂಚಾರ ಪೊಲೀಸರು, ತಮ್ಮಿಷ್ಟದಂತೆ ಟೋಯಿಂಗ್ ಮಾಡುತ್ತಿದ್ದಾರೆ. ಮೈಕ್ ಇದ್ದರೂ ಕೂಗದೇ ವಾಹನಗಳನ್ನು ಎತ್ತಿಕೊಂಡು ಹೋಗುತ್ತಿದ್ದಾರೆ. ಸಂಚಾರ ನಿಯಮ ಉಲ್ಲಂಘನೆ ದಂಡ ಹಾಗೂ ಟೋಯಿಂಗ್ ಶುಲ್ಕದ ಹೆಸರಿನಲ್ಲಿ ಜನರಿಂದ ಹಣ ಸುಲಿಗೆ ಮಾಡುತ್ತಿದ್ದಾರೆ’ ಎಂದು ಸಾರ್ವಜನಿಕರು ಆರೋಪಿಸುತ್ತಿರುವುದು ನಗರದ ಎಲ್ಲ ವಲಯದಿಂದಲೂ ಕೇಳಿ ಬರುತ್ತಿದೆ.

‘ನೋ ಪಾರ್ಕಿಂಗ್ ಫಲಕವಿಲ್ಲದ ಕಡೆ ನಿಲ್ಲಿಸುವ ವಾಹನಗಳನ್ನೂ ಪೊಲೀಸರು ಟೋಯಿಂಗ್ ಮಾಡುತ್ತಿದ್ದಾರೆ. ಇದರ ವಿರುದ್ಧ ದೂರು ನೀಡಿದರೂ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ’ ಎಂದೂ ದೂರಿದರು.

ಪೊಲೀಸರಿಗೆ ಕಾನೂನು ಇಲ್ಲವೇ?: ‘ಟೋಯಿಂಗ್ ಹೇಗೆ ಮಾಡಬೇಕು? ಎಂಬುದಕ್ಕೆ ಕಾನೂನು ಇದೆ. ಆದರೆ, ತಮಗೆ ಸಂಬಂಧವಿಲ್ಲವೆಂಬಂತೆ ಪೊಲೀಸರು ವರ್ತಿಸುತ್ತಿದ್ದಾರೆ’ ಎಂದು ದೂರಿದರು.

‘ಟೋಯಿಂಗ್ ವ್ಯವಸ್ಥೆಯಲ್ಲಿ ಸಾಕಷ್ಟು ಲೋಪಗಳಿವೆ. ಪೊಲೀಸರ ವರ್ತನೆಯನ್ನು ಕೆಲವರಷ್ಟೇ ಪ್ರಶ್ನಿಸುತ್ತಿದ್ದರು. ಬಹುತೇಕರು, ವಾಗ್ವಾದ ಬೇಡವೆಂದು ದಂಡ ಕಟ್ಟಿ ವಾಹನ ಬಿಡಿಸಿಕೊಂಡು ಹೋಗುತ್ತಾರೆ’ ಎಂದು ಇಂದಿರಾನಗರದ ನಿವಾಸಿ ಆರ್. ಬಾಲರಾಜು ಹೇಳಿದರು.

‘ಮೆಜೆಸ್ಟಿಕ್, ಚಿಕ್ಕಪೇಟೆ, ಮೈಸೂರು ರಸ್ತೆ, ಇಂದಿರಾನಗರ, ಎಸ್‌ಪಿ ರಸ್ತೆ, ಕೆ.ಆರ್. ಮಾರುಕಟ್ಟೆ, ಮಲ್ಲೇಶ್ವರ, ಕಲಾಸಿಪಾಳ್ಯ, ಬಸವನಗುಡಿ, ರಾಜಾಜಿನಗರ, ಯಶವಂತಪುರ ಹಾಗೂ ಇತರೆ ಕಡೆ ಅಕ್ರಮವಾಗಿ ಟೋಯಿಂಗ್ ಮಾಡಲಾಗುತ್ತಿದೆ’ ಎಂದೂ ತಿಳಿಸಿದರು.

ವ್ಯವಸ್ಥೆ ಸುಧಾರಣೆ ಅಗತ್ಯ: ‘ಟೋಯಿಂಗ್ ಸಿಬ್ಬಂದಿಯಿಂದ ಸಾರ್ವಜನಿಕರಿಗೆ ಆಗುತ್ತಿರುವ ಕಿರುಕುಳವನ್ನು ತಪ್ಪಿಸಬೇಕಿದೆ. ಟೋಯಿಂಗ್ ವ್ಯವಸ್ಥೆ ಸುಧಾರಣೆ ಮಾಡಬೇಕಾದ ಅಗತ್ಯವಿದೆ’ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ದ್ವಿಚಕ್ರ ವಾಹನವನ್ನು ಸಿಬ್ಬಂದಿ ಟೋಯಿಂಗ್ ಮಾಡಿದರು – ಸಂಗ್ರಹ ಚಿತ್ರ

ಟೋಯಿಂಗ್ ಕಿರಿಕಿರಿ: ನೀವೂ ಬರೆಯಿರಿ

ಟೋಯಿಂಗ್ ಹೆಸರಿನಲ್ಲಿ ಸುಲಿಗೆ, ಕಿರಿಕಿರಿಗೆ ಒಳಗಾಗಿದ್ದರೆ ನಿಮ್ಮ ಅಭಿಪ್ರಾಯವನ್ನು ಬರೆದು ಕಳುಹಿಸಿ. ಎಲ್ಲಿ, ಯಾವಾಗ ನಡೆಯಿತು ಎಂಬ ವಿವರ ಇರಲಿ. ಜತೆಗೆ ನಿಮ್ಮದೊಂದು ಫೋಟೋ, ಮೊಬೈಲ್ ನಂಬರ್, ವಿಳಾಸ ಇರುವುದು ಅಗತ್ಯ. ಗರಿಷ್ಠ ಪದ ಮಿತಿ 100 ಪದಗಳು

ವಾಟ್ಸ್ ಆ್ಯಪ್ ಸಂಖ್ಯೆ 9606038256

‘ನಿಯಮಾವಳಿಯಲ್ಲಿ ತಿದ್ದುಪಡಿ’

‘ಟೋಯಿಂಗ್ ವ್ಯವಸ್ಥೆ ಬಗ್ಗೆ ಹೆಚ್ಚು ದೂರುಗಳು ಬರುತ್ತಿವೆ. ಟೋಯಿಂಗ್ ನಿಯಮಾವಳಿಯಲ್ಲಿ ಕೆಲ ತಿದ್ದುಪಡಿ ತರಲು ಚಿಂತನೆ ನಡೆದಿದ್ದು, ಈ ಬಗ್ಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿದೆ’ ಎಂದು ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿ ಅವರು, ‘ಕೆಲ ಸಿಬ್ಬಂದಿ ಅವೈಜ್ಞಾನಿಕವಾಗಿ ಟೋಯಿಂಗ್ ಮಾಡುತ್ತಿರುವ ಹಾಗೂ ಸಾರ್ವಜನಿಕರ ಮೇಲೆ ದಬ್ಬಾಳಿಕೆ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ತಪ್ಪಿತಸ್ಥ ಪೊಲೀಸರ ಮೇಲೆಯೇ ದೂರು ದಾಖಲಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು’ ಎಂದರು.

‘ಟೋಯಿಂಗ್’ ತಾತ್ಕಾಲಿಕ ಬಂದ್

ಜನರ ವಿರೋಧ ವ್ಯಕ್ತವಾಗುತ್ತಿರುವುದರಿಂದ, ವಾಹನಗಳನ್ನು ಟೋಯಿಂಗ್ ಮಾಡುವುದನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ. ಟೋಯಿಂಗ್ ‘ಟೈಗರ್’ ವಾಹನಗಳು ನಗರದಲ್ಲಿ ಸೋಮವಾರ ಎಲ್ಲಿಯೂ ಸಂಚರಿಸಲಿಲ್ಲ.

‘ಟೋಯಿಂಗ್ ವ್ಯವಸ್ಥೆ ಸುಧಾರಣೆ ಹೇಗೆ ? ಹಾಗೂ ಪೊಲೀಸರು ಜನರ ಜೊತೆ ಹೇಗೆ ನಡೆದುಕೊಳ್ಳಬೇಕು’ ಎಂಬುದನ್ನು ತಿಳಿಸಲು ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರು ಸೋಮವಾರ ಸಭೆ ನಡೆಸಿದರು. ನಗರದ ಎಲ್ಲ ಸಂಚಾರ ಠಾಣೆಗಳ ಎಎಸ್‌ಐ, ಪಿಎಸ್‌ಐ, ಇನ್‌ಸ್ಪೆಕ್ಟರ್, ಎಸಿಪಿ ಹಾಗೂ ಡಿಸಿಪಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಸಭೆಯಲ್ಲಿ, ಸಂಚಾರ ಸಮಸ್ಯೆಗಳ ಬಗ್ಗೆಯೂ ಚರ್ಚಿಸಲಾಯಿತು.

ನೀತಿ ಪರಿಷ್ಕರಣೆಗೆ ಸಿಎಂ ಸೂಚನೆ

ಬೆಂಗಳೂರು: ವಾಹನಗಳ ಟೋಯಿಂಗ್ ನೀತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಟೋಯಿಂಗ್ ವೈಖರಿ ಮತ್ತು ಸಂಚಾರ ಪೊಲೀಸರ ವರ್ತನೆಯ ಬಗ್ಗೆ ಸಾರ್ವಜನಿಕವಾಗಿ ಭಾರಿ ಟೀಕೆಗಳು ಬಂದ ಕಾರಣ ಮುಖ್ಯಮಂತ್ರಿಯವರು ಸೋಮವಾರ ಪೊಲೀಸ್ ಅಧಿಕಾರಿಗಳ ಸಭೆಯನ್ನು ಕರೆದಿದ್ದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ’ಟೋಯಿಂಗ್ ನೀತಿ ಪರಿಷ್ಕರಣೆ, ಪಾರ್ಕಿಂಗ್ ಅಲ್ಲದ ಜಾಗಗಳಲ್ಲಿ ಪಾರ್ಕಿಂಗ್ ಮಾಡಿದರೆ ಬೇರೆ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು’ ಎಂದು ಹೇಳಿದರು.

ಮುಖ್ಯಮಂತ್ರಿಯವರ ಸೂಚನೆಯ ಮೇರೆಗೆ ಕೆಲವು ಬದಲಾವಣೆಗಳನ್ನು ತರಲು ಉದ್ದೇಶಿಸಿದ್ದೇವೆ. ಟೋಯಿಂಗ್ ವಾಹನಗಳ ನಿಯಂತ್ರಣ ಮಾಡುವಂತೆಯೂ ಸೂಚಿಸಿದ್ದಾರೆ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ರವಿಕಾಂತೇಗೌಡ ತಿಳಿಸಿದರು.

ಟೋಯಿಂಗ್: ವಿಡಿಯೊ ಚಿತ್ರೀಕರಿಸಿದ್ದವರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೈಕ್ ಬಿಡಿಸಿಕೊಳ್ಳಲು ಟೋಯಿಂಗ್ ವಾಹನದ ಹಿಂದೆ ಸವಾರರೊಬ್ಬರು ಓಡಿದ್ದ’ ವಿಡಿಯೊ ಚಿತ್ರೀಕರಿಸಿದ್ದ ಹರೀಶ್‌ಗೌಡ ಗುಂಡಗಲ್ ಎಂಬುವರಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಬಗ್ಗೆ ತನಿಖೆ ನಡೆಸಿದ್ದ ಡಿಸಿಪಿ ನೇತೃತ್ವದ ತಂಡ, ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರಿಗೆ ವರದಿ ನೀಡಿದೆ.

‘ವಿಡಿಯೊವನ್ನು ತಿರುಚಿ ಟೋಯಿಂಗ್ ವ್ಯವಸ್ಥೆ ಬಗ್ಗೆ ಜನರಲ್ಲಿ ತಪ್ಪು ಅಭಿಪ್ರಾಯ ಮೂಡುವಂತೆ ಮಾಡಲಾಗಿದೆ. ಇದೊಂದು ಪ್ರಚೋದನಾತ್ಮಕ ಹಾಗೂ ತಿರುಚಿದ ವಿಡಿಯೊ’ ಎಂಬ ಅಂಶ ವರದಿಯಲ್ಲಿದೆ. ಅದನ್ನು ಆಧರಿಸಿ ರಾಜಕೀಯ ಪಕ್ಷವೊಂದರ ಕಾರ್ಯಕರ್ತ ಎನ್ನಲಾದ ಹರೀಶ್ ಗೌಡ ಅವರಿಗೆ ನೋಟಿಸ್ ನೀಡಲಾಗಿದೆ. ನಿಗದಿತ ದಿನದಂದು ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ.

‘ಜೀವನ್‌ಬಿಮಾನಗರ ಸಂಚಾರ ಠಾಣೆ ವ್ಯಾಪ್ತಿಯ ಇಂದಿರಾನಗರದಲ್ಲಿ ಫ್ಲಿಪ್‌ಕಾರ್ಟ್ ಡೆಲಿವರಿ ಬಾಯ್ ಎಸ್.ಜೆ. ಅಬ್ರಾಹಿಂ, ನೋ ಪಾರ್ಕಿಂಗ್ ಜಾಗದಲ್ಲಿ ಬೈಕ್ ನಿಲ್ಲಿಸಿದ್ದರು. ಮೂರು ಬಾರಿ ಮೈಕ್‌ನಲ್ಲಿ ಕೂಗಿದ್ದ ಪೊಲೀಸರು, ಸವಾರ ಬಾರದಿದ್ದರಿಂದ ಬೈಕ್ ಟೋಯಿಂಗ್ ಮಾಡಿದ್ದರು’ ಎಂದು ರವಿಕಾಂತೇಗೌಡ ಹೇಳಿದರು.

‘ಟೋಯಿಂಗ್ ವಾಹನ ಸ್ವಲ್ಪ ಮುಂದಕ್ಕೆ ಹೋಗುತ್ತಿದ್ದಂತೆ ಸವಾರ ಓಡೋಡಿ ಬಂದಿದ್ದರು. ಸ್ವಲ್ಪ ದೂರಕ್ಕೆ ಹೋಗಿ ವಾಹನ ನಿಲ್ಲಿಸಿದ್ದ ಪೊಲೀಸರು, ಸವಾರನಿಗೆ ಎಚ್ಚರಿಕೆ ನೀಡಿ ಬೈಕ್ ಬಿಟ್ಟು ಕಳುಹಿಸಿದ್ದರು. ಆತನಿಂದ ಯಾವುದೇ ದಂಡವನ್ನೂ ಕಟ್ಟಿಸಿಕೊಂಡಿಲ್ಲ. ವಾಸ್ತವ ಸಂಗತಿಯನ್ನು ಮುಚ್ಚಿಟ್ಟು, ತಿರುಚಿದ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡಲಾಗಿದೆ. ಈ ಅಪಪ್ರಚಾರದ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದೂ ತಿಳಿಸಿದರು.

ದಾಸರೆಂದರೆ ಪುರಂದರದಾಸರಯ್ಯಾ



ಇಂದು ಆರಾಧನೆ

‘ದಾಸರೆಂದರೆ ಶ್ರೀ ಪುರಂದರದಾಸರಯ್ಯಾ’ ಎಂದು ಹೇಳಿದವರು ದಾಸರ ದೀಕ್ಷಾಗುರುಗಳಾದ ಶ್ರೀ ವ್ಯಾಸರಾಜರು. ಇದನ್ನು ಅವರು ಕೇವಲ ಬಾಯಿಮಾತಿನಲ್ಲಿ ಮಾತ್ರ ಹೇಳದೆ ಕೀರ್ತನೆಯನ್ನು ಕಟ್ಟಿ ಹಾಡಿದರು. ಗುರುಗಳೇ ತಮ್ಮ ಶಿಷ್ಯನ ಗುಣಸ್ವಭಾವಗಳನ್ನು ಮೆಚ್ಚಿಕೊಂಡು ಶ್ಲಾಘನೆ ಮಾಡುವುದು ಅಪರೂಪವಾದದ್ದು. ಈ ಕೀರ್ತನೆಯಲ್ಲಿ ವ್ಯಾಸರಾಜರು ‘ಹರಿದಾಸರು ಹೇಗಿರಬೇಕು ಮತ್ತು ಹೇಗಿರಬಾರದು’ ಎಂಬುದನ್ನು ಹೆಜ್ಜೆ ಹೆಜ್ಜೆಗೂ ಧ್ವನಿಪೂರ್ಣ ಉಪಮೆಗಳೊಂದಿಗೆ ಉಲ್ಲೇಖಿಸುತ್ತ, ಪೂತಾತ್ಮ ಪುರಂದರರ ದಿವ್ಯದರ್ಶನವನ್ನು ಮಾಡಿಸುತ್ತಾರೆ.

ಪುರಂದರದಾಸರು ಕಣ್ಮರೆಯಾಗಿ ಈಗಾಗಲೇ ಐದು ಶತಮಾನಗಳೇ ಕಳೆದುಹೋಗಿವೆ. ಆದರೆ ಕನ್ನಡ ಹರಿದಾಸ ಸಾಹಿತ್ಯ, ಸಂಗೀತ ಮತ್ತು ಸಂಸ್ಕೃತಿಗಳಿಗೆ ದಾಸರು ಕೊಟ್ಟ ಕೊಡುಗೆ ಇನ್ನೂ ಹಚ್ಚಹಸಿರಾಗಿದೆ. ಕನ್ನಡ ಹರಿದಾಸ ಸಾಹಿತ್ಯ ಮತ್ತು ಕರ್ನಾಟಕ ಸಂಗೀತಗಳಿಗೆ ಈ ಹೊತ್ತಿಗೂ ಅವರು ಪಿತಾಮಹರು. ‘ಪುರಂದರ ವಿಠಲ’ ಎಂಬ ಅಂಕಿತದಲ್ಲಿ ದಾಸರು ರಚಿಸಿರುವ ಕೃತಿ, ಕೀರ್ತನೆಗಳು ಈಗಲೂ ಮನೆಮಾತಾಗಿವೆ. ತಿಳಿಗನ್ನಡದ ಸೌಂದರ್ಯವನ್ನೂ, ಸೊಗಸನ್ನೂ, ಅದರ ಸ್ವಾರಸ್ಯಕರ ನುಡಿಸಾಧ್ಯತೆಯನ್ನೂ ಹೆಚ್ಚಿಸಿವೆ. ಅವರ ಪವಿತ್ರಸ್ಮರಣೆ ‘ಕನ್ನಡತನ’ಕ್ಕೆ ಒಂದು ಸಮಗ್ರತೆಯನ್ನೂ ಸಾಫಲ್ಯವನ್ನೂ ತಂದುಕೊಟ್ಟಿದೆ.

ಪುರಂದರದಾಸರ ಬದುಕು ಮತ್ತು ಬೋಧೆ ಈ ಹೊತ್ತಿಗೂ ಪ್ರಸ್ತುತ. ಜನಮನದ ಕತ್ತಲನ್ನು ಕಳೆಯುವ ಅವುಗಳಲ್ಲಿರುವ ಪ್ರಸನ್ನತೆ, ಪ್ರಾಸಾದಿಕತೆ, ಪ್ರಫುಲ್ಲತೆ, ಸ್ವೋಪಜ್ಞತೆ, ಮನೋಜ್ಞತೆ, ಕಮನೀಯತೆ, ಪರಿಣಾಮಕಾರಿಯಾದ ದೇಸೀ ಅಭಿವ್ಯಕ್ತಿ ಮುಂತಾದವು ಅನುಪಮವಾದವು. ಸಂಸ್ಕೃತಭೂಯಿಷ್ಠವಾದ ವೇದಶಾಸ್ತ್ರ, ಪುರಾಣೋಪನಿಷತ್ತುಗಳನ್ನು ಪ್ರತಿಪಾದಿಸುವ ಸಾಂಪ್ರದಾಯಿಕ ಮತನಿಷ್ಠೆಯ ಮೂಸೆಯಲ್ಲಿ ಪುರಂದರರ ಸಾಹಿತ್ಯ ಅರಳಿದ್ದರೂ ಅಲ್ಲಿರುವ ಜನಪರಧೋರಣೆ ಮತ್ತು ಜಾನಪದೀಯ ಅಂಶಗಳು ಸರ್ವಜನಾಂಗದ ಸಾಹಿತ್ಯನಿಧಿಯಾಗಲು ಕಾರಣವಾಗಿವೆ. ದಾಸರ ಪ್ರತಿಯೊಂದು ಕೃತಿಯಲ್ಲಿಯೂ ಸಹಜತೆಯಿದೆ. ಬರೆಯಲೇಬೇಕೆಂಬ ಹಠದಿಂದ ತಿದ್ದಿ, ತೀಡಿ ಬರೆದ ಒಂದು ಸಾಲೂ ಅವರ ಕೃತಿಶ್ರೇಣಿಯಲ್ಲಿ ಕಂಡುಬರುವುದಿಲ್ಲ. ಬದುಕಿನ ವಿಕಸನಕ್ಕೆ ಅಗತ್ಯವಾಗದ ಒಂದು ಸಣ್ಣ ಪ್ರಸಂಗವನ್ನೂ ದಾಸರು ಉಲ್ಲೇಖಿಸುವುದಿಲ್ಲ. ಮರ್ತ್ಯಲೋಕದ ಯಥಾರ್ಥತೆಯ ನೆಲೆಗಟ್ಟಿನ ಮೇಲೆ ನಿಂತಿದ್ದರೂ ಬಾನೆತ್ತರಕ್ಕೆ ಪುಟಿಯುವ ಭಾವೋತ್ಕಟತೆಯ ವಿಶಿಷ್ಟ ಘಟ್ಟದಲ್ಲಿ ಮೂಡಿರುವ ಅವರ ಪ್ರತಿಯೊಂದು ಕೃತಿಯೂ ಅನುಭಾವದ ರಸಗಟ್ಟಿ.

ಪುರಂದರದಾಸರ ಎಂಬತ್ತೈದು ವರ್ಷಗಳ ತುಂಬುಜೀವನದಲ್ಲಿ ಮೂಗುತಿಯ ವೃತ್ತಾಂತವೂ ಸೇರಿದಂತೆ ಹಲವಾರು ಪವಾಡಸದೃಶ ಘಟನೆಗಳು ನಡೆದವೆಂಬ ಹೇಳಿಕೆಯಿದೆ. ಇಂತಹ ಪವಾಡದ ಕಥೆಗಳು ಏನೇ ಇರಲಿ; ಕಲ್ಪಿಸಿಕೊಳ್ಳಲಿಕ್ಕೂ ಆಗದಷ್ಟು ಅಗಾಧ ಪ್ರಮಾಣದ ಸಾಹಿತ್ಯವನ್ನು ಸೃಷ್ಟಿಸಿ, ಅಸಂಖ್ಯಾತ ಭಾವುಕರ ಬದುಕುಗಳನ್ನು ಹಸನುಗೊಳಿಸಿ, ಹರಿದಾಸ ಪಂಥದ ಆಧ್ವರ್ಯುವಾಗಿ, ಅದಕ್ಕೆ ಒಂದು ಓಘವನ್ನೂ ವೇಗವನ್ನೂ ನೀಡಿ ಮುನ್ನಡೆಸಿದ ದಾಸರ ಬದುಕೇ ಒಂದು ಪವಾಡ. ಅವರು ಪ್ರಾರಂಭಿಸಿದ ಹರಿದಾಸ ಪರಂಪರೆ ಈ ಹೊತ್ತಿಗೂ ಅವಿಚ್ಛಿನ್ನವಾಗಿ ನಡೆದು ಬರುತ್ತಿರುವುದು ಮತ್ತೊಂದು ಪವಾಡ.



ಸನ್ಮಾನ ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಬೆಂಗಳೂರು ಮೆಗಾಸಿಟಿ ಘಟಕವು ನಗರದಲ್ಲಿ ಆಯೋಜಿಸಿದ್ದ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಅವರನ್ನು ಸನ್ಮಾನಿಸಲಾಯಿತು. ಮಿಂಟೊ ಕಣ್ಣಿನ ಆಸ್ಪತ್ರೆಯ ನಿರ್ದೇಶಕಿ ಸುಜಾತಾ ರಾಥೋಡ್, ಸಂಘದ ಪದಾಧಿಕಾರಿಗಳಾದ ವೆಂಕಟೇಶ್, ಕುಮಾರ್ ನಾಯ್ಕ್, ಎಸ್.ಆರ್.ರಾಜಾನಾಯ್ಕ್, ಎ.ಆರ್.ಗೋವಿಂದಸ್ವಾಮಿ, ಕೆ.ಎಲ್.ಚವ್ಹಾಣ್, ಬಸವರಾಜ್ ಹಾಗೂ ಇತರರು ಇದ್ದಾರೆ.

ವರಕವಿ ಬೇಂದ್ರೆ ಅವರ 126ನೇ ಜನ್ಮದಿನ

‘ಬೇಂದ್ರೆ ಕಾವ್ಯ ಬೆಲ್ಲದ ಉಂಡೆ ಇದ್ದಂತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೇಂದ್ರೆಯವರ ಕಾವ್ಯ ಬೆಲ್ಲದ ಉಂಡೆ ಇದ್ದಂತೆ. ಅದನ್ನು ಯಾವ ಭಾಗದಿಂದ ಕಚ್ಚಿದರೂ ಸಿಹಿ ನೀಡುತ್ತದೆ’ ಎಂದು ಲೇಖಕ ಜಿ.ಬಿ. ಹರೀಶ ಅಭಿಪ್ರಾಯಪಟ್ಟರು.

ವರಕವಿ ಬೇಂದ್ರೆಯವರ 126ನೇ ಜನ್ಮದಿನದ ಅಂಗವಾಗಿ ದ.ರಾ.ಬೇಂದ್ರೆ ಕಾವ್ಯ ಕೂಟ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಿ.ಕೃಷ್ಣಪ್ಪ ಮತ್ತು ಟಿ.ಎನ್. ವಾಸುದೇವಮೂರ್ತಿ ಅವರ ‘ಅಂಬಿಕಾತನಯದತ್ತರ ಕನ್ನಡ ಮೇಘದೂತ- ಒಂದು ಸಹಪಯಣ’ ಪುಸ್ತಕ ಬಿಡುಗಡೆ ಮಾಡಿ ಸೋಮವಾರ ಮಾತನಾಡಿದರು.

‘ಬೇಂದ್ರೆ ಅವರು ಕನ್ನಡ ಕಾವ್ಯಕ್ಕೆ ವರವಾಗಿ ಬಂದವರು. ವೇದ, ಉಪನಿಷತ್ ಹಾಗೂ ಮಂತ್ರಗಳಿಗೆ ಬಹುದೊಡ್ಡ ಸ್ಥಾನವಿದೆ. ಆ ಸ್ಥಾನವನ್ನು ಕನ್ನಡದ ಕವಿತ್ವಕ್ಕೆ ತಂದುಕೊಟ್ಟವರು ಬೇಂದ್ರೆ. ಅವರ ಸಾಹಿತ್ಯವನ್ನು ವಿಮರ್ಶಿಸುವ ಕಾಲ ಮುಗಿದಿದೆ. ಅವುಗಳನ್ನು ವ್ಯಾಖ್ಯಾನಿಸಬೇಕಿರುವುದು ಈಗಿನ ತುರ್ತು ಅಗತ್ಯ’ ಎಂದರು.

‘ಬೇಂದ್ರೆ ಅವರು ಕವಿತ್ವವನ್ನು ವಿಕಾಸವನ್ನಾಗಿ ಮಾಡಿಕೊಂಡವರು. ಈ ಪುಸ್ತಕದಲ್ಲಿರುವ 52 ಪದ್ಯಗಳಿಗೂ ಸಾರಾಂಶ ನೀಡಲಾಗಿದೆ. ಪದ್ಯಗಳ ಜೊತೆಗೆ ಟಿಪ್ಪಣಿಗಳನ್ನೂ ಕೊಡಲಾಗಿದೆ. ಇವು ಬೇಂದ್ರೆಯವರ ಸಾಹಿತ್ಯಕ್ಕೆ ಹೊಂದುವಂತೆ, ಅವರ ಜೀವನ ತತ್ವಕ್ಕೆ ಅನುಗುಣವಾಗಿಯೇ ಇವೆ’ ಎಂದು ತಿಳಿಸಿದರು.

‘ಬೇಂದ್ರೆಯವರ ಹಲವು ಕವನ ಸಂಕಲನ, ನಾಟಕ, ತುಂಬಾ ಕಠಿಣ ಎನಿಸಿದ ಕಾವ್ಯಗಳನ್ನು ಅರ್ಥ ಮಾಡಿಕೊಳ್ಳಲು ಈ ಟಿಪ್ಪಣಿಗಳು ಸಹಾಯವಾಗುತ್ತವೆ. ಬೇಂದ್ರೆಯವರ ಕೃತಿಗಳನ್ನು ಹೊಸ ತಲೆಮಾರಿನವರು ಓದುವುದಕ್ಕೆ ಇಂತಹ ಪುಸ್ತಕಗಳು ನೆರವಾಗಲಿವೆ. ಈ ಕೃತಿಯ ಮೂಲಕ ಭಾರತೀಯ ವ್ಯಾಖ್ಯಾನ ಪದ್ಧತಿಯನ್ನು ಇಬ್ಬರು ಲೇಖಕರು ಎತ್ತಿ ಹಿಡಿದಿದ್ದಾರೆ’ ಎಂದು ಹೇಳಿದರು.

ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ, ‘ನಾವೆಲ್ಲ ಬೇಂದ್ರೆ ಹಾಗೂ ಅವರ ಕಾವ್ಯದ ಜೊತೆ ಸಹಪ್ರಯಾಣ ಮಾಡಬೇಕು. ಬೇಂದ್ರೆಯವರು ನಮ್ಮ ಜೊತೆ ಸದಾ ಇರುತ್ತಾರೆ. ಅವರನ್ನು ಆದರ್ಶವಾಗಿಟ್ಟುಕೊಂಡು ಕನ್ನಡ ಕಾವ್ಯ ಜಗತ್ತನ್ನು ವಿಸ್ತರಿಸಿಕೊಂಡು ಹೋಗಬೇಕು. ಆತ್ಮ ಹಾಗೂ ಕಾವ್ಯದ ಸಾಕ್ಷಾತ್ಕಾರ ಆಗಬೇಕಾದರೆ ವಿಮರ್ಶೆಯ ಬದಲು ವ್ಯಾಖ್ಯಾನದತ್ತ ಹೊರಳುವುದು ಅಗತ್ಯ’ ಎಂದರು.

ದ.ರಾ.ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆಯಲ್ಲಿ ಕ್ರಮವಾಗಿ ಮೊದಲ ಮೂರು ಬಹುಮಾನಗಳನ್ನು ಪಡೆದ ಸಂಶೋಧಕಿಯರಾದ ಶೈಲಜಾ ಹೆಗ್ಡೆ, ಕೆ.ವಿ.ಅನಿತ ಹಾಗೂ ಆಶಾ ಚೌಗಲೆ ಅವರನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು.

ಕೃತಿಯ ಲೇಖಕರಾದ ಜಿ.ಕೃಷ್ಣಪ್ಪ, ಟಿ.ಎನ್. ವಾಸುದೇವಮೂರ್ತಿ, ದ.ರಾ.ಬೇಂದ್ರೆ ಕಾವ್ಯ ಕೂಟದ ಉಪಾಧ್ಯಕ್ಷ ಶ್ರ.ದೇ.ಪಾರ್ಶ್ವನಾಥ್, ಎ.ಕೆ.ರವಿಶಂಕರ್, ಎಚ್.ಎಂ.ಮೋಹನ ಕುಮಾರ್, ಸಮಿಉಲ್ಲ ಖಾನ್, ಡಿ.ಪಿ.ಸುಪ್ರಿತಾ ಹಾಗೂ ಟಿ.ಎನ್.ನಂಜಪ್ಪ ಇದ್ದರು.

ಗೆದ್ದಲಹಳ್ಳಿ ಬಿಬಿಎಂಪಿ ಉದ್ಯಾನದಲ್ಲಿರುವ ಪ್ರತಿಮೆಗಳು • ಗ್ರಾಮಸ್ಥರ ಪ್ರತಿಭಟನೆ

ಅಂಬೇಡ್ಕರ್, ಕೆಂಪೇಗೌಡರ ಪ್ರತಿಮೆಗಳ ತೆರವಿಗೆ ಹುನ್ನಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಜಯನಗರ ಸಮೀಪದ ಗೆದ್ದಲಹಳ್ಳಿ ಬಿಬಿಎಂಪಿ ಉದ್ಯಾನದಲ್ಲಿರುವ ಬಿ.ಆರ್.ಅಂಬೇಡ್ಕರ್ ಮತ್ತು ಕೆಂಪೇಗೌಡರ ಪ್ರತಿಮೆಗಳನ್ನು ತೆರವು ಮಾಡಲು ಕೆಲವರು ಹುನ್ನಾರ ನಡೆಸಿದ್ದಾರೆ’ ಎಂದು ಆರೋಪಿಸಿ ಗೆದ್ದಲಹಳ್ಳಿ ಗ್ರಾಮಸ್ಥರು, ದಲಿತ ಮತ್ತು ಕೆಂಪೇಗೌಡರ ಸಂಘಟನೆಗಳು ಜಂಟಿಯಾಗಿ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದವು.

‘ಗೆದ್ದಲಹಳ್ಳಿ ಗ್ರಾಮಸ್ಥರ ಆಶಯದಂತೆ ಉದ್ಯಾನದಲ್ಲಿ ಅಂಬೇಡ್ಕರ್ ಮತ್ತು ಕೆಂಪೇಗೌಡರ ಪ್ರತಿಮೆಗಳನ್ನು ಅನಾವರಣಗೊಳಿಸಲಾಗಿತ್ತು. ಆದರೆ, ಕೆಲ ಕಿಡಿಗೇಡಿಗಳು ಹಾಗೂ ಅಂಬೇಡ್ಕರ್ ಮತ್ತು ಕೆಂಪೇಗೌಡರ ವಿರೋಧಿಗಳು ಪ್ರತಿಮೆಗಳನ್ನು ತೆರವುಗೊಳಿಸಬೇಕು ಎಂದು ಪಾಲಿಕೆ ಅಧಿಕಾರಿಗಳಿಗೆ ಒತ್ತಡ ಹಾಕಿ, ತಮ್ಮ ಸ್ವಾರ್ಥ ಸಾಧಿಸಲು ಮುಂದಾಗಿದ್ದಾರೆ’ ಎಂದು ಗೆದ್ದಲಹಳ್ಳಿ ಗ್ರಾಮಸ್ಥರು ದೂರಿದರು.

ಗ್ರಾಮಸ್ಥ ಹರೀಶ್ ಕುಮಾರ್, ‘ಉದ್ಯಾನದಲ್ಲಿ ಅಂಬೇಡ್ಕರ್ ಅವರ ಪ್ರತಿಮೆ ದಶಕಗಳಿಂದಲೇ ಇತ್ತು. ಅದು, ಹಾಳಾಗಿದ್ದರಿಂದ ಅದೇ ಜಾಗದಲ್ಲಿ ಹೊಸ ಪ್ರತಿಮೆ ನಿರ್ಮಿಸಲು ಸ್ಥಳೀಯರು ಹಾಗೂ ಸಂಘಟನೆಗಳ ಮುಖಂಡರು ನಿರ್ಧರಿಸಿದ್ದರು. ಅಂಬೇಡ್ಕರ್ ಅವರ ಜೊತೆಗೆ ಕೆಂಪೇಗೌಡರ ಪ್ರತಿಮೆ ನಿರ್ಮಿಸಲು ಒಮ್ಮತ ವ್ಯಕ್ತವಾಯಿತು. ಕ್ಷೇತ್ರದ ಶಾಸಕ ಬೈರತಿ ಸುರೇಶ್ ಅವರೂ ಇದಕ್ಕೆ ಸ್ಪಂದಿಸಿದರು’ ಎಂದರು.

‘ಎರಡು ವರ್ಷಗಳ ಹಿಂದೆಯೇ ಈ ಪ್ರತಿಮೆಗಳನ್ನು ಉದ್ಯಾನದಲ್ಲಿ ಇರಿಸಲಾಗಿತ್ತು. ಕೋವಿಡ್ ಕಾರಣದಿಂದ ಉದ್ಘಾಟನಾ ಕಾರ್ಯಕ್ರಮ ನಡೆಸಲು ಸಾಧ್ಯವಾಗಲಿಲ್ಲ. ಕಳೆದ ಡಿಸೆಂಬರ್‌ನಲ್ಲಿ ಪ್ರತಿಮೆಗಳನ್ನು ಅನಾವರಣಗೊಳಿಸಲಾಯಿತು. ಪ್ರತಿಮೆಗಳಿಗೆ ಆಶ್ರಯ ವ್ಯವಸ್ಥೆ ಕಲ್ಪಿಸಲು ಕೋರಿ ಪಾಲಿಕೆ ಅಧಿಕಾರಿಗಳ ಬಳಿ ತೆರಳಿದಾಗ, ಪ್ರತಿಮೆಗಳನ್ನೇ ತೆರವು ಮಾಡಲು ಸಿದ್ಧತೆ ನಡೆಸಿರುವ ವಿಚಾರ ತಿಳಿಯಿತು’ ಎಂದು ವಿವರಿಸಿದರು.

ಬಿ.ಆರ್.ಅಂಬೇಡ್ಕರ್ ಸಂಘದ ಸದಸ್ಯ ಆಂಜಿನಪ್ಪ, ‘ಎರಡು ವರ್ಷಗಳಿಂದ ಪ್ರತಿಮೆಗಳು ಅಲ್ಲೇ ಇದ್ದವು. ಉದ್ಘಾಟನೆಯಾದ ಬಳಿಕ ಈ ರೀತಿ ತೆರವು ಮಾಡಲು ಮುಂದಾಗಿರುವುದು ಖಂಡನೀಯ. ರಾಜಕೀಯ ಉದ್ದೇಶದಿಂದ ಪಾಲಿಕೆ ಅಧಿಕಾರಿಗಳಿಗೆ ಒತ್ತಡ ಹೇರಿ, ಪ್ರತಿಮೆ ತೆರವು ಮಾಡಲು ಸಂಚು ರೂಪಿಸಿದ್ದಾರೆ. ಯಾವುದೇ ಕಾರಣಕ್ಕೂ ಪ್ರತಿಮೆಗಳನ್ನು ತೆರವು ಮಾಡಬಾರದು’ ಎಂದರು.

ಪ್ರತಿಮೆಗಳನ್ನು ತೆರವು ಮಾಡಬಾರದು ಎಂದು ಆಗ್ರಹಿಸಿ ಗೆದ್ದಲಹಳ್ಳಿ ಗ್ರಾಮಸ್ಥರು ಹಾಗೂ ಬಿ.ಆರ್.ಅಂಬೇಡ್ಕರ್ ಸಂಘದ ಪದಾಧಿಕಾರಿಗಳು ಸಂಜಯನಗರ ಠಾಣೆಯ ಪೊಲೀಸ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಗ್ರಾಮಸ್ಥರು, ವಿವಿಧ ಸಂಘಟನೆಗಳ ಸದಸ್ಯರು ಗೆದ್ದಲಹಳ್ಳಿ ಬಿಬಿಎಂಪಿ ಉದ್ಯಾನದ ಬಳಿ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ಮನೆಗಳ ಗೇಟ್ ಮುಂದೆ ವಾಹನ: ಕ್ರಮಕ್ಕೆ ಒತ್ತಾಯ

ಬೆಂಗಳೂರು: ಜನ ವಸತಿ ಪ್ರದೇಶಗಳಲ್ಲಿ ಮನೆಗಳ ಗೇಟುಗಳ ಮುಂದೆ ವಾಹನಗಳನ್ನು ಸುಶಿಕ್ಷಿತರೇ ನಿಲ್ಲಿಸಿ ಅಂಗಡಿಗಳು, ರೆಸ್ಟೋರೆಂಟ್ ಮತ್ತು ಜಿಮ್‌ಗಳಿಗೆ ತೆರಳುತ್ತಿದ್ದಾರೆ. ಇದರಿಂದ, ನಿವಾಸಿಗಳಿಗೆ ತೊಂದರೆಯಾಗುತ್ತಿದೆ ಎಂದು ಜಯನಗರ ಸಂಚಾರ ಸಲಹಾ ಸಮಿತಿಯ ಮುಕುಂದ ದೂರಿದ್ದಾರೆ.

ಈ ಬಗ್ಗೆ ಅವರು ಸಂಚಾರ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ಮತ್ತು ಕೆಲವು ಸಲಹೆಗಳನ್ನು ನೀಡಿದ್ದಾರೆ.

ವಾಹನಗಳಿಂದಾಗಿ ನಿವಾಸಿಗಳು ಗೇಟ್ ತೆರೆಯಲು ಸಾಧ್ಯವಾಗದೆ ತಮ್ಮ ಮನೆ ಆವರಣದ ಒಳಗಿನ ವಾಹನಗಳನ್ನು ಹೊರಗೆ ತೆಗೆಯಲು ಸಹ ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

ಸಂಚಾರ ಪೊಲೀಸರು ಈ ವಾಹನಗಳ ಮಾಲೀಕರಿಗೆ ₹500 ದಂಡ ವಿಧಿಸಬಹುದು. ಇದರಿಂದ, ಪೊಲೀಸ್ ಇಲಾಖೆಗೂ ಆದಾಯವೂ ದೊರೆಯುತ್ತದೆ ಎಂದು ತಿಳಿಸಿದ್ದಾರೆ.

ಗೇಟ್‌ಗಳ ಮುಂದೆ ವಾಹನಗಳನ್ನು ನಿಲ್ಲಿಸದಂತೆ ಸೂಚಿಸುವ ಫಲಕಗಳನ್ನು ಸಂಚಾರ ಪೊಲೀಸರು ಅಳವಡಿಸಬೇಕು. ಜತೆಗೆ, ಮನೆಗಳ ಬೇಸ್‌ಮೆಂಟ್‌ಗಳನ್ನು ವಾಹನಗಳ ಪಾರ್ಕಿಂಗ್‌ಗೆ ಬಳಸಬೇಕು ಎಂದು ಸಲಹೆ ನೀಡಿದ್ದಾರೆ.

‘ಗೋರಖ್‌ಪುರ್ ಹಾಸ್ಪಿಟಲ್ ಟ್ರಾಜೆಡಿ’ ಪುಸ್ತಕ ಬಿಡುಗಡೆ

ಬೆಂಗಳೂರು: ಮೆಡಿಕಲ್ ಸರ್ವಿಸ್ ಸೆಂಟರ್ ವತಿಯಿಂದ ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವೈದ್ಯ ಕಫೀಲ್ ಖಾನ್ ಅವರು ಬರೆದಿರುವ ‘ಗೋರಖ್‌ಪುರ್ ಹಾಸ್ಪಿಟಲ್ ಟ್ರಾಜೆಡಿ’ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.


ಬಳಿಕ ಮಾತನಾಡಿದ ಕಫೀಲ್ ಖಾನ್,‘2017ರಲ್ಲಿ ಗೋರಖ್‌ಪುರದ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಆಮ್ಲಜನಕ ಲಭ್ಯವಾಗದೆ, ಮಕ್ಕಳು ಸೇರಿದಂತೆ ಹಲವರು ಮರಣ ಹೊಂದಿದರು. ಆ ದುರಂತದಲ್ಲಿ ಮೃತಪಟ್ಟವರಿಗೆ ಈ ಪುಸ್ತಕ ಅರ್ಪಿಸಿದ್ದೇನೆ. ಅವರ ಕಣ್ಣೀರ ಕಥೆಗಳನ್ನೂ ಪುಸ್ತಕದಲ್ಲಿ ಅನಾವರಣಗೊಳಿಸಿದ್ದೇನೆ’ ಎಂದರು.

‘ಸ್ವಂತ ಹಣದಿಂದ ರೋಗಿಗಳಿಗೆ ಆಮ್ಲಜನಕ ವ್ಯವಸ್ಥೆ ಮಾಡಿದ್ದೆ. ಈ ವಿಚಾರ ತಿಳಿದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನನ್ನನ್ನು ಕರೆದಿದ್ದರು. ಅವರು ನನ್ನ ಕೆಲಸಕ್ಕೆ ಬೆನ್ನು ತಟ್ಟುತ್ತಾರೆ ಎಂದು ಭಾವಿಸಿದ್ದೆ. ಆದರೆ, ಏಕವಚನದಲ್ಲಿ ನಿಂದಿಸಿದ್ದರು’ ಎಂದು ಹೇಳಿದರು.

‘ನನ್ನ ವೃತ್ತಿ ಮತ್ತು ಕರ್ತವ್ಯವನ್ನು ಮಾನವೀಯ ದೃಷ್ಟಿಯಿಂದ ನಿಭಾಯಿಸಿದ್ದೆ. ಆದರೆ, ನನ್ನ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿ, ಜೈಲಿಗೂ ಕಳಿಸಿದರು’ ಎಂದರು.

‘ನಾನೊಬ್ಬ ಅಲ್ಪಸಂಖ್ಯಾತ ಎಂಬ ಕಾರಣಕ್ಕೆ ನನ್ನ ವಿರುದ್ಧ ಷಡ್ಯಂತ್ರ ನಡೆದಿದೆ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ನನ್ನ ಜಾಗದಲ್ಲಿ ಖಾನ್ ಬದಲಿಗೆ ಬೇರೆ ಯಾರಿದ್ದರೂ ಇದೇ ನಡೆಯುತ್ತಿತ್ತು. ತನ್ನ ತಪ್ಪುಗಳನ್ನು ಮರೆಮಾಚುವುದೇ ಸರ್ಕಾರದ ಗುರಿಯಾಗಿತ್ತು. ‘ಖಾನ್’ ಇದ್ದಿದ್ದರಿಂದ ನನ್ನ ವಿರುದ್ಧದ ಆರೋಪಗಳನ್ನು ತಿರುಚಲು ಕೆಲವರಿಗೆ ಅನುಕೂಲವಾಯಿತು’ ಎಂದರು.

ಆಹಾರ ತಜ್ಞ ಕೆ.ಸಿ.ರಘು,‘ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ, ರಾಜಸ್ಥಾನ ರೋಗಪೀಡಿತ ರಾಜ್ಯಗಳು. ಅಲ್ಲಿನ ಗ್ರಾಮೀಣ ಭಾಗದಲ್ಲಿ 50 ಸಾವಿರ ಜನರಿಗೆ ಒಬ್ಬರು ವೈದ್ಯರಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.



ವೈದ್ಯ ಕಫೀಲ್ ಖಾನ್ ತಮ್ಮ ಪುಸ್ತಕದ ಕುರಿತು ಮಾತನಾಡಿದರು.

ನಿವೇಶನ ಹಗರಣ: ಶಾಸಕ ಸಿ.ಎಸ್.ಪುಟ್ಟರಾಜು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿಯಮಬಾಹಿರವಾಗಿ ನಿವೇಶನ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ದೂರನ್ನು ವಿಚಾರಣೆಗೆ ಪರಿಗಣಿಸಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ರದ್ದು ಕೋರಿದ್ದ ಶಾಸಕ ಸಿ.ಎಸ್. ಪುಟ್ಟರಾಜು ಅವರ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಎಸ್.ಪುಟ್ಟರಾಜು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಜಾಗೊಳಿಸಿ ಆದೇಶಿಸಿದೆ.

’ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಸುಮಾರು 107 ನಿವೇಶನಗಳನ್ನು ನಿಯಮಬಾಹಿರವಾಗಿ ಹಂಚಿಕೆ ಮಾಡಿದೆ‘ ಎಂದು ಸಾಮಾಜಿಕ ಹೋರಾಟಗಾರ ಕೆ.ಆರ್. ರವೀಂದ್ರ ಹಾಗೂ ಕೆಪಿಸಿಸಿ ಸದಸ್ಯ ಟಿ.ಎಸ್.ಸತ್ಯಾನಂದ ಆರೋಪಿಸಿದ್ದರು. 2011ರ ಅಕ್ಟೋಬರ್ 17ರಂದು ಈ ಹಗರಣ ಬೆಳಕಿಗೆ ಬಂದಿತ್ತು. ಸರ್ಕಾರ ಇದನ್ನು ಸಿಬಿಐ ತನಿಖೆಗೆ ವಹಿಸಿತ್ತು.

’ಪುಟ್ಟರಾಜು ಅವರ ಪತ್ನಿ ಈ ಮೊದಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಪಡೆದಿದ್ದರು. ಇದನ್ನು ಮುಚ್ಚಿಟ್ಟು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದಲೂ ನಿವೇಶನ ಪಡೆದಿದ್ದಾರೆ’ ಎಂದು ಸಿಬಿಐ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

’ಪೂರ್ವಾನುಮತಿ ಪಡೆಯದೆ ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಶೇಷ ನ್ಯಾಯಾಲಯ ಸಿಬಿಐ ದೂರನ್ನು ಸಂಜ್ಞೇಯ ಅಪರಾಧ ಎಂದು ಪರಿಗಣಿಸಿರುವುದು ಕಾನೂನು ಬಾಹಿರ. ಆದ್ದರಿಂದ, ವಿಚಾರಣಾ ನ್ಯಾಯಾಲಯದಲ್ಲಿನ ದೂರನ್ನು ವಜಾಗೊಳಿಸಬೇಕು’ ಎಂದು ಪುಟ್ಟರಾಜು ಕೋರಿದ್ದರು.

ಇದನ್ನು ಬಲವಾಗಿ ಅಲ್ಲಗಳೆದಿದ್ದ ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್, ’ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಪ್ರಕಾರ ಸಾರ್ವಜನಿಕ ಸೇವೆಯ ಚುನಾಯಿತ ಜನಪ್ರತಿನಿಧಿಗೆ ಆತನ ಸದಸ್ಯತ್ವ ಅವಧಿ ಮುಗಿದ ನಂತರ ತನಿಖೆಗೆ ಪೂರ್ವಾನುಮತಿ ಬೇಕಿಲ್ಲ. ತಿದ್ದುಪಡಿಯಲ್ಲಿ ಪೂರ್ವಾನುಮತಿ ಅಗತ್ಯ ಇದೆ. ಆದರೆ, ಇದು 2018ಕ್ಕೂ ಮೊದಲೇ ನಡೆದ ಅಪರಾಧ ಆದ್ದರಿಂದ ಈ ಆದೇಶ ಅನ್ವಯವಾಗುವುದಿಲ್ಲ‘ ಎಂದು ವಾದ ಮಂಡಿಸಿದ್ದರು. ಈ ಪ್ರಕರಣ ಸುಪ್ರೀಂ ಕೋರ್ಟ್‌ವರೆಗೂ ಹೋಗಿತ್ತು.

ಕಾರು ಹರಿಸಿ ಶ್ವಾನ ಸಾಯಿಸಿದ್ದ ಆದಿಕೇಶವಲು ಮೊಮ್ಮಗ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಪಕ್ಕದಲ್ಲಿ ಮಲಗಿದ್ದ ಶ್ವಾನದ ಮೇಲೆ ಕಾರು ಹರಿಸಿ ಕೊಂದಿದ್ದ ಆರೋಪದಡಿ ಉದ್ಯಮಿ ಆದಿಕೇಶವಲು ನಾಯ್ಡು ಅವರ ಮೊಮ್ಮಗ ಆದಿ ಎಂಬಾತನನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

‘ಜ. 26ರಂದು ನಡೆದಿದ್ದ ಘಟನೆ ಬಗ್ಗೆ ಬದ್ರಿ ಪ್ರಸಾದ್ ಎಂಬುವರು ದೂರು ನೀಡಿದ್ದರು. ಪುರಾವೆಗಳನ್ನು ಸಂಗ್ರಹಿಸಿ ಆದಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಜಯನಗರದ ಒಂದನೇ ಹಂತದ 10ನೇ ‘ಬಿ’ ಮುಖ್ಯರಸ್ತೆಯ ಮನೆಯೊಂದರ ಮುಂದೆ ಶ್ವಾನ ಮಲಗಿತ್ತು. ಕೆಎ 51 ಎಂಎ 0045 ನೋಂದಣಿ ಸಂಖ್ಯೆಯ ಆಡಿ ಕಾರು ಚಲಾಯಿಸಿಕೊಂಡು ಬಂದಿದ್ದ ಆದಿ, ಶ್ವಾನದ ಮೇಲೆ ಹರಿಸಿದ್ದ. ತೀವ್ರ ಗಾಯಗೊಂಡು ಒದ್ದಾಡಿ ಶ್ವಾನ ಮೃತಪಟ್ಟಿತ್ತು. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು’ ಎಂದೂ ತಿಳಿಸಿದರು.

‘ಕಾರಿನ ನೋಂದಣಿ ಸಂಖ್ಯೆ ಆಧರಿಸಿ ತನಿಖೆ ಆರಂಭಿಸಲಾಗಿತ್ತು. ಆದಿಕೇಶವಲು ಮೊಮ್ಮಗ ವಿಷ್ಣು ಎಂಬುವರ ಹೆಸರಿನಲ್ಲಿ ಕಾರು ನೋಂದಣಿ ಆಗಿರುವುದು ಗೊತ್ತಾಗಿತ್ತು. ಅದೇ ಕಾರನ್ನೇ ಆದಿ ಚಲಾಯಿಸಿಕೊಂಡು ಬಂದು, ಶ್ವಾನದ ಮೇಲೆ ಹರಿಸಿದ್ದ. ಈ ಬಗ್ಗೆ ವಿಷ್ಣು ಅವರಿಂದಲೇ ಹೇಳಿಕೆ ಪಡೆಯಲಾಗಿದೆ’ ಎಂದೂ ಹೇಳಿದರು.

‘ನನಗೆ ಶ್ವಾನ ಕಂಡರೆ ಆಗುವುದಿಲ್ಲ. ಅವುಗಳು ಬೊಗಳಿದರೆ ಕೋಪ ಬರುತ್ತದೆ. ಹೀಗಾಗಿ, ಶ್ವಾನವನ್ನು ಕಾರು ಹರಿಸಿ ಕೊಂದೆ’ ಎಂಬುದಾಗಿ ಆರೋಪಿ ಆದಿ ಹೇಳಿಕೆ ನೀಡಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಜಾತಿ ನಿಂದನೆ: ಹೊರಟ್ಟಿ ವಿರುದ್ಧದ ವಿಚಾರಣೆಗೆ ತಡೆ

ಬೆಂಗಳೂರು: ಜಾತಿ ನಿಂದನೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಬಸವರಾಜ ಹೊರಟ್ಟಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ದೂರುದಾರರು, ರಾಜ್ಯ ಸರ್ಕಾರ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಒ.ಸಿ ಇಲ್ಲದ ಕಾರಣಕ್ಕೆ 3000ಕ್ಕೂ ಹೆಚ್ಚು ಕಟ್ಟಡಗಳಿಗೆ ಸಿಕ್ಕಿಲ್ಲ ಕಾಯಂ ವಿದ್ಯುತ್ ಸಂಪರ್ಕ • ನಿಯಮ ಸಡಿಲಿಸುವಂತೆ ಸರ್ಕಾರದ ಮೇಲೆ ಒತ್ತಡ

ಒ.ಸಿ. ಇಲ್ಲದೆಯೂ ವಿದ್ಯುತ್, ನೀರಿನ ಕಾಯಂ ಸಂಪರ್ಕ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರದಲ್ಲಿ ಮಂಜೂರಾದ ಕಟ್ಟಡ ಯೋಜನೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುವ ಪರಿಪಾಠ ಅವ್ಯಾಹತವಾಗಿರುವುದು ಗುಟ್ಟಿನ ವಿಚಾರವೇನಲ್ಲ. ನಿಯಮ ಉಲ್ಲಂಘನೆಯನ್ನು ನಿಯಂತ್ರಿಸಲೆಂದೇ ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ಪಡೆಯದ ಕಟ್ಟಡಗಳಿಗೆ ವಿದ್ಯುತ್ ಹಾಗೂ ಕುಡಿಯುವ ನೀರಿನ ಕಾಯಂ ಸಂಪರ್ಕ ನೀಡುವುದನ್ನು 2017ರ ಡಿಸೆಂಬರ್‌ನಿಂದ ಸ್ಥಗಿತಗೊಳಿಸಲಾಗಿದೆ. ಈ ನಿಯಮ ಸಡಿಲಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲಾಗುತ್ತಿದೆ.

ಸ್ವಾಧೀನಾನುಭವ ಪ್ರಮಾಣಪತ್ರ ಮತ್ತು ವಿದ್ಯುತ್ ಸಂಪರ್ಕ ಪಡೆಯುವುದರ ನಡುವೆ ಸಂಬಂಧ ಕಲ್ಪಿಸಬಾರದು ಎಂದು ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುವ ಕಟ್ಟಡಗಳ ಮಾಲೀಕರು ಒತ್ತಾಯಿಸಿದ್ದಾರೆ. ಇದರ ಸಾಧ್ಯಾಸಾಧ್ಯತೆ ಪರಿಶೀಲಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಅಧಿಕಾರಿಗಳ ಸಭೆ ಜ.24ರಂದು ನಡೆದಿದೆ. ಬಿಬಿಎಂಪಿ, ಬೆಸ್ಕಾಂ ಮತ್ತಿತರ ಇಲಾಖೆಗಳ ಅಧಿಕಾರಿಗಳು ವಿಭಿನ್ನ ಅಭಿಪ್ರಾಯ ನೀಡಿದ್ದಾರೆ.

ನಗರದಲ್ಲಿ ಕಠಿಣ ನಿಯಮಗಳ ಹೊರತಾಗಿಯೂ ಕಟ್ಟಡಗಳನ್ನು ಬೇಕಾಬಿಟ್ಟಿ ನಿರ್ಮಿಸಲಾಗುತ್ತಿದೆ. ಒ.ಸಿ ಇಲ್ಲದ ಕಟ್ಟಡಕ್ಕೂ ವಿದ್ಯುತ್ ಹಾಗೂ ಕುಡಿಯುವ ನೀರಿನ ಕಾಯಂ ಸಂಪರ್ಕ ಕಲ್ಪಿಸಲು ಅವಕಾಶ ಕಲ್ಪಿಸಿದರೆ, ಉಲ್ಲಂಘನೆಗಳು ಮತ್ತಷ್ಟು ಹೆಚ್ಚಲಿವೆ. ಈ ಆತ್ಮಘಾತುಕ ನಿರ್ಧಾರವು ಭವಿಷ್ಯದಲ್ಲಿ ಮತ್ತಷ್ಟು ಗೊಂದಲಗಳನ್ನು ಸೃಷ್ಟಿಸಲಿದೆ ಎಂದು ಎಚ್ಚರಿಸುತ್ತಾರೆ ನಗರ ಯೋಜನಾ ತಜ್ಞರು.

ಮಂಜೂರಾತಿ ಪಡೆದ ಯೋಜನೆಗೆ ವ್ಯತಿರಿಕ್ತವಾಗಿ ಕಟ್ಟಡ ಕಟ್ಟಿದವರೊಬ್ಬರು ಆ ಕಟ್ಟಡಕ್ಕೆ ನೀರು ಮತ್ತು ವಿದ್ಯುತ್ ಸಂಪರ್ಕ ನೀಡಿದ್ದನ್ನೇ ಮುಂದಿಟ್ಟುಕೊಂಡು ಸ್ವಾಧೀನಾನುಭವ ಪತ್ರ ನೀಡುವಂತೆ ಬಿಬಿಎಂಪಿಗೆ ಸೂಚಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಯ ವಿಲೇವಾರಿ ಸಂದರ್ಭದಲ್ಲಿ ಹೈಕೋರ್ಟ್ ಒ.ಸಿ ಹೊಂದಿರದ ಕಟ್ಟಡಗಳಿಗೆ ವಿದ್ಯುತ್ ಹಾಗೂ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಬಾರದು ಎಂದು ಆದೇಶ ಮಾಡಿತ್ತು. ಅದನ್ನೇ ಆಧಾರವಾಗಿಟ್ಟುಕೊಂಡು ಬಿಬಿಎಂಪಿ ಆಯುಕ್ತರು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದು, 'ಒ.ಸಿ ಪಡೆಯದ ಕಟ್ಟಡಕ್ಕೆ ಕಾಯಂ ವಿದ್ಯುತ್ ಸಂಪರ್ಕ ಕಲ್ಪಿಸಬಾರದು' ಎಂದು ಒತ್ತಾಯಿಸಿದ್ದರು. ಯಾವೆಲ್ಲ ಕಟ್ಟಡಗಳ ಮಾಲೀಕರು ಒ.ಸಿ ಹಾಜರುಪಡಿಸಿಲ್ಲವೋ ಅಂಥಹವರ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆಯೂ ಒತ್ತಾಯಿಸಿದ್ದರು.


ನಿರ್ಮಾಣ ಹಂತದ ಕಟ್ಟಡಕ್ಕೆ ಪ್ರತಿ ಯೂನಿಟ್‌ಗೆ ಮಾಮೂಲಿಗಿಂತ ಹೆಚ್ಚು ದರ ನಿಗದಿಪಡಿಸಿ, ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತದೆ. ಆ ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಅದನ್ನು ಕಾಯಂ ಸಂಪರ್ಕವನ್ನಾಗಿ ಪರಿವರ್ತಿಸಬಹುದು. ಆದರೆ, ಕಾಯಂ ಸಂಪರ್ಕ ಪಡೆಯಲು ಕಟ್ಟಡದ ಒ.ಸಿ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) 2017ರ ಡಿ. 27ರಂದು ಅಧಿಸೂಚನೆ ಹೊರಡಿಸಿತ್ತು.

ಆದರೆ, ಈ ನಿಯಮಕ್ಕೆ ಬೆಸ್ಕಾಂ ಕೂಡ ತಕರಾರು ತೆಗೆದಿದೆ. ಕಟ್ಟಡ ನಿಯಮ ಉಲ್ಲಂಘನೆ ಆಗದಂತೆ ನಿರ್ಮಾಣ ಹಂತದಲ್ಲೇ ಬಿಬಿಎಂಪಿ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು, ಪೂರ್ಣಗೊಂಡ ಕಟ್ಟಡಕ್ಕೆ ಕಾಯಂ ವಿದ್ಯುತ್ ಸಂಪರ್ಕ ಕಲ್ಪಿಸದಂತೆ ನಿರ್ಬಂಧಿಸುವುದು ಸರಿಯಲ್ಲ. ಈ ನಿರ್ಬಂಧದಿಂದಾಗಿಯೇ 800 ಚದರ ಮೀಟರ್ ಮತ್ತು ಅದಕ್ಕಿಂತ ಜಾಸ್ತಿ ವಿಸ್ತೀರ್ಣದ ಕಟ್ಟಡಗಳಿಗೆ ಹಾಗೂ 35 ಕೆ.ವಿ.ಗಿಂತ ಜಾಸ್ತಿ ವಿದ್ಯುತ್ ಬೇಡಿಕೆ ಇರುವವರಿಗೆ ಸೇವೆ ಪೂರೈಸಲು ಸಾಧ್ಯವಾಗುತ್ತಿಲ್ಲ ಎಂಬುದು ಬೆಸ್ಕಾಂ ವಾದ.

ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ 2016ರಲ್ಲಿ ಜಾರಿಗೆ ತಂದಿರುವ ಕಟ್ಟಡಗಳ ಮಾದರಿ ಉಪವಿಧಿಗಳ ಪ್ರಕಾರ ಕಟ್ಟಡಗಳನ್ನು ಬಳಸಲು ಆರಂಭಿಸುವ ಮುನ್ನ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯಿಂದ ಒ.ಸಿ ಪಡೆಯುವುದು ಕಡ್ಡಾಯ. 2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 248 ಪ್ರಕಾರ ಕಟ್ಟಡ ನಿಯಮಗಳ ಉಲ್ಲಂಘನೆ ತಡೆಯುವ ಹೊಣೆ ಬಿಬಿಎಂಪಿಯದು.

ಮಂಜೂರಾದ ಕಟ್ಟಡ ಯೋಜನೆಯನ್ನು ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳಿಗೆ (ಉಲ್ಲಂಘನೆ ನಿಗದಿತ ಮಿತಿಗಿಂತ ಜಾಸ್ತಿ ಇದ್ದರೆ) ಒ.ಸಿ ನೀಡಲು ಸಾಧ್ಯವಿಲ್ಲ. ಅಂತಹ ಕಟ್ಟಡಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನೇ ಮುಂದುವರಿಸಬೇಕಾಗುತ್ತದೆ. ಅದಕ್ಕೆ ದುಬಾರಿ ವಿದ್ಯುತ್ ಶುಲ್ಕ ತೆರಬೇಕಾಗುವುದರಿಂದ ಕಟ್ಟಡ ಮಾಲೀಕರು ಮಂಜೂರಾದ ಯೋಜನೆಯನ್ನು ಉಲ್ಲಂಘನೆ ಮಾಡಿದ ತಪ್ಪಿಗೆ ಶಾಶ್ವತವಾಗಿ ಹೊರೆ ಹೊರಬೇಕಾಗುತ್ತದೆ. ಹಾಗಾಗಿ ಕೆಇಆರ್‌ಸಿ ಅಧಿಸೂಚನೆ ಬಳಿಕ, ಸ್ವತ್ತಿನ ಮಾಲೀಕರು ಮಂಜೂರಾತಿ ಪಡೆದ ಯೋಜನೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸುವ ಪರಿಪಾಠಕ್ಕೆ ತಕ್ಕಮಟ್ಟಿನ ಕಡಿವಾಣ ಬಿದ್ದಿದೆ. ಈಗ ಈ ನಿಯಮ ಸಡಿಲಿಸಿದರೆ ಹೆಚ್ಚಿನ ಸಮಸ್ಯೆ ಎದುರಿಸಬೇಕಾಗುವುದು ಬಿಬಿಎಂಪಿ. ಆದರೂ, ಈ ಪ್ರಸ್ತಾವಕ್ಕೆ ಬಿಬಿಎಂಪಿ ಗಟ್ಟಿಧ್ವನಿಯಲ್ಲಿ ವಿರೋಧ ವ್ಯಕ್ತಪಡಿಸಿಲ್ಲ.

'ಕಟ್ಟಡ ಮಾಲೀಕರು ಮಂಜೂರಾತಿ ಪಡೆದ ಯೋಜನೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸಿದರೆ ಅದಕ್ಕೆ ಶಾಶ್ವತವಾಗಿ ಬೆಲೆ ತೆರುವಂತೆ ಮಾಡುವ ಉದ್ದೇಶದಿಂದ ಈ ನಿಯಮ ಜಾರಿಗೊಳಿಸಲಾಗಿದೆ. ನಿಯಮ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳಿಗೂ ಕಾಯಂ ವಿದ್ಯುತ್ ಸಂಪರ್ಕ ನೀಡಲು ಶುರು ಮಾಡಿದರೆ, ನಿಯಮ ಉಲ್ಲಂಘಿಸುವ ಪರಿಪಾಠಕ್ಕೆ ಕಡಿವಾಣ ಹಾಕುವುದು ಮತ್ತಷ್ಟು ದುಸ್ತರವಾಗಲಿದೆ' ಎಂದು ಹೆಸರು ಹೇಳಿಕೊಳ್ಳಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.



ನೆರೆ ರಾಜ್ಯಗಳಲ್ಲಿ ಯಾವ ನಿಯಮವಿದೆ

ಆಂಧ್ರಪ್ರದೇಶದಲ್ಲಿ 2012ರ ಕಟ್ಟಡ ನಿಮಯಗಳು ಹಾಗೂ ತಮಿಳುನಾಡಿನಲ್ಲಿ 2019ರ ಅಭಿವೃದ್ಧಿ ಮತ್ತು ಕಟ್ಟಡಗಳ ಜಂಟಿ ನಿಯಮಗಳ ಪ್ರಕಾರ ಕಟ್ಟಡ ಪೂರ್ಣಗೊಂಡ ಬಳಿಕ ಅದನ್ನು ಬಳಸುವ ಮುನ್ನ ಪರಿಪೂರ್ಣತಾ ಪ್ರಮಾಣಪತ್ರ/ ಒ.ಸಿ ಪಡೆಯುವುದು ಕಡ್ಡಾಯ. ತಮಿಳುನಾಡಿನಲ್ಲಿ ಒ.ಸಿ ಹಾಜರುಪಡಿಸಿದ ಬಳಿಕವಷ್ಟೇ ಕಟ್ಟಡಕ್ಕೆ ಶಾಶ್ವತ ವಿದ್ಯುತ್ ಸಂಪರ್ಕ ಹಾಗೂ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಒ.ಸಿ ಹೊಂದಿಲ್ಲದ ಕಟ್ಟಡಗಳಿಗೆ ವಿದ್ಯುತ್, ಕುಡಿಯುವ ನೀರು ಹಾಗೂ ಒಳಚರಂಡಿ ಸಂಪರ್ಕ ಕಲ್ಪಿಸುವುದಿಲ್ಲ. ತಾತ್ಕಾಲಿಕ ಸಂಪರ್ಕಕ್ಕೆ ಮಾಮೂಲಿ ದರಕ್ಕಿಂತ ಮೂರು ಪಟ್ಟು ಅಧಿಕ ಶುಲ್ಕ ವಿಧಿಸಲಾಗುತ್ತದೆ ಎಂದು ಬಿಬಿಎಂಪಿಯ ಉನ್ನತ ಮೂಲಗಳು ತಿಳಿಸಿವೆ.

ಯಾವೆಲ್ಲ ಕಟ್ಟಡಕ್ಕೆ ಒ.ಸಿ. ಕಡ್ಡಾಯ?

2020ರ ಬಿಬಿಎಂಪಿ ಕಾಯ್ದೆ ಪ್ರಕಾರ ಎಲ್ಲ ವಿಧದ ಕಟ್ಟಡಕ್ಕೂ, ಅದರ ನಿರ್ಮಾಣ ಕಾರ್ಯ ಪೂರ್ಣಗೊಂಡ ಒಂದು ತಿಂಗಳ ಒಳಗಾಗಿ ಆಯಾ ವಲಯ ಆಯುಕ್ತರಿಂದ ಒ.ಸಿ. ಪಡೆಯುವುದು ಕಡ್ಡಾಯ.

'ಬಿಬಿಎಂಪಿ ಯಾವುದೇ ನಿಲುವು ತೆಗೆದುಕೊಂಡಿಲ್ಲ'



ಒ.ಸಿ. ಕೊಟ್ಟನಂತರವೇ ಕಾಯಂ ವಿದ್ಯುತ್ ಸಂಪರ್ಕ ನೀಡಬೇಕು ಎಂದು ಕೆಇಆರ್‌ಸಿ ಆದೇಶ ಮಾಡಿದೆ. ಅದನ್ನು ಸಡಿಲ ಮಾಡಿ, ಒ.ಸಿ. ಇಲ್ಲದ ಕಟ್ಟಡಗಳಿಗೂ ಕಾಯಂ ವಿದ್ಯುತ್ ಸಂಪರ್ಕ ನೀಡಲು ಅನುವು ಮಾಡಿಕೊಡಬೇಕು ಎಂಬುದು ಬೆಸ್ಕಾಂ ಅಭಿಪ್ರಾಯ. ಬಿಬಿಎಂಪಿ ಮಟ್ಟದಲ್ಲಿ ಯಾವುದೇ ನಿಲುವು ತಳೆದಿಲ್ಲ. ಜನರಿಗೆ ಆಗುತ್ತಿರುವ ಸಮಸ್ಯೆಗಳು ಹಾಗೂ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವೇ ಈ ಬಗ್ಗೆ ತೀರ್ಮಾನ ಕೈಗೊಳ್ಳಲಿದೆ

ಗೌರವ ಗುಪ್ತ, ಮುಖ್ಯ ಆಯುಕ್ತ, ಬಿಬಿಎಂಪಿ

'ಬೇರೆಲ್ಲೂ ಇಂತಹ ನಿಬಂಧನೆಗಳಿಲ್ಲ'



'ಕೆಇಆರ್‌ಸಿ ನಿರ್ದೇಶನದ ಪ್ರಕಾರ ಒ.ಸಿ ಇರುವ ಕಟ್ಟಡಗಳಿಗಷ್ಟೇ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. 2017ರ ಡಿಸೆಂಬರ್ ಬಳಿಕ ವಿದ್ಯುತ್ ಪೂರೈಕೆಯ ಷರತ್ತಿನಲ್ಲೇ ಇದನ್ನು ಅಳವಡಿಸಲಾಗಿದೆ. ಅಲ್ಲಿಯವರೆಗೆ ಈ ನಿಬಂಧನೆ ಜಾರಿಯಲ್ಲಿರಲಿಲ್ಲ. ಈ ನಿಬಂಧನೆಯಿಂದಾಗಿ ಬೆಸ್ಕಾಂನ 3 ಸಾವಿರಕ್ಕೂ ಅಧಿಕ ಗ್ರಾಹಕರು ತಾತ್ಕಾಲಿಕ ಸಂಪರ್ಕವನ್ನೇ ಮುಂದುವರಿಸಬೇಕಾಗಿ ಬಂದಿದೆ. ಹೈ ಟೆನ್ಷನ್ ಹಾಗೂ ಲೋ ಟೆನ್ಷನ್ ವಿದ್ಯುತ್ ಸಂಪರ್ಕಗಳೆರಡರ ಮೇಲೂ ಇದು ಪರಿಣಾಮ ಬೀರುತ್ತಿದೆ. ಬೇರೆ ಯಾವುದೇ ರಾಜ್ಯಗಳಲ್ಲಿ ಈ ರೀತಿ ನಿಯಮಗಳಿಲ್ಲ'

ರಾಜೇಂದ್ರ ಚೋಳನ್, ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ


'ವಿದ್ಯುತ್ ಸಂಪರ್ಕವೂ ಮೂಲಭೂತ ಹಕ್ಕು'



ಜನರಿಗೆ ವಿದ್ಯುತ್ ಅಗತ್ಯ ಸೌಕರ್ಯ. ಅದು ಅವರ ಮೂಲಭೂತ ಹಕ್ಕು ಕೂಡಾ. ಕಟ್ಟಡ ನಿಯಮ ಉಲ್ಲಂಘನೆ ಸಮಸ್ಯೆಯ ಮೂಲವನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ನಗರದ ಜನಸಂಖ್ಯೆ ಪ್ರತಿ ವರ್ಷ ಅಂದಾಜು 3 ಲಕ್ಷದಷ್ಟು ಹೆಚ್ಚಳವಾಗುತ್ತಿದೆ. ಆದರೆ, 75 ಸಾವಿರ ಜನರಿಗಷ್ಟೇ ವಸತಿ ಸಿಗುತ್ತಿದೆ. ಇನ್ನುಳಿದವರು ಕಾನೂನು ಬದ್ಧವಾಗಿ ವಸತಿ ಹೊಂದಲು ಸಾಧ್ಯವಾಗದ ಕಾರಣ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸುವ ಪ್ರಮೇಯ ಸೃಷ್ಟಿಯಾಗುತ್ತಿದೆ. ಈ ಸಮಸ್ಯೆ ಅರ್ಥ ಮಾಡಿಕೊಂಡು, ಜನ ಕಾನೂನುಬದ್ಧವಾಗಿ ವಸತಿ ಹೊಂದುವುದಕ್ಕೆ ಪೂರಕ ವಾತಾವರಣ ಕಲ್ಪಿಸುವ ಮೂಲಕ ಉಲ್ಲಂಘನೆ ತಡೆಯಬೇಕೇ ಹೊರತು ವಿದ್ಯುತ್ ಪಡೆಯುವ ಹಕ್ಕನ್ನು ಕಿತ್ತುಕೊಳ್ಳುವ ಮೂಲಕ ಅಲ್ಲ'

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

'ಒ.ಸಿ ಕಡ್ಡಾಯ– ನಿಯಮ ಸಡಿಲಿಕೆ ಸಲ್ಲದು'



ಕಟ್ಟಡ ನಿಯಮ ಉಲ್ಲಂಘನೆಗಳಿಗೆ ಯಾವುದಾದರೂ ಒಂದು ಹಂತದಲ್ಲಿ ಕಡಿವಾಣ ಹಾಕಲೇಬೇಕು. ಇಲ್ಲದಿದ್ದರೆ ಇಡೀ ನಗರ ಅನಿಯಂತ್ರಿತವಾಗಿ ಬೆಳೆಯುತ್ತದೆ. ಇದರಿಂದ ಭವಿಷ್ಯದಲ್ಲಿ ಭಾರಿ ಸಮಸ್ಯೆಗಳು ಸೃಷ್ಟಿಯಾಗಲಿವೆ. ಒ.ಸಿ. ಸಲ್ಲಿಸಿದ ಬಳಿಕವೇ ಕಟ್ಟಡಕ್ಕೆ ಕಾಯಂ ವಿದ್ಯುತ್ ಸಂಪರ್ಕ ಕಲ್ಪಿಸುವ ನಿಯಮ ಉಲ್ಲಂಘನೆ ತಡೆಯಲು ತಕ್ಕಮಟ್ಟಿಗೆ ಸಹಕಾರಿ ಆಗಿತ್ತು. ಅದನ್ನು ಯಾವುದೇ ಕಾರಣಕ್ಕೂ ಸಡಿಲ ಮಾಡಬಾರದು

ಎನ್.ಎಸ್.ಮುಕುಂದ್, ಬೆಂಗಳೂರು ಪ್ರಜಾವೇದಿಕೆ

1ರಿಂದ 9ನೇ ತರಗತಿ ಆರಂಭ: ಉತ್ತಮ ಪ್ರತಿಕ್ರಿಯೆ: ಮಕ್ಕಳ ಸಂತಸ

ನಗರದಲ್ಲಿ ಶಾಲೆಗಳು ಮತ್ತೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯ ಕಾರಣಕ್ಕೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸ್ಥಗಿತಗೊಂಡಿದ್ದ 1ರಿಂದ 9ನೇ ತರಗತಿಗಳನ್ನು ಸೋಮವಾರದಿಂದ ಮತ್ತೆ ಆರಂಭಿಸಲಾಗಿದೆ.

ಭೌತಿಕ ತರಗತಿಗಳು ಆರಂಭವಾಗಿರುವುದಕ್ಕೆ ಮಕ್ಕಳು ಮತ್ತು ಪೋಷಕರು ಸಂತಸ ವ್ಯಕ್ತಪಡಿಸಿದ್ದಾರೆ. ಚಿಣ್ಣರು ಸಂಭ್ರಮದಿಂದ ಶಾಲೆಗೆ ಹಾಜರಾಗಿದ್ದರು. ಸ್ನೇಹಿತರನ್ನು ಹಲವು ದಿನಗಳ ಬಳಿಕ ಭೇಟಿಯಾಗಿದ್ದಕ್ಕೆ ಖುಷಿಪಟ್ಟು ತರಗತಿಗಳಿಗೆ ಹಾಜರಾದರು.

ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುವ ಶಾಲೆಗಳನ್ನು ಮಾತ್ರ ಮುಚ್ಚಲು ನಿರ್ಧರಿಸಲಾಗಿದೆ. ಸೋಂಕು ಕಡಿಮೆಯಾದ ಬಳಿಕ ಅಂತಹ ಶಾಲೆಗಳಲ್ಲಿ ಮತ್ತೆ ತರಗತಿಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ.

ಸೋಂಕು ಪಸರಿಸುವಿಕೆ ಪ್ರಮಾಣ ಹೆಚ್ಚಾಗಿದ್ದರಿಂದ ರಾಜ್ಯ ಸರ್ಕಾರ 1ರಿಂದ 9ನೇ ತರಗತಿಗಳನ್ನು ಜನವರಿ 6ರಿಂದ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸಲಾಗಿತ್ತು. ಶಾಲೆಗಳನ್ನು ಮತ್ತೆ ಆರಂಭಿಸಲು ಸರ್ಕಾರ ಈಗ ಒಪ್ಪಿಗೆ ಸೂಚಿಸಿದೆ. ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ತರಗತಿಗಳನ್ನು ನಡೆಸಲು ಸರ್ಕಾರ ನಿರ್ದೇಶನ ನೀಡಿತ್ತು. ಹೀಗಾಗಿ, ಕೊಠಡಿಗಳನ್ನು ಸ್ವಚ್ಛಗೊಳಿಸಿ ತರಗತಿಗಳನ್ನು ಆರಂಭಿಸಲಾಗಿದೆ.

ಶಾಲೆಗೆ ಬಂದ ವಿದ್ಯಾರ್ಥಿಗಳ ಥರ್ಮಲ್ ಸ್ಕ್ಯಾನಿಂಗ್ ಮಾಡಿ, ಕೈಗೆ ಸ್ಯಾನಿಟೈಸರ್ ಹಾಕುವ ವ್ಯವಸ್ಥೆ ಮಾಡಲಾಗಿತ್ತು.

'ಬಹುತೇಕ ಶಾಲೆಗಳಲ್ಲಿ ಶೇಕಡ 70ಕ್ಕಿಂತಲೂ ಹೆಚ್ಚು ಮಕ್ಕಳ ಹಾಜರಾತಿ ಇತ್ತು. ಕೆಲವು ಖಾಸಗಿ ಶಾಲೆಗಳಲ್ಲಿ ಶೇ 100ರಷ್ಟು ಹಾಜರಾತಿ ವರದಿಯಾಗಿದೆ. ಆದರೆ, ಕೆಲವು ಶಾಲೆಗಳು ಬುಧವಾರದಿಂದ ತರಗತಿಗಳನ್ನು ಆರಂಭಿಸಲು ನಿರ್ಧರಿಸಿವೆ. ಆಫ್‌ಲೈನ್ ವ್ಯವಸ್ಥೆಯ ಜತೆಗೆ ಆನ್‌ಲೈನ್ ಮೂಲಕವೂ ತರಗತಿಗಳು ಮುಂದುವರಿಸಲು ಶಾಲೆಗಳು ನಿರ್ಧರಿಸಿವೆ' ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ವಿದ್ಯಾರ್ಥಿಗಳ ಹಾಜರಾತಿ ಉತ್ತಮವಾಗಿದೆ. ಮಕ್ಕಳು ಉತ್ಸಾಹದಿಂದ ಶಾಲೆಗೆ ಬಂದಿದ್ದಾರೆ. ಮಕ್ಕಳಿಗಿಂತಲೂ ಪೋಷಕರು ಶಾಲೆಗಳು ಆರಂಭವಾಗಿದ್ದಕ್ಕೆ ಹರ್ಷ ವ್ಯಕ್ತಪಡಿಸಿದ್ದಾರೆ. ಅವರೇ ಆಸಕ್ತಿಯಿಂದ ಮಕ್ಕಳನ್ನು ಶಾಲೆಗೆ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿದ್ದಾರೆ. ಆನ್‌ಲೈನ್ ವ್ಯವಸ್ಥೆಯಿಂದ ಬೇಸತ್ತಿದ್ದ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಖುಷಿಯಾಗಿದೆ' ಎಂದು ಕರ್ನಾಟಕ ಖಾಸಗಿ ಪ್ರಾಥಮಿಕ, ಪ್ರೌಢ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ತಿಳಿಸಿದ್ದಾರೆ.



ಹೊಂಬೇಗೌಡ ನಗರದಲ್ಲಿ ಮಾರುತಿ ವಿದ್ಯಾಲಯದ ವಿದ್ಯಾರ್ಥಿಗಳು ಸೋಮವಾರ ಶಾಲೆಗೆ ತೆರಳಿದರು –ಪ್ರಜಾವಾಣಿ ಚಿತ್ರ

ಶಾಲೆಗಳಲ್ಲಿ ಶಿಕ್ಷಕರ ಕೊರತೆ

ಹಲವು ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಎದುರಾಗಿರುವುದರಿಂದ ಮಕ್ಕಳ ಶೈಕ್ಷಣಿಕ ಚಟುವಟಿಕೆಗೂ ಅಡ್ಡಿಯಾಗಿದೆ.

'ಕೋವಿಡ್ ಕಾಣಿಸಿಕೊಂಡ ನಂತರ ಉದ್ಯೋಗ ಕಳೆದುಕೊಂಡಿರುವ ಖಾಸಗಿ ಶಾಲೆಗಳಲ್ಲಿನ ಹಲವು ಶಿಕ್ಷಕರು ತಮ್ಮ ವೃತ್ತಿಯನ್ನೇ ಬದಲಾಯಿಸಿದ್ದಾರೆ. ಇನ್ನು ಕೆಲವರು ತಮ್ಮ ಊರುಗಳಿಗೆ ತೆರಳಿದವರು ವಾಪಸ್ ಬಂದಿಲ್ಲ. ಈ ರೀತಿಯ ಹಲವಾರು ಕಾರಣಗಳಿಂದ ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಾಗಿದೆ' ಎಂದು ಶಶಿಕುಮಾರ್ ತಿಳಿಸಿದ್ದಾರೆ.

ಕೋವಿಡ್ ಅಂಕಿ–ಅಂಶ


ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	37.60 ಕೋಟಿ ▲	4.13 ಕೋಟಿ ▲
ಸಕ್ರಿಯ ಪ್ರಕರಣ	7.29 ಕೋಟಿ ▲	18.31 ಲಕ್ಷ ▼
ಗುಣಮುಖ	29.74 ಕೋಟಿ ▲	3.89 ಕೋಟಿ ▲
ಸಾವು	56.84 ಲಕ್ಷ ▲	4.95 ಲಕ್ಷ ▲


ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	21.09 ಲಕ್ಷ ▼	2.09 ಲಕ್ಷ ▼
ಗುಣಮುಖ	29.63 ಲಕ್ಷ ▲	2.62 ಲಕ್ಷ ▼
ಸಾವು	5,801 ▼	959 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು



ಎಲ್ಲಿ ಹೆಚ್ಚು ಸಾವು (ಒಟ್ಟು)

1.42 ಲಕ್ಷ	ಮಹಾರಾಷ್ಟ್ರ
53,666 ▲	ಕೇರಳ
37,544 ▲	ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

77.05	ಮಹಾರಾಷ್ಟ್ರ ▲
59.83	ಕೇರಳ ▲
33.25	ತಮಿಳುನಾಡು ▲

(ಭಾರತ ಕೋವಿಡ್ ಸಂಖ್ಯೆ ವಿವರ: ಸೋಮವಾರ ಬೆಳಗ್ಗೆ 8ರವರೆಗಿನ ಮಾಹಿತಿ)

ಹರಿಹರ: ವಾಲ್ಮೀಕಿ ಜಾತ್ರೆ ಮುಂದೂಡಿಕೆ

ಹರಿಹರ: 'ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಫೆ.8 ಮತ್ತು 9ರಂದು ನಿಗದಿಯಾಗಿದ್ದ ವಾಲ್ಮೀಕಿ ಜಾತ್ರಾ ಮಹೋತ್ಸವವನ್ನು ಕೋವಿಡ್ ಕಾರಣಕ್ಕೆ ಮುಂದೂಡಲಾಗಿದೆ. ಮುಂದಿನ ದಿನಾಂಕ ಚರ್ಚಿಸಿ ಘೋಷಿಸಲಾಗುವುದು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

ಕೋವಿಡ್: ಒಂದೇ ದಿನ 30,869 ಮಂದಿ ಚೇತರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದ್ದು, ಗುಣಮುಖರ ಸಂಖ್ಯೆ ಹೆಚ್ಚಳವಾಗಿದೆ.

ಸೋಮವಾರ 30,869 ಮಂದಿಗೆ ಕಾಯಿಲೆ ವಾಸಿಯಾಗಿದೆ. ಸಕ್ರಿಯ ಪ್ರಕರಣಗಳು ತಗ್ಗಿದ್ದು, ಸದ್ಯ 2.44 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆಯು 35.26 ಲಕ್ಷದಷ್ಟಿದೆ.

ಒಂದು ದಿನದಲ್ಲಿ 24,172 ಜನರಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಇದರಿಂದಾಗಿ ಸೋಂಕಿತರ ಒಟ್ಟು ಸಂಖ್ಯೆ 38.09 ಲಕ್ಷ ದಾಟಿದೆ. ಕೋವಿಡ್ ದೃಢ ಪ್ರಮಾಣವು ಶೇ 17.11ರಷ್ಟು ವರದಿಯಾಗಿದೆ. ಸೋಮವಾರ ಒಟ್ಟು 1.41 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ.

ಕೋವಿಡ್ ಮೃತರ ಸಂಖ್ಯೆಯು ಇಳಿಕೆಯಾಗಿದೆ. 24 ಗಂಟೆಗಳಲ್ಲಿ 56 ಮಂದಿ ಅಸುನೀಗಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆಯು 39 ಸಾವಿರ (38,998) ಸಮೀಪಿಸಿದೆ. ಮರಣ ಪ್ರಮಾಣ ದರವು ಶೇ 0.23ರಷ್ಟು ದಾಖಲಾಗಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೋಂಕಿತರ ಹೊಸ ಪ್ರಕರಣಗಳು ತಗ್ಗಿವೆ. ಬೆಂಗಳೂರಿನಲ್ಲಿ ಸೋಮವಾರ 10,692 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಧಾರವಾಡ (1,044), ಮೈಸೂರು (1,327) ಹಾಗೂ ತುಮಕೂರು (1,090) ಜಿಲ್ಲೆಗಳಲ್ಲಿ ಸಾವಿರಕ್ಕಿಂತ ಅಧಿಕ ಪ್ರಕರಣಗಳು ದಾಖಲಾಗಿವೆ. 24 ಜಿಲ್ಲೆಗಳಲ್ಲಿ ಇದು ಮೂರಂಕಿಯಷ್ಟಿದ್ದು, ಬೀದರ್ (84) ಹಾಗೂ ರಾಮನಗರದಲ್ಲಿ (84) ಎರಡಂಕಿಗೆ ಇಳಿದಿದೆ.

ಬೆಂಗಳೂರಿನಲ್ಲಿ ಸೋಮವಾರ 12 ಮಂದಿ ಅಸುನೀಗಿದ್ದಾರೆ. ಬಳ್ಳಾರಿ (5), ಬೆಳಗಾವಿ (6), ದಕ್ಷಿಣ ಕನ್ನಡ (6), ಹಾಸನ (4) ಜಿಲ್ಲೆಗಳಲ್ಲೂ ಹೆಚ್ಚು ಮಂದಿ ಮೃತರಾಗಿದ್ದಾರೆ. ಕಲಬುರಗಿಯಲ್ಲಿ 3, ಚಾಮರಾಜನಗರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ, ಉಡುಪಿ ಹಾಗೂ ಉತ್ತರ ಕನ್ನಡದಲ್ಲಿ ತಲಾ ಎರಡು, ಧಾರವಾಡ, ಗದಗ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ನಗರದ ಕೋವಿಡ್ ಅಂಕಿ–ಅಂಶ

17,20,890 ▲	ಒಟ್ಟು ಪ್ರಕರಣಗಳು
1,34,038 ▲	ಸಕ್ರಿಯ ಪ್ರಕರಣಗಳು
15,70,258 ▲	ಗುಣಮುಖರಾದವರು
16,593 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	10,692 ▼
ಗುಣಮುಖ	8,813 ▼
ಸಾವು	12 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಲಂಚ ಪಡೆಯುವಾಗ ಸಿಕ್ಕಿಬಿದ್ದ ಅಧಿಕಾರಿ ಬಂಧನ

ಮೈಸೂರು: ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕ ಡಿ.ಕೆ.ಲಿಂಗರಾಜು ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದು ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸರು ಸೋಮವಾರ ಸಂಜೆ ಬಂಧಿಸಿದ್ದಾರೆ.

'ತಾಲ್ಲೂಕಿನ ಕೈಗಾರಿಕಾ ಪ್ರದೇಶದ ನಿವಾಸಿಯೊಬ್ಬರು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ₹ 2 ಕೋಟಿ ಸಾಲ ಪಡೆದು ಕಂಪನಿ ಆರಂಭಿಸಿದ್ದರು. ಈ ಸಾಲಕ್ಕೆ ₹ 25 ಲಕ್ಷ ಸಬ್ಸಿಡಿ ಬಿಡುಗಡೆ ಮಾಡಲು ಇಲಾಖೆಯ ಡಿ.ಕೆ. ಲಿಂಗರಾಜು ಮತ್ತು ಉಪನಿರ್ದೇಶಕಿ ಎಲ್.ಮೇಘಲಾ ₹ 1.5 ಲಕ್ಷ ಲಂಚಕ್ಕೆ ಬೇಡಿಕೆಯಿಟ್ಟು, ಜ.28ರಂದು ₹ 25 ಸಾವಿರ ಮುಂಗಡ ಪಡೆದು, ಬಾಕಿ ಹಣಕ್ಕೆ ಪೀಡಿಸಿದ್ದರು. ಬೇಸತ್ತ ನಿವಾಸಿ, ಎಸಿಬಿಗೆ ದೂರು ನೀಡಿದ್ದರು. ₹ 1.25 ಲಕ್ಷ ಲಂಚ ಪಡೆಯುವಾಗ ಲಿಂಗರಾಜು ಅವರನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.



ಪ್ರಶಸ್ತಿ ಪ್ರದಾನ

ಧಾರವಾಡದ ಸಾಧನಕೇರಿಯ ಬೇಂದ್ರೆ ಭವನದಲ್ಲಿ ಸೋಮವಾರ ನಡೆದ ಡಾ.ದ.ರಾ.ಬೇಂದ್ರೆ ಅವರ 126ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ ಪ್ರೊ.ಸೋಮಶೇಖರ ಇಮ್ರಾಪುರ ಅವರಿಗೆ ₹1 ಲಕ್ಷ ನಗದು ಪುರಸ್ಕಾರದ 'ಅಂಬಿಕಾತನಯದತ್ತ' ರಾಷ್ಟ್ರೀಯ ಪ್ರಶಸ್ತಿಯನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರದಾನ ಮಾಡಿದರು. ಪ್ರಕಾಶ ಬಾಳೀಕಾಯಿ, ಬಸವರಾಜ ಹೂಗಾರ, ಡಾ. ಶಾಂತಾ ಇಮ್ರಾಪುರ, ಮಂಜುಳಾ ಯಲಿಗಾರ, ಡಾ. ಡಿ.ಎಂ.ಹಿರೇಮಠ, ಡಾ. ಸಂಗಮನಾಥ ಲೋಕಾಪುರ ಇದ್ದಾರೆ

ಮೈಸೂರು ಗ್ಯಾಸ್ ಪೈಪ್‌ಲೈನ್ ವಿವಾದ: ಪ್ರಧಾನಿ ಮೋದಿಗೆ ಪತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ನೈಸರ್ಗಿಕ ಅನಿಲವನ್ನು ಕೊಳವೆ ಮೂಲಕ ಸರಬರಾಜು ಮಾಡುವ ಕೇಂದ್ರ ಸರ್ಕಾರದ ಯೋಜನೆಗೆ ಬಿಜೆಪಿ ಶಾಸಕರು ಹಾಗೂ ಪಾಲಿಕೆ ಸದಸ್ಯರು ವಿರೋಧಿಸುತ್ತಿರುವ ಕುರಿತು ಮೈಸೂರು ಗ್ರಾಹಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ, ನೈಸರ್ಗಿಕ ಅನಿಲ ತಜ್ಞ ಭಾಮಿ ಶೆಣೈ ಪ್ರಧಾನಮಂತ್ರಿ ನರೇಂದ್ರಮೋದಿ ಅವರಿಗೆ ಪತ್ರ ಬರೆದಿದ್ದಾರೆ.

'ನಾಗರಿಕ ಸ್ನೇಹಿಯಾಗಿರುವ ಯೋಜನೆ ಕುರಿತ ಪಕ್ಷದವರ ವರ್ತನೆ ಕುರಿತು ತನಿಖೆ ನಡೆಸಲು ಸಮಿತಿ ರಚಿಸಬೇಕು. ಅವರು ನಿಜಕ್ಕೂ ಏಕೆ ವಿರೋಧಿಸುತ್ತಿದ್ದಾರೆ ಎಂಬುದನ್ನು ಪತ್ತೆ ಹಚ್ಚಬೇಕು. ಭ್ರಷ್ಟಾಚಾರದ ವಿರುದ್ಧ ಹೋರಾಡಲು ಕರೆ ನೀಡಿರುವ ಪ್ರಧಾನಿಯವರು ಈ ವಿಷಯದಲ್ಲೂ ಮಧ್ಯ ಪ್ರವೇಶಿಸುವುದು ಅಗತ್ಯ' ಎಂದು ಅವರು ಸೋಮವಾರ ಬರೆದ ಪತ್ರದಲ್ಲಿ ಕೋರಿದ್ದಾರೆ.

'ಭಾರತವನ್ನು ಅನಿಲ ಆರ್ಥಿಕತೆಯತ್ತ ಕೊಂಡೊಯ್ಯಲು ನೀವು ಪ್ರಬಲವಾಗಿ ಪ್ರತಿಪಾದಿಸಿರುವ ಯೋಜನೆಯನ್ನು ನಿಮ್ಮ ಪಕ್ಷದ ಪಾಲಿಕೆ ಸದಸ್ಯರು, ಶಾಸಕರೇ ತಡೆಯಲು ಪ್ರಯತ್ನಿಸುತ್ತಿರುವುದು ದಿಗ್ಭ್ರಮೆ ಮತ್ತು ದುಃಖವನ್ನು ಮೂಡಿಸಿದೆ. ಪೈಪ್‌ಲೈನ್ ಅಳವಡಿಕೆಯಿಂದ ಹಾಳಾಗುವ ರಸ್ತೆಗಳ ದುರಸ್ತಿಗೆ ಹಣ ಮೀಸಲಿಟ್ಟಿಲ್ಲ ಎಂಬ ಸಣ್ಣ, ತರ್ಕರಹಿತ ಕಾರಣವನ್ನು ಮುಂದೊಡ್ಡಿದ್ದಾರೆ. ಆದರೆ ಮೈಸೂರಿನ ಬಡಾವಣೆಗಳಲ್ಲಿ ದಿನವೂ ರಸ್ತೆ ಅಗೆಯುತ್ತಿದ್ದರೂ ಸೊಲ್ಲೆತ್ತಿಲ್ಲ. ಹಲವು ವರ್ಷಗಳ ಹಿಂದೆ ಮೈಸೂರಿಗೆ 24*7 ಕುಡಿಯುವ ನೀರು ಪೂರೈಕೆ ಯೋಜನೆ ಅನುಷ್ಠಾನಗೊಳ್ಳುವ ಸಂದರ್ಭದಲ್ಲೂ ಇದೇ ಬಗೆಯ ವಿರೋಧ ವ್ಯಕ್ತವಾಗಿತ್ತು' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹಾಸನಾಂಬೆ ಗರ್ಭಗುಡಿ ಮುಂದೆ ಪೂಜೆಗೆ ತಡೆ

ಹಾಸನ: ನಗರದ ಅಧಿದೇವತೆ ಹಾಸನಾಂಬೆ ದೇವಾಲಯದ ಗರ್ಭಗುಡಿ ಮುಂಭಾಗದಲ್ಲಿ ದೇವಿಯ ಪ್ರತಿರೂಪ ನಿರ್ಮಿಸಿ ವಿಶೇಷ ಪೂಜೆ ನಡೆಸುವುದಕ್ಕೆ, ದೇವಾಲಯದ ಆಡಳಿತಾಧಿಕಾರಿಯೂ ಆಗಿರುವ ಉಪವಿಭಾಗಾಧಿಕಾರಿ ಬಿ.ಎ. ಜಗದೀಶ್ ತಡೆ ನೀಡಿದ್ದಾರೆ.

ದೇವಾಲಯದ ಅರ್ಚಕರೊಂದಿಗೆ ಸೋಮವಾರ ಸಭೆ ನಡೆಸಿದ ಬಳಿಕ ಅವರು ಈ ನಿರ್ಧಾರವನ್ನು ಪ್ರಕಟಿಸಿದರು.

'ಹಿಂದಿನಿಂದಲೂ ಗರ್ಭಗುಡಿ ಮುಂದೆ ಪೂಜೆ ಮಾಡುವ ಸಂಪ್ರದಾಯವಿದೆ ಎಂದು ಅರ್ಚಕರು ಹೇಳಿದರು. ಆದರೆ, ಅದಕ್ಕೆ ವಿರೋಧ ವ್ಯಕ್ತವಾಗಿರುವುದರಿಂದ ಪೂಜೆ ನಡೆಸದಂತೆ ಸೂಚಿಸಲಾಗಿದೆ. ಸಂಪ್ರದಾಯಕ್ಕೆ ಧಕ್ಕೆ ಬರುವ ಹಾಗೂ ಭಕ್ತ ವಲಯವನ್ನು ಘಾಸಿಗೊಳಿಸುವ ಪೂಜೆ ನಡೆಯುವುದಿಲ್ಲ' ಎಂದು ಜಗದೀಶ್ ಸ್ಪಷ್ಟಪಡಿಸಿದರು.



ಹಾಸನಾಂಬೆ (ಸಾಂದರ್ಭಿಕ ಚಿತ್ರ)

ವರ್ಷಕ್ಕೆ ಒಂದು ಬಾರಿ ಅಶ್ವ ಯುಜ ಮಾಸದ ಹುಣ್ಣಿಮೆ ನಂತರದ ಪ್ರಥಮ ಗುರುವಾರ ದೇವಾಲಯ ಗರ್ಭಗುಡಿ ಬಾಗಿಲು ತೆರೆದು ಬಲಿ ಪಾಡ್ಯಮಿಯ ಮರುದಿನ ಮುಚ್ಚಿದರೆ, ಮರುವರ್ಷದವರೆಗೂ ತೆರೆಯುವಂತಿಲ್ಲ. ಆದರೆ, ದೇವಾಲಯದ ಅರ್ಚಕ ನಾಗರಾಜ್ ಭಟ್ ಅವರು ಭಾನುವಾರ ಗರ್ಭಗುಡಿ ಹೊರ ಭಾಗದಲ್ಲಿ ದೇವಿಯ ಪ್ರತಿರೂಪ ಇರಿಸಿ ಪೂಜೆ ಆರಂಭಿಸಿ, ಕಾಣಿಕೆ ಹುಂಡಿಯನ್ನೂ ತಂದಿರಿಸಿಕೊಂಡಿದ್ದರು.

ಅದನ್ನು ದೇವಾಲಯದ ಇತರೆ ಅರ್ಚಕರು ವಿರೋಧಿಸಿ ಅಧಿಕಾರಿಗಳ ಗಮನಕ್ಕೆ ತಂದಿದ್ದರು.

ಬೇಲೂರು, ಹಳೇಬೀಡು ದೇವಾಲಯಗಳ ನಾಮನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬೇಲೂರು, ಹಳೇಬೀಡು ಮತ್ತು ಸೋಮನಾಥಪುರದ ಹೊಯ್ಸಳ ಶೈಲಿಯ ದೇವಾಲಯಗಳನ್ನು 2022–23ರ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರಿಸಲು ಪರಿಗಣಿಸುವಂತೆ ಕೋರಿ ಭಾರತವು ಅಂತಿಮ ನಾಮನಿರ್ದೇಶನ ಮಾಡಿದೆ.

ಯುನೆಸ್ಕೊದ ಭಾರತದ ಕಾಯಂ ಪ್ರತಿನಿಧಿಯಾದ ವಿಶಾಲ್ ವಿ. ಶರ್ಮಾ ಅವರು ಯುನೆಸ್ಕೊದ ವಿಶ್ವಪಾರಂಪರಿಕ ತಾಣದ ನಿರ್ದೇಶಕರಿಗೆ ಸೋಮವಾರ ನಾಮನಿರ್ದೇಶನವನ್ನು ಸಲ್ಲಿಸಿದರು.

ಇದೇ ವರ್ಷ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಯುನೆಸ್ಕೊ ಸ್ಥಳದ ಮೌಲ್ಯಮಾಪನ ನಡೆಸಲಿದ್ದು ನಂತರ 2023ರ ಜುಲೈ–ಆಗಸ್ಟ್ ವೇಳೆಗೆ ಪರಿಗಣನೆಗೆ ತೆಗೆದುಕೊಳ್ಳಲಿದೆ.



ವಿಶ್ವವಿದ್ಯಾಲಯದ ಆವರಣದಲ್ಲಿ 'ಬೆಂಗಳೂರು ವಿಶ್ವವಿದ್ಯಾಲಯ ಸಂಶೋಧನಾ ವಿದ್ಯಾರ್ಥಿಗಳ ಸಂಘಟನೆ' ಸೋಮವಾರ ಪ್ರತಿಭಟನೆ ನಡೆಸಿತು – ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳ ಮಧ್ಯೆ ಚಕಮಕಿ: ಲಘು ಲಾಠಿ ಪ್ರಹಾರ

ಒಂದನೇ ಪುಟದಿಂದ

ಆಗಿದ್ದೇನು?'ಗಣರಾಜ್ಯೋತ್ಸವದಿನ ದಂದು ಅಂಬೇಡ್ಕರ್ ಅವರಿಗೆ ಅವಮಾನ ಮಾಡಲಾಗಿದೆ' ಎಂದು ಆರೋಪಿಸಿ ವಿ.ವಿ ಸಂಶೋಧನಾ ವಿದ್ಯಾರ್ಥಿಗಳ ಸಂಘಟನೆ, ಆಡಳಿತ ಮಂಡಳಿ ಕಚೇರಿ ಮೆಟ್ಟಿಲು ಬಳಿ ಪ್ರತಿಭಟನೆ ನಡೆಸುತ್ತಿತ್ತು.

ಅದೇ ಸಂದರ್ಭದಲ್ಲಿ ಆವರಣ ಪ್ರವೇಶಿಸಿ ಪ್ರತಿಭಟನೆ ಆರಂಭಿಸಿದ್ದ ಎಬಿವಿಪಿ ಕಾರ್ಯಕರ್ತರು, 'ಪರೀಕ್ಷೆ, ಮೌಲ್ಯಮಾಪನ ಮತ್ತು ಫಲಿತಾಂಶ ನೀಡುವಲ್ಲಿ ವಿಶ್ವವಿದ್ಯಾಲಯ ವಿಳಂಬ ಧೋರಣೆ ಅನುಸರಿಸುತ್ತಿದೆ. ಮೌಲ್ಯಮಾಪನ ಆಗಿ ಹಲವು ದಿನಗಳು ಕಳೆದರೂ ಎಂ.ಕಾಂ, ಎಂ.ಸಿ.ಎ, ಬಿ.ಎಸ್ಸಿ, ಎಂ.ಎಸ್ಸಿ, ಎಂ.ಎ, ಬಿ.ಇಡಿ ಹಾಗೂ ಎಂಬಿಎ ಪರೀಕ್ಷೆಗಳ ಫಲಿತಾಂಶ ಪ್ರಕಟಗೊಂಡಿಲ್ಲ. ಪರೀಕ್ಷೆ ಶುಲ್ಕವನ್ನೂ ದಿಢೀರ್ ಹೆಚ್ಚಳ ಮಾಡಲಾಗಿದೆ' ಎಂದರು.

ಎರಡೂ ಗುಂಪಿನವರು ಸೇರುತ್ತಿದ್ದಂತೆ ಪರಿಸ್ಥಿತಿ ಬಿಗಡಾಯಿಸಿತು. 'ಕುಲಪತಿ ಅವರನ್ನು ಭೇಟಿ ಮಾಡುತ್ತೇವೆ' ಎಂದು ಕಾರ್ಯಕರ್ತರು, ಕಚೇರಿಯೊಳಗೆ ಹೋಗಲು ಯತ್ನಿಸಿದ್ದರು. ಅದನ್ನು ಪ್ರಶ್ನಿಸಿದ್ದ ಸಂಶೋಧನಾ ವಿದ್ಯಾರ್ಥಿಗಳ ಸಂಘಟನೆಯವರು, 'ವಿಶ್ವವಿದ್ಯಾಲಯಕ್ಕೆ ಸಂಬಂಧವಿಲ್ಲದ ಬಾಹ್ಯ ವ್ಯಕ್ತಿಗಳನ್ನು ತೆಗೆದುಕೊಂಡು ಒಳಗೆ ಬಂದಿದ್ದಾರೆ. ಅವರನ್ನು ಹೊರಗೆ ಕಳುಹಿಸಿ' ಎಂದು ಪೊಲೀಸರನ್ನು ಕೋರಿದರು.

ಅದೇ ವಿಚಾರವಾಗಿ ಮಾತಿನ ಚಕಮಕಿ ನಡೆದು, ಪ್ರವೇಶ ದ್ವಾರದ ಬಳಿ ಹೋದ ಎಬಿವಿಪಿ ಕಾರ್ಯಕರ್ತರು, ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮುಂದುವರಿಸಿದ್ದರು. 'ಪ್ರತಿಭಟನೆಗೆ ಅವಕಾಶ ವಿಲ್ಲ' ಎಂದ ಪೊಲೀಸರು, ಲಘು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದರು.

'ಅಧಿಕಾರದ ಲಾಲಸೆಯೇ ಪಕ್ಷಾಂತರಕ್ಕೆ ಮೂಲ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಒಂದೂವರೆ ವರ್ಷ ಬಾಕಿ ಇರುವಾಗಲೇ ರಾಜ್ಯದಲ್ಲಿ ಪಕ್ಷಾಂತರದ ಗುಲ್ಲು ಆರಂಭವಾಗಿದೆ. ಕೆಲ ಶಾಸಕರು, ಸಚಿವರು ಬಿಜೆಪಿ ತೊರೆಯಲಿದ್ದಾರೆ ಎಂದು ಆಡಳಿತ ಪಕ್ಷದ ನಾಯಕರೇ ಹೇಳುತ್ತಿದ್ದಾರೆ. ಕಾಂಗ್ರೆಸ್‌ನಿಂದ ಅನೇಕರು ಬರಲಿದ್ದಾರೆ ಎಂದು ಬಿಜೆಪಿ ಅಧ್ಯಕ್ಷರೇ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ, 'ಮತ್ತೆ ಶುರುವಾಯಿತೇ ಪಕ್ಷಾಂತರ?' ಕುರಿತು 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ ನೇರಸಂವಾದದಲ್ಲಿ ಅತಿಥಿಗಳು ಹಂಚಿಕೊಂಡ ಅಭಿಪ್ರಾಯ ಇಲ್ಲಿದೆ.

ಪೂರ್ಣ ಸಂವಾದ ವೀಕ್ಷಿಸಲು: www.facebook.com/prajavani.net

ಪ್ರಜಾವಾಣಿ ಸಂವಾದ

'ಕಾಯ್ದೆ ಲೋಪದ ಲಾಭ ಪಡೆಯುತ್ತಿರುವ ಬಿಜೆಪಿ'



ಮುಂದಿನ ಚುನಾವಣೆ ವೇಳೆಗೆ ಕಾಂಗ್ರೆಸ್‌ಗೆ ಬರುವ ಅನ್ಯ ಪಕ್ಷದ ನಾಯಕರನ್ನು ನೇರವಾಗಿ ಸೇರಿಸಿ ಮಾಡಿಕೊಳ್ಳುವುದಿಲ್ಲ. ಸಮಿತಿಯ ಮುಂದೆ ಅರ್ಜಿ ಹಾಕಿದರೆ ಪಕ್ಷದ ಸ್ಥಳೀಯ ಕಾರ್ಯಕರ್ತರ ಅಭಿಪ್ರಾಯ ಪಡೆದುಕೊಂಡು ಪಕ್ಷಕ್ಕೆ ಸೇರಿಸಿ ಮಾಡಿಕೊಳ್ಳುವ ವ್ಯವಸ್ಥೆಯನ್ನು ಕೆಪಿಸಿಸಿ ರೂಪಿಸಿಕೊಂಡಿದೆ. ಪಕ್ಷಾಂತರ ನಿಷೇಧ ಕಾಯ್ದೆಯಲ್ಲಿನ ಲೋಪಗಳನ್ನೇ ಮುಂದಿಟ್ಟುಕೊಂಡು ನ್ಯಾಯಾಲಯ ಮತ್ತು ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿಕೊಂಡು ಪಕ್ಷಾಂತರ ಮಾಡಿಸುವ ಕೆಲಸವನ್ನು ಕಾಂಗ್ರೆಸ್ ಎಂದೂ ಮಾಡಿಲ್ಲ. ಈ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಅನ್ಯ ಪಕ್ಷದ ಶಾಸಕರನ್ನು ಸೆಳೆದು ಅಧಿಕಾರದ ಗದ್ದುಗೆ ಹಿಡಿಯುವುದೇ ಬಿಜೆಪಿಯ ಕೆಲಸ. ಪಕ್ಷಾಂತರ ನಿಷೇಧ ವ್ಯವಸ್ಥೆಯನ್ನು ಬಲಗೊಳಿಸುವ ಪ್ರಯತ್ನವನ್ನು ಬಿಜೆಪಿ ಮಾಡಿಲ್ಲ. ಕಾಯ್ದೆಯಲ್ಲಿನ ಲೋಪಗಳಿಂದ ಲಾಭ ಪಡೆದುಕೊಳ್ಳುತ್ತಿದೆ. ಅಧಿಕಾರ ಇರುವ ಪಕ್ಷದಿಂದಲೇ ಹೊರಗೆ ಹೋಗಲು ನಾಯಕರು ಹೊರಟಿದ್ದಾರೆ ಎಂದರೆ ಬಿಜೆಪಿಯ ಸ್ಥಿತಿ ಅರ್ಥವಾಗುತ್ತದೆ. ಜೆಡಿಎಸ್‌ನಲ್ಲಿ ದೇವೇಗೌಡರ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ ಮಕ್ಕಳಿಗೆ ಪಕ್ಷದ ಟಿಕೆಟ್ ಮೀಸಲಾಗುತ್ತಿರುವುದರಿಂದ ಬೇರೆ ನಾಯಕರು ಪಕ್ಷ ತೊರೆಯುತ್ತಿದ್ದಾರೆ. ಇದೆಲ್ಲದರ ನಡುವೆ ಪಕ್ಷಾಂತರಕ್ಕೆ ಕಡಿವಾಣ ಹಾಕಲು ಈ ಕಾಯ್ದೆಯನ್ನು ಇನ್ನಷ್ಟು ಬಲಗೊಳಿಸುವ ಪ್ರಯತ್ನ ಆಗಬೇಕಿದೆ.

ಐಶ್ವರ್ಯ ಮಹದೇವ್, ವಕ್ತಾರರು, ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ)

'ಕಾಂಗ್ರೆಸ್‌ನಲ್ಲಿ ಭವಿಷ್ಯ ಇಲ್ಲದಿರುವುದಕ್ಕೆ ಪಕ್ಷಾಂತರ'



ಇಡೀ ದೇಶದಲ್ಲಿ ಕಾಂಗ್ರೆಸ್ ಮುಳುಗುತ್ತಿದೆ. ಕೆಲವೇ ದಿನಗಳಲ್ಲಿ ಆಮ್ ಆದ್ಮಿ ಪಕ್ಷಕ್ಕಿಂತ ಕೆಳಕ್ಕೆ ಹೋಗಲಿದೆ. ಸೋನಿಯಾ ಗಾಂಧಿ ಅಥವಾ ರಾಹುಲ್ ಗಾಂಧಿಯೇ ಎಐಸಿಸಿ ಅಧ್ಯಕ್ಷರಾಗಬೇಕು, ಪ್ರಧಾನಿ ಹುದ್ದೆಯ ಅಭ್ಯರ್ಥಿಯಾಗಬೇಕು. ಬೇರೆ ನಾಯಕರನ್ನು ಹುಟ್ಟುಹಾಕುವ ಪ್ರಯತ್ನವನ್ನೇ ಕಾಂಗ್ರೆಸ್ ಮಾಡಿಲ್ಲ. ಜಗ ಮಾರುವ ನಾಯಕರನ್ನೊಬ್ಬ ಪ್ರಧಾನಿ ಆಗಬಾರದು ಎಂಬುದನ್ನು ಬಿಜೆಪಿ ಮಾಡಿ ತೋರಿಸಿದೆ. ಈ ಎಲ್ಲಾ ಕಾರಣಗಳಿಂದ ಕಾಂಗ್ರೆಸ್‌ನಲ್ಲಿ ಭವಿಷ್ಯ ಇಲ್ಲ ಎಂಬುದನ್ನು ಅರಿತರುವ ನಾಯಕರು ಬಿಜೆಪಿಗೆ ಸೇರುತ್ತಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಹೊರತುಪಡಿಸಿ ಬೇರೆ ರಾಜ್ಯಗಳಲ್ಲಿ ನಾಯಕರೇ ಇಲ್ಲ. ಬೇರೆ ಬೇರೆ ಪಕ್ಷದಲ್ಲಿನ ನಾಯಕರನ್ನು ಕಾಂಗ್ರೆಸ್ ಹುಡುಕುತ್ತಿದೆ. ರಾಜ್ಯದಲ್ಲಿ ಯಾವುದೇ ಬಿಜೆಪಿ ನಾಯಕರೂ ಕಾಂಗ್ರೆಸ್ ಸೇರುವುದಿಲ್ಲ. ಬಸನಗೌಡ ಪಾಟೀಲ ಯತ್ನಾಳ್ ಅವರು ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾತನಾಡಿದ್ದಾರೆಯೇ ಹೊರತು, ಬಿಜೆಪಿ ತೊರೆಯುತ್ತೇನೆ ಎಂದು ಹೇಳಿಲ್ಲ. ಅಭಿವೃದ್ಧಿ ವಿಷಯದಲ್ಲಿ ಪ್ರತಾಪಸಿಂಹ ಮತ್ತು ಶಾಸಕರ ಮಧ್ಯೆ ಪ್ರಜಾತಾಂತ್ರಿಕ ಮಾದರಿಯಲ್ಲಿ ಚರ್ಚೆ ನಡೆದಿದೆ. ಅದೇನು ಪಕ್ಷ ವಿರೋಧಿ ಕೆಲಸವಲ್ಲ. ಪಕ್ಷಾಂತರ ಎಂಬ ಪಿಡುಗನ್ನು ಮೊದಲು ಹುಟ್ಟು ಹಾಕಿದ್ದೇ ಕಾಂಗ್ರೆಸ್. ಚುನಾವಣಾ ವ್ಯವಸ್ಥೆ ಸುಧಾರಣೆ ಆಗಬೇಕು ಎಂದು ಬಿಜೆಪಿ ಬಯಸುತ್ತದೆ. ಪಕ್ಷಾಂತರಿಗಳಿಗೆ ಕಾನೂನಿನ ಬೇಲಿ ಹಾಕುವ ಪ್ರಯತ್ನವೂ ಸಾಗಿದೆ.

ಎನ್.ರವಿಕುಮಾರ್, ಶಾಸಕರು, ಪ್ರಧಾನ ಕಾರ್ಯದರ್ಶಿ, ಬಿಜೆಪಿ ರಾಜ್ಯ ಘಟಕ

'ಕುಟುಂಬ ರಾಜಕಾರಣ ಆರೋಪ ನೆಪವಷ್ಟೆ'



ಪಕ್ಷಾಂತರದಿಂದ ಜೆಡಿಎಸ್ ಪಕ್ಷವೇ ಹೆಚ್ಚು ಪೆಟ್ಟು ತಿಂದಿದೆ. ಪಕ್ಷ ಬಿಟ್ಟು ಹೋಗುವವರು ಕುಟುಂಬ ರಾಜಕಾರಣ ಎಂದು ಹೇಳುವುದು ನೆಪ ಅಷ್ಟೇ. ಅಧಿಕಾರದ ಲಾಲಸೆಯೇ ಪಕ್ಷಾಂತರಕ್ಕೆ ಮುಖ್ಯ ಕಾರಣ. ಪ್ರಜಾತಂತ್ರ ವ್ಯವಸ್ಥೆಯನ್ನು ಪಕ್ಷಾಂತರ ಹಾಳು ಮಾಡುತ್ತಿದೆ. ಚೆಲುವರಾಯಸ್ವಾಮಿ, ಪಕ್ಷದಲ್ಲಿ ಎಲ್ಲಾ ರೀತಿಯ ಅಧಿಕಾರಗಳನ್ನು ಅನುಭವಿಸಿದರು. ಶಾಸಕಾಂಗ ಪಕ್ಷದ ನಾಯಕರನ್ನಾಗಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಆಯ್ಕೆ ಮಾಡಲು ಅವರೇ ನಿರ್ಣಯ ಮಂಡಿಸಿದ್ದರು. ಅಧಿಕಾರ ಮತ್ತು ಸ್ಥಾನಮಾನ ಬೇಕಿದ್ದಾಗ ಯಾವುದೇ ಪ್ರಶ್ನೆ ಮಾಡುವುದಿಲ್ಲ. ಹೊರಗೆ ಹೋಗಿ ಮಾತನಾಡುವುದರಲ್ಲಿ ಅರ್ಥವಿಲ್ಲ. ದೇವೇಗೌಡರ ಕುಟುಂಬದಲ್ಲಿ ಯಾರೂ ಹಿಂಬಾಗಿಲಿನಿಂದ ರಾಜಕಾರಣಕ್ಕೆ ಬಂದಿಲ್ಲ. ಚುನಾವಣೆಯಲ್ಲಿ ಗೆದ್ದು ರಾಜಕಾರಣ ಮಾಡುತ್ತಿದ್ದಾರೆ. ಪಕ್ಷಾಂತರ ನಿಷೇಧ ಕಾಯ್ದೆಯನ್ನು ರಾಜೀವ್ ಗಾಂಧಿ 1985ರಲ್ಲಿ ಜಾರಿಗೆ ತಂದರು. 2003ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಬಲಪಡಿಸಿದ್ದರು. ಈ ಇಬ್ಬರು ನಾಯಕರ ಆಶಯವನ್ನು ಅವರ ಪಕ್ಷಗಳ ಈಗಿನ ನಾಯಕರೇ ಹಾಳು ಮಾಡುತ್ತಿದ್ದಾರೆ. ಪಕ್ಷಾಂತರ ನಿಷೇಧಕ್ಕೆ ಯಾವುದೇ ಕೊಡುಗೆ ನೀಡದೆ, ಕಾಯ್ದೆಯ ಲೋಪಗಳನ್ನು ಉಪಯೋಗಿಸಿಕೊಂಡು ಅನ್ಯ ಪಕ್ಷದ ಶಾಸಕರನ್ನು ಸೆಳೆದು ಅಧಿಕಾರ ಹಿಡಿಯುತ್ತಿದ್ದಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದಾರೆ.

ಎಚ್.ಎನ್. ದೇವರಾಜು, ವಕ್ತಾರರು, ಜೆಡಿಎಸ್ ರಾಜ್ಯ ಘಟಕ

ಡಿಕೆಶಿ, ಆನಂದ್ ಸಿಂಗ್ ರಹಸ್ಯ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನೆಗೆ ಸೋಮವಾರ ಬೆಳಿಗ್ಗೆ ದಿಢೀರ್ ಭೇಟಿ ನೀಡಿದ್ದು, ಕೆಲಕಾಲ ರಹಸ್ಯವಾಗಿ ಸಭೆ ನಡೆಸಿದ್ದಾರೆ. ಉಭಯ ನಾಯಕರ ಭೇಟಿಯು ರಾಜ್ಯ ರಾಜಕಾರಣದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಖಾಸಗಿ ಕಾರಿನಲ್ಲಿ ಬಂದ ಆನಂದ್ ಸಿಂಗ್, ಶಿವಕುಮಾರ್ ಅವರನ್ನು ಭೇಟಿಮಾಡಿದರು. ಅರ್ಧ ಗಂಟೆಗೂ ಹೆಚ್ಚು ಕಾಲ ಇಬ್ಬರೇ ಕೊಠಡಿಯಲ್ಲಿ ಕುಳಿತು ಚರ್ಚೆ ನಡೆಸಿದರು. ಬಳಿಕ ಸಚಿವರು ಅಲ್ಲಿಂದ ಹಿಂದಿರುಗಿದರು.

ಬಿಜೆಪಿಯಲ್ಲಿದ್ದ ಆನಂದ್ ಸಿಂಗ್ 2018ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸೇರಿದ್ದರು.

> **ಅಭಿವೃದ್ಧಿಗೆ ಸಂಬಂಧಿಸಿ ಆನಂದ್ ಸಿಂಗ್–ಡಿ.ಕೆ. ಶಿವಕುಮಾರ್ ಭೇಟಿಯಾಗಿದ್ದಾರೆ. ಅದರಲ್ಲಿ ರಾಜಕೀಯ ಇಲ್ಲ. ಆನಂದ್ ಸಿಂಗ್ ಅವರಿಗೆ ಬಿಜೆಪಿಯಲ್ಲಿ ಯಾವುದೇ ಅಸಮಾಧಾನ ಇಲ್ಲ.**
> **ಶ್ರೀರಾಮುಲು** ಸಾರಿಗೆ ಸಚಿವ

ಕಾಂಗ್ರೆಸ್‌ನಿಂದ ಶಾಸಕರಾಗಿದ್ದ ಅವರು ಮತ್ತೆ ಬಿಜೆಪಿಗೆ ಸೇರಿದ್ದರು. ಕಾಂಗ್ರೆಸ್‌ನಿಂದ ಬಿಜೆಪಿ ಸೇರಿದ್ದವರಲ್ಲಿ ಬಹುತೇಕರು ಮತ್ತೆ ಮರಳಲಿದ್ದಾರೆ ಎಂಬ ಸುದ್ದಿ ಹಲವು ದಿನಗಳಿಂದ ಚರ್ಚೆಯಲ್ಲಿದೆ. ಈ ಮಧ್ಯದಲ್ಲೇ ಆನಂದ್ ಸಿಂಗ್ ಮತ್ತು ಶಿವಕುಮಾರ್ ಭೇಟಿಯಾಗಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಎಡೆಮಾಡಿದೆ.

'ಪ್ರವಾಸೋದ್ಯಮ ಕುರಿತು ಚರ್ಚೆ': ಶಿವಕುಮಾರ್ ಪ್ರತಿನಿಧಿಸುತ್ತಿರುವ



ಡಿ.ಕೆ. ಶಿವಕುಮಾರ್

ಕನಕಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮೇಕೆದಾಟು ಸಂಗಮದ ಬಳಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಭೇಟಿಮಾಡಿ, ಚರ್ಚಿಸಿರುವುದಾಗಿ ಇಬ್ಬರೂ ನಾಯಕರು ಸ್ಪಷ್ಟನೆ ನೀಡಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, 'ನಾನು ಬಳ್ಳಾರಿ ಉಸ್ತುವಾರಿ ಸಚಿವನಾಗಿದ್ದ ಅವಧಿಯಲ್ಲಿ ತುಂಗಾ ಆರತಿ ಕಾರ್ಯಕ್ರಮ ಆರಂಭಿಸಲಾಗಿತ್ತು. ಅದೇ ರೀತಿ ಮೇಕೆದಾಟು ಬಳಿ ಕಾವೇರಿ ಆರತಿ ಕಾರ್ಯಕ್ರಮ ಆರಂಭಿಸಲು



ಆನಂದ್ ಸಿಂಗ್

ಮನವಿ ಮಾಡಿದ್ದೆ. ಆ ಬಗ್ಗೆ ಚರ್ಚಿಸಲು ಆನಂದ್ ಸಿಂಗ್ ನನ್ನ ಮನೆಗೇ ಬಂದಿದ್ದಾರೆ. ನೀವು ಹಿರಿಯ ನಾಯಕರಿದ್ದೀರಿ, ನಿಮ್ಮ ಮನೆಗೆ ನಾನೇ ಬರುತ್ತೇನೆ ಎಂದು ಬಂದರು. ಇದರಲ್ಲಿ ರಾಜಕೀಯ ಏನೂ ಇಲ್ಲ' ಎಂದರು. 'ಅವರು ಸಚಿವರಾಗಿದ್ದಾರೆ. ರಾಜಕಾರಣ ಮಾಡುವುದಾದರೆ ನಮ್ಮ ಮನೆಗೆ ಬರಬೇಕಿಲ್ಲ. ನಾನು ಮನೆಯಲ್ಲಿ ರಾಜಕಾರಣ ಮಾತನಾಡುವುದಿಲ್ಲ. ಅಂತಹ ಅಗತ್ಯವಿದ್ದರೆ ಹೋಟೆಲ್, ರೆಸಾರ್ಟ್‌ಗೆ ಹೋಗುತ್ತೇವೆ. ಆನಂದ್ ಸಿಂಗ್ ಭೇಟಿಯ ಸುದ್ದಿಗೆ ರೆಕ್ಕೆ, ಪುಕ್ಕ ನೀಡುವುದು ಬೇಡ' ಎಂದು ಅವರು ಹೇಳಿದರು.

'ಇಬ್ರಾಹಿಂರನ್ನು ಪಕ್ಷದಲ್ಲೇ ಉಳಿಸಿಕೊಳ್ಳಲು ಯತ್ನ'

ನವದೆಹಲಿ: ಕಾಂಗ್ರೆಸ್ ನಾಯಕರ ವಿರುದ್ಧ ಬಂಡೆದ್ದಿರುವ ಹಿರಿಯ ಮುಖಂಡ ಸಿ.ಎಂ. ಇಬ್ರಾಹಿಂ ಅವರು ಸೂಕ್ತ ಸ್ಥಾನಮಾನ ದೊರೆಯದ ಕಾರಣ ನೊಂದು ಬಹಿರಂಗ ಹೇಳಿಕೆ ನೀಡಿದ್ದಾರೆ. ಅವರನ್ನು ಸಮಾಧಾನಪಡಿಸಿ ಪಕ್ಷದಲ್ಲಿ ಉಳಿಸಿಕೊಳ್ಳಲು ಯತ್ನಿಸಲಾಗುವುದು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದುವರೆಗೆ ಉತ್ತಮ ಸ್ಥಾನಮಾನವನ್ನು ನೀಡಿರುವ ಕಾಂಗ್ರೆಸ್ ಪಕ್ಷವನ್ನು ಇಬ್ರಾಹಿಂ ಅವರು ಯಾವುದೇ ಕಾರಣಕ್ಕೂ ಸುಲಭವಾಗಿ ಬಿಡುವುದಿಲ್ಲ ಎಂಬ ವಿಶ್ವಾಸವಿದೆ ಎಂದರು.

ಕೋಮುವಾದಿಗಳು ಮತ್ತು ಅವರಿಗೆ ಬೆಂಬಲ ನೀಡುವವರ ವಿರುದ್ಧದ ಹೋರಾಟದಲ್ಲಿ ಇಬ್ರಾಹಿಂ ಸದಾ ಮುಂದೆ ಇದ್ದಾರೆ. ಈಗಲೂ ಅವರು ತತ್ವ– ಸಿದ್ಧಾಂತಗಳಿಗೆ ಬದ್ಧರಾಗಿಯೇ ಇದ್ದಾರೆ. ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿಲ್ಲ. ನನಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ನೀಡಿದ್ದು, ಯು.ಟಿ. ಖಾದರ್ ಮತ್ತಿತರ ಮುಖಂಡರನ್ನೂ ಗುರುತಿಸಿ ಸೂಕ್ತ ಜವಾಬ್ದಾರಿ ನೀಡಿದೆ' ಎಂದರು.

'ಸಿ.ಎಂ.ಇಬ್ರಾಹಿಂಗೆ ಅನ್ಯಾಯ; ಕಾಂಗ್ರೆಸ್‌ನ ಪ್ರವೃತ್ತಿ'

ಬಾಗಲಕೋಟೆ: 'ಮುಸ್ಲಿಮರನ್ನು ಮತಬ್ಯಾಂಕ್ ಆಗಿ ಬಳಕೆ ಮಾಡಿ ಕೊಂಡು ಅಧಿಕಾರ ಕೊಡಬೇಕಾದಾಗ ದೂರ ಇಡುವ ಕಾಂಗ್ರೆಸ್‌ನ ಪ್ರವೃತ್ತಿಗೆ ವಿಧಾನಪರಿಷತ್ ಸದಸ್ಯ ಸಿ.ಎಂ.ಇಬ್ರಾಹಿಂಗೆ ಮಾಡಿರುವ ಅನ್ಯಾಯವೇ ನಿದರ್ಶನ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಕುಟುಕಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತತ್ವ–ಸಿದ್ಧಾಂತದ ರಾಜಕಾರಣಿ ಸಿ.ಎಂ.ಇಬ್ರಾಹಿಂ ಅವರನ್ನು ಕಾಂಗ್ರೆಸ್‌ಗೆ ಕರೆತಂದ ಸಿದ್ದರಾಮಯ್ಯ ಈಗ ನಡುನೀರಿನಲ್ಲಿ ಕೈಬಿಟ್ಟಿದ್ದಾರೆ. ಅದೇ ಪರಿಸ್ಥಿತಿ ಹಿರಿಯ ರಾಜಕಾರಣಿ ಎಸ್.ಆರ್.ಪಾಟೀಲ ಅವರಿಗೂ ಆಗಿದೆ' ಎಂದು ಆರೋಪಿಸಿದರು.

ನಿಧನ ವಾರ್ತೆ

ಎಚ್.ಎನ್ ರಾಮಯ್ಯ



ಅರಕಲಗೂಡು: ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೀಲುಕುದುರೆ ಕಲಾವಿದ, ತಾಲ್ಲೂಕಿನ ಹೊನ್ನವಳ್ಳಿಯ ಎಚ್.ಎನ್.ರಾಮಯ್ಯ (90) ಸೋಮವಾರ ನಿಧನರಾದರು. ಅವರಿಗೆ ಇತ್ತೀಚೆಗಷ್ಟೇ 2021ನೇ ಸಾಲಿಗೆ ಅಕಾಡೆಮಿಯ ಪ್ರಶಸ್ತಿ ನೀಡಿ ಪುರಸ್ಕರಿಸಿತ್ತು.

ಕೀಲುಕುದುರೆ ಕಲಾವಿದರಾಗಿ ರಾಜ್ಯಾದ್ಯಂತ 3ಸಾವಿರಕ್ಕೂ ಹೆಚ್ಚು ಪ್ರದರ್ಶನ ನೀಡಿದ್ದರು. ಪತ್ನಿ ಜಯಲಕ್ಷಮ್ಮ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮಂಗಳವಾರ ಬೆಳಿಗ್ಗೆ ಹೊನ್ನವಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.


ನಾನು ಹುಲಿಯೂ ಅಲ್ಲ, ಕುರಿಯೂ ಅಲ್ಲ: ಖಾದರ್

ಮಂಗಳೂರು: 'ನಾನು ಹುಲಿಯೂ ಅಲ್ಲ, ಕುರಿಯೂ ಅಲ್ಲ. ಮನುಷ್ಯತ್ವ ಮತ್ತು ನಿಯತ್ತು ಇರುವ ಮನುಷ್ಯ' ಎಂದು ವಿಧಾನಸಭೆಯಲ್ಲಿ ವಿರೋಧಪಕ್ಷದ ಉಪನಾಯಕ ಯು.ಟಿ.ಖಾದರ್ ಹೇಳಿದರು.

'ಹುಲಿ ಶಿಕಾರಿಗೆ ಹುಲಿಯನ್ನೇ ಕಟ್ಟಬೇಕು, ಕುರಿಯನ್ನಲ್ಲ' ಎಂಬ ಸಿ.ಎಂ. ಇಬ್ರಾಹಿಂ ಹೇಳಿಕೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೀಗೆ ಉತ್ತರಿಸಿದರು.

'ಸಿ.ಎಂ.ಇಬ್ರಾಹಿಂ ಅವರ ಹೇಳಿಕೆಗೂ, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕನಾಗಿ ನನ್ನ ನೇಮಕಕ್ಕೂ ಯಾವುದೇ ಸಂಬಂಧವಿಲ್ಲ. ಈ ಹುದ್ದೆ ಖಾಲಿ ಇತ್ತು. ಪಕ್ಷದ ವರಿಷ್ಠರು ನನಗೆ ಅವಕಾಶ ನೀಡಿದ್ದಾರೆ' ಎಂದು ಖಾದರ್ ಹೇಳಿದರು.

'ಕಾಂಗ್ರೆಸ್‌ನ ಭಸ್ಮಾಸುರ ಸಿದ್ದರಾಮಯ್ಯ'



ಎಚ್.ವಿಶ್ವನಾಥ್

ಮೈಸೂರು: 'ಆ ಕ್ಷೇತ್ರ, ಈ ಕ್ಷೇತ್ರ ಎನ್ನುತ್ತಿರುವ ಸಿದ್ದರಾಮಯ್ಯ ಒಬ್ಬರೇ ಗಂಡಸಾ? ಬೇರೆ ಕ್ಷೇತ್ರಗಳಲ್ಲಿ ಗಂಡಸರೇ ಇಲ್ಲವೇ? ಚಮಚಾಗಿರಿ ಮಾಡುವವರಷ್ಟೇ ಸ್ಪರ್ಧಿಸುವಂತೆ ಅವರನ್ನು ಕರೆಯುತ್ತಿದ್ದಾರೆ. ಕರೆಯುವವರಿಗೆ ಗೆಲ್ಲಿಸುವ ತಾಕತ್ತು ಇದೆಯೇ?' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪ್ರಶ್ನಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,, 'ಸಿದ್ದರಾಮಯ್ಯ ಕಾಂಗ್ರೆಸ್ ಪಾಲಿನ ಭಸ್ಮಾಸುರ. ಪಕ್ಷ ಮುಗಿಸಿಯೇ ಹೋಗುತ್ತಾರೆ. ಸಿ.ಎಂ.ಇಬ್ರಾಹಿಂ ಇಲ್ಲದಿದ್ದರೆ ಸಿದ್ದರಾಮಯ್ಯ ಶಾಸಕರೂ ಆಗುತ್ತಿರಲಿಲ್ಲ. ಬಾದಾಮಿಯಲ್ಲಿ ಗೆಲ್ಲಲು ನೆರವಾದ ಅವರನ್ನು ಸಾಯುವವರೆಗೆ ನೆನಪಿನಲ್ಲಿಟ್ಟುಕೊಳ್ಳಬೇಕು' ಎಂದರು.

'ಎಸ್.ಆರ್.ಪಾಟೀಲ ಅವರಿಗೆ ಪರಿಷತ್ ಚುನಾವಣೆಗೆ ಟಿಕೆಟ್ ಕೊಡಲಿಲ್ಲ. ಸಿದ್ದರಾಮಯ್ಯ ಅವರಿಗಾಗಿ ಎಷ್ಟು ಜನರ ಮನೆ ಹಾಳಾಯಿತು? ಯಾರ ಮನೆ ಹಾಳಾದರೇನು, ಅವರು ಮಾತ್ರ ಚೆನ್ನಾಗಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಕಾಂಗ್ರೆಸ್‌ನ ಮುಖ್ಯ ಮತದಾರರಾದ ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಏನಾದರು? ಡಾ.ಪರಮೇಶ್ವರ, ಖರ್ಗೆ ಎಲ್ಲಿ ಹೋದರು? ರೋಷನ್ ಬೇಗ್ ಅವರನ್ನು ಮುಗಿಸಿದ್ದೀರಿ. ತನ್ವೀರ್ ಸೇಠ್ ಕಥೆ ಏನು? ಕುರುಬ ನಾಯಕರನ್ನು ನೀಟಾಗಿ ಮುಗಿಸಿದಿರಿ. ನನ್ನನ್ನು, ಚಿಮ್ಮನಕಟ್ಟಿ, ರೇವಣ್ಣ ಅವರನ್ನು ಮುಗಿಸಿದಿರಿ. ಸ್ವಂತ ಸಮುದಾಯದವರನ್ನೇ ರಾಜಕೀಯದಲ್ಲಿ ಬೆಳೆಯಲು ಬಿಡದವರು ನೀವು. ಎಲ್ಲರನ್ನೂ ಮುಗಿಸಿ ನೀವೊಬ್ಬರೆ ಏನೂ ಮಾಡಲು ಸಾಧ್ಯವಿಲ್ಲ. ಕಾಂಗ್ರೆಸ್‌ನ ತತ್ವ ಸಿದ್ಧಾಂತವೇ ಬೇರೆ, ಸಿದ್ದರಾಮಯ್ಯ ಅವರ ತತ್ವ ಸಿದ್ಧಾಂತವೇ ಬೇರೆ. ಕೃತಜ್ಞತೆ ಇಲ್ಲದ ಜನನಾಯಕ' ಎಂದು ಕಿಡಿಕಾರಿದರು.

ಮೊಹಮ್ಮದ್ ನಲಪಾಡ್ ಅಧಿಕಾರ ಸ್ವೀಕಾರ

ಬೆಂಗಳೂರು: ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಮೊಹಮ್ಮದ್ ನಲಪಾಡ್ ಸೋಮವಾರ ಅಧಿಕಾರ ಸ್ವೀಕರಿಸಿದರು.

ಯುವ ಕಾಂಗ್ರೆಸ್ ಸಮಿತಿ ಚುನಾವಣೆಯಲ್ಲಿ ನಲಪಾಡ್ ಗೆಲುವು ಸಾಧಿಸಿದ್ದರು. ಆದರೆ, ಅವರನ್ನು ಅನರ್ಹಗೊಳಿಸಿ ಎರಡನೇ ಸ್ಥಾನದಲ್ಲಿದ್ದ ರಕ್ಷಾ ರಾಮಯ್ಯ ಅವರಿಗೆ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನ ನೀಡಲಾಗಿತ್ತು. ನಂತರ ಇಬ್ಬರ ನಡುವೆ ಸಂಧಾನ ನಡೆಸಿ, ಅಧಿಕಾರದ ಅವಧಿ ಹಂಚಿಕೆ ಮಾಡಲಾಗಿತ್ತು. ರಕ್ಷಾ ರಾಮಯ್ಯ ಅವಧಿ ಅಂತ್ಯಗೊಂಡಿದ್ದು, ನಲಪಾಡ್ ಯುವ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದರು.



ಮೊಹಮ್ಮದ್ ನಲಪಾಡ್ ಅವರ ಪದಗ್ರಹಣ ಸಮಾರಂಭ ಇದೇ 10ರಂದು ನಡೆಯಲಿದೆ. ಆದರೆ, ಸೋಮವಾರದಿಂದಲೇ ಅಧಿಕಾರ ಸ್ವೀಕರಿಸುವಂತೆ ಕಾಂಗ್ರೆಸ್ ವರಿಷ್ಠರು ನಿರ್ದೇಶನ ನೀಡಿದ್ದರು. ಹೀಗಾಗಿ, ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಕಚೇರಿಯಲ್ಲಿ ಪೂಜೆ ಸಲ್ಲಿಸಿದ್ದಾರೆ. ಅಲ್ಲಿ ಸರ್ವಧರ್ಮ ಪ್ರಾರ್ಥನೆ ನಡೆಸುವ ಮೂಲಕ ಕಚೇರಿ ಪ್ರವೇಶಿಸಿದರು.

ಮೊಹಮ್ಮದ್ ನಲಪಾಡ್ ಅವರ ತಂದೆ, ಶಾಸಕ ಎನ್.ಎ. ಹ್ಯಾರಿಸ್, ಅವರ ತಂದೆ ಎನ್.ಎ. ಮೊಹಮ್ಮದ್ ಮತ್ತು ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಜಬ್ಬಾರ್ ಉಪಸ್ಥಿತರಿದ್ದರು.

ಪತ್ತಿನ ಸಹಕಾರ ಸಂಘ: 3.27 ಕೋಟಿ ದುರುಪಯೋಗ– ದೂರು

ಮೃತರ ಹೆಸರಲ್ಲಿ 30 ಸಾಲದ ಖಾತೆ!

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯವರು ಮೃತನ ಹೆಸರಿನಲ್ಲಿ 30 ಸಾಲದ ಖಾತೆ ಸೃಷ್ಟಿಸಿ, ₹3.27 ಕೋಟಿ (₹ 3,27,75,958) ದುರ್ಬಳಕೆ ಮಾಡಿರುವ ಪ್ರಕರಣ ಬಯಲಾಗಿದೆ. ನಂಬಿಕೆ ದ್ರೋಹ, ವಂಚನೆ ಹಿನ್ನೆಲೆಯಲ್ಲಿ ಮಾಜಿ ಅಧ್ಯಕ್ಷ ಸೇರಿ 17 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಈ ಕುರಿತು ನೆಹರೂ ನಗರದಲ್ಲಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಪತ್ತಿನ ಸಹಕಾರ ಸಂಘ(ನಿ)ದ ಮಾಜಿ ಅಧ್ಯಕ್ಷ, ಮಾಜಿ ಕಾರ್ಯದರ್ಶಿ ಮತ್ತು ನಿರ್ದೇಶಕರ ವಿರುದ್ಧ ಇಲ್ಲಿನ ಸಿಇಎನ್ (ಸೈಬರ್, ಎಕನಾಮಿಕ್ ಆ್ಯಂಡ್ ನಾರ್ಕೋಟಿಕ್) ಅಪರಾಧ ಪೊಲೀಸ್ ಠಾಣೆಯಲ್ಲಿ ಭಾನುವಾರ ಪ್ರಕರಣ ದಾಖಲಾಗಿದೆ.

'2015ರ ಜೂನ್ 1ರಿಂದ 2020ರ ಅ.18ರ ನಡುವಿನ ಅವಧಿಯಲ್ಲಿ ಈ ಅವ್ಯವಹಾರ ನಡೆದಿದೆ. ಆರೋಪಿಗಳು, ಸದಸ್ಯರಿಂದ ಸಂಗ್ರಹಿಸಿದ ಹಣವನ್ನು ಕಾನೂನುಬಾಹಿರವಾಗಿ ತಮ್ಮ ಸ್ವಂತ ಲಾಭಕ್ಕೆ ಬಳಸಿಕೊಂಡು ಮೋಸ ಮಾಡಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

18 ಮಂದಿ ವಿರುದ್ಧ ಪ್ರಕರಣ: ಈ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದು, ಇನ್‌ಸ್ಪೆಕ್ಟರ್ ಬಿ.ಆರ್. ಗಡ್ಡೇಕರ್ ನೇತೃತ್ವದಲ್ಲಿ ತನಿಖೆ ಆರಂಭಿಸಿದ್ದಾರೆ. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲು ಅವರು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಂಘದ ಗೌರವ ಕಾರ್ಯದರ್ಶಿ ಸುರೇಶ ವಡ್ಡರ ದೂರು ನೀಡಿದ್ದಾರೆ. ಮಾಜಿ ಅಧ್ಯಕ್ಷ ನಾತಾಜಿ ಪೀರಾಜೆ ಪಾಟೀಲ (ಹೆಸ್ಕಾಂ ಉಪವಿಭಾಗ –3ರ ಮಹಾಂತೇಶ ನಗರ ಶಾಖೆಯ ಲೈನ್ ಮೆಕ್ಯಾನಿಕ್ ಗ್ರೇಡ್–2 ಆಗಿರುವ ಅವರು ಇತ್ತೀಚೆಗೆ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ದ ದಾಳಿಗೆ ಒಳಗಾಗಿದ್ದರು. ನ.24ರಿಂದಲೇ ಜಾರಿಗೆ ಬರುವಂತೆ ಅಮಾನತುಗೊಳಿಸಿ ಕಾರ್ಯಪಾಲಕ ಎಂಜಿನಿಯರ್ ಆದೇಶ ಹೊರಡಿಸಿದ್ದರು). ಪ್ರಕರಣದಲ್ಲಿ ದಾಖಲಾಗಿರುವ ಎಲ್ಲರೂ ಹೆಸ್ಕಾಂ ನೌಕರರಾಗಿದ್ದಾರೆ.

> **ಸಂಘದ ಈಗಿನ ಕಾರ್ಯದರ್ಶಿ ಆರೋಪಿಸಿದಂತೆ ಏನೂ ನಡೆದಿಲ್ಲ. ನಾವೂ ಪ್ರತಿಯಾಗಿ ಕಾನೂನು ಕ್ರಮ ಕೈಗೊಳ್ಳುತ್ತೇವೆ**
> **ನಾತಾಜಿ ಪಾಟೀಲ,** ಮಾಜಿ ಅಧ್ಯಕ್ಷ

ದಾಖಲೆ ಪರಿಶೀಲನೆ: ಚುನಾವಣೆ ನಡೆದು ಹೊಸ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದ ನಂತರ ದಾಖಲೆಗಳನ್ನು ಪರಿಶೀಲಿಸಿದಾಗ ಅಕ್ರಮ ನಡೆದಿರುವುದು ಗೊತ್ತಾಗಿದೆ. ಸದಸ್ಯೇತರರ ಹೆಸರಿಗೆ ಹಣ ವರ್ಗಾವಣೆ ಮಾಡಿಕೊಂಡು ದುರುಪಯೋಗ ಪಡಿಸಿಕೊಂಡಿರುವುದು ಕಂಡುಬಂದಿದೆ ಎಂದು ಆರೋಪಿಸಲಾಗಿದೆ.

ಸಂಘದ ಕಲಂ 64ರ ಅಡಿ ನಡೆಸಿದ ವಿಚಾರಣಾ ವರದಿ, ಸಹಕಾರ ಸಂಘದ ಉಪನಿಬಂಧಕರು ಸಹಕಾರ ಸಂಘದ ಕಲಂ 68ರ ಅಡಿ ಹೊರಡಿಸಿದ ಆದೇಶ, ಆಡಳಿತ ಮಂಡಳಿಯ ನಿರ್ಣಯ, 2020–21ರ ಲೆಕ್ಕಪತ್ರಗಳ ಪರಿಶೋಧನಾ ವರದಿ ಆಧರಿಸಿ ದೂರು ಕೊಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕ್ಷೇಮ ಕುಶಲ

ಚಾರಣ

ಆನಂದಕ್ಕೂ ಆರೋಗ್ಯಕ್ಕೂ

ಚಾರಣದ ಪ್ರಪಂಚಕ್ಕೆ ನಿಮ್ಮನ್ನು ತೆರೆದುಕೊಳ್ಳುವುದರಿಂದ ನೀವು ಸದಾ ಚೈತನ್ಯದಿಂದಲೂ ಲವಲವಿಕೆಯಿಂದಲೂ ಇರುವಿರಿ.





ಡಾ. ವಿನಯ ಶ್ರೀನಿವಾಸ್

ನೀವು ಎಂದಾದರೂ ಚಾರಣಕ್ಕೆ ಹೋಗಿದ್ದೀರಾ? ಇಲ್ಲ ಎಂದಾದರೆ, ಈಗಲೇ ಚಾರಣಗಳನ್ನು ಆಯೋಜಿಸುವ ಯಾವುದಾದರೊಂದು ಸಂಸ್ಥೆಯ ಸದಸ್ಯರಾಗಿ; ಚಾರಣಗಳಲ್ಲಿ ನಿಮಗೆ ಸೂಕ್ತವಾದುದನ್ನು ಆಯ್ಕೆ ಮಾಡಿ, ವರ್ಷಕ್ಕೆ ಒಂದೋ ಎರಡೋ ಚಾರಣಕ್ಕೆ ಹೊರಡಿ. ಅದು ನಿಮ್ಮನ್ನು ಶಿಸ್ತುಬದ್ಧ ಮನುಷ್ಯನನ್ನಾಗಿಸಬಹುದು. ನೀವು ಆರೋಗ್ಯವಂತರಾಗಿರಲು ನೆರವಾಗಬಲ್ಲದು. ಚಾರಣಕ್ಕೂ ಆರೋಗ್ಯಕ್ಕೂ ಎಲ್ಲಿಯ ಸಂಬಂಧ – ಎಂದು ಗೊಂದಲವಾಗುತ್ತಿದೆಯೇ? ಇಲ್ಲಿದೆ ವಿವರಣೆ.

ನೀವು ಚಾರಣಕ್ಕೆ ಹೆಸರನ್ನು ನೊಂದಾಯಿಸಿದ ತಕ್ಷಣವೇ ನಿಮಗೆ ಕೆಲವು ಮಾನದಂಡಗಳನ್ನು ತಿಳಿಸುತ್ತಾರೆ. ಅದರಲ್ಲಿ ಮುಖ್ಯವಾಗಿ ನಿಮ್ಮ ದೇಹದ ತೂಕ ಮತ್ತು ಬೊಜ್ಜನ್ನು ಸೂಚಿಸುವ ಸೂಚ್ಯಂಕ (ಬಾಡಿ ಮಾಸ್ ಇಂಡೆಕ್ಸ್) ಸಾಮಾನ್ಯ ಮಿತಿಯಲ್ಲಿರಬೇಕೆನ್ನುತ್ತಾರೆ. ಅದರೊಂದಿಗೆ ನಿಮ್ಮ ಬೆನ್ನು, ಕಾಲು ಮತ್ತು ಸೊಂಟದ ಸ್ನಾಯುಗಳು ಸಶಕ್ತವಾಗಿರಬೇಕೆಂದೂ ಎಚ್ಚರಿಸುತ್ತಾರೆ. ಅದಕ್ಕಿಂತಲೂ ಮುಖ್ಯವಾಗಿ ನಿಮ್ಮ ಹೃದಯ ಮತ್ತು ಶ್ವಾಸಕೋಶಗಳ ಕಾರ್ಯಕ್ಷಮತೆಯನ್ನೂ ಪರೀಕ್ಷಿಸಿಕೊಳ್ಳಿ ಎನ್ನುತ್ತಾರೆ. ಏಕೆಂದರೆ, ಎತ್ತರದ ಸ್ಥಳಗಳಿಗೆ ಚಾರಣ ಹೋದಾಗ ಅಲ್ಲಿ ಆಮ್ಲಜನಕದ ಮಟ್ಟ ಕಡಿಮೆಯಿರುತ್ತದೆ. ಆ ವಾತಾವರಣದಲ್ಲಿಯೂ ನಿಮ್ಮ ಹೃದಯ ಮತ್ತು ಶ್ವಾಸಕೋಶಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ನಿಮ್ಮ ಕಾಲುಗಳ ಸ್ನಾಯುಗಳು ಏರುಮುಖದ ರಸ್ತೆಯ ನಡಿಗೆಗೆ ಆಯಾಸಗೊಳ್ಳಬಾರದು. ಹಾಗೆಯೇ ನಿಮ್ಮ ಬೆನ್ನಿನ ಸ್ನಾಯುಗಳಿಗೆ ಚಾರಣದ ವೇಳೆಯಲ್ಲಿ ನಿಮ್ಮ ಅಗತ್ಯ ಸಾಮಗ್ರಿಗಳಿರುವ ಚೀಲವನ್ನು ಹೊತ್ತು ನಡೆಯುವ ಸಾಮರ್ಥ್ಯವಿರಬೇಕು. ಆದ್ದರಿಂದ, ಆ ತಯಾರಿಯನ್ನು ಮಾಡಿಕೊಂಡ ನಂತರವೇ ನಿಮ್ಮಿಂದ ಚಾರಣ ಸಾಧ್ಯವಾಗುವುದು. ಬಹುತೇಕ ಆಯೋಜಕರು ಹೇಳುವಂತೆ ಮೂವತ್ತರಿಂದ ನಲವತ್ತು ನಿಮಿಷಗಳಲ್ಲಿ ನೀವು ಅನಾಯಾಸವಾಗಿ ಐದು ಕಿಲೋಮೀಟರ್ ಓಡಬಲ್ಲಿರೆಂದರೆ ನಿಮ್ಮ ಹೃದಯ ಮತ್ತು ಶ್ವಾಸಕೋಶಗಳು ಸಮರ್ಥವಾಗಿವೆ ಎಂದು ಅರ್ಥ.

ಅಯ್ಯೋ, ಇದೆಲ್ಲಾ ನನ್ನಿಂದ ಸಾಧ್ಯವಿಲ್ಲ – ಎಂದು ಹಿಂದಕ್ಕೆ ಸರಿಯದಿರಿ. ಯಾರಿಗೂ ಇದು ಒಮ್ಮೆಲೇ ಆಗುವುದಿಲ್ಲ. ಕ್ರಮಬದ್ಧವಾಗಿ ಮತ್ತು ಶಿಸ್ತುಬದ್ದವಾಗಿ ಅಭ್ಯಾಸ ಮಾಡಿದರೆ ಖಂಡಿತ ಸಾಧ್ಯ.

ತಯಾರಿ ಹೇಗೆ?

- ನೊಂದಣಿ ಮಾಡಿದ ದಿನದಿಂದಲೇ ನಡಿಗೆಯನ್ನು ಶುರು ಮಾಡಿ. ಆರಂಭದಲ್ಲಿ ನಿಮ್ಮ ಮೊದಲಿನ ವೇಗದಲ್ಲಿಯೇ ನಡೆಯಿರಿ. ಕ್ರಮೇಣ ನಿಮ್ಮ ವೇಗವನ್ನು ಹೆಚ್ಚಿಸುತ್ತಾ ಬನ್ನಿ. ಸುಮಾರು ಒಂದು ತಿಂಗಳಾದ ನಂತರ ಪ್ರತಿ ಎರಡು ನಿಮಿಷದ ನಡಿಗೆಯ ಮಧ್ಯದಲ್ಲಿ ಮೂವತ್ತು ಸೆಕೆಂಡುಗಳ ಓಟವನ್ನು ಜೊತೆಗೂಡಿಸಿಕೊಳ್ಳಿ. ನಡೆಯುವಾಗ ಮತ್ತು ಓಡುವಾಗ ಆದಷ್ಟು ಮೂಗಿನಲ್ಲಿಯೇ ಉಸಿರಾಡಿ. ನೀವು ಟ್ರೆಡ್‌ಮಿಲ್ ಬಳಸುವವರಾದರೆ ಅದರಲ್ಲಿ ವೇಗ ಮತ್ತು ಸಮಯವನ್ನು ಹೊಂದಿಸಿಕೊಳ್ಳುವುದು ಸುಲಭ. ಕಡ್ಡಾಯವಾಗಿ ದಿನವೂ ಮೂವತ್ತರಿಂದ ನಲವತ್ತು ನಿಮಿಷ ಅದಕ್ಕಾಗಿ ಮೀಸಲಿಡಿ.
- ನೀವು ಈಜು ಬಲ್ಲವರಾದರೆ ವಾರದಲ್ಲಿ ಎರಡು ಬಾರಿಯಾದರೂ ಈಜುವುದು ಒಳ್ಳೆಯದು. ಇದು ನಿಮ್ಮ ಹೃದಯ ಮತ್ತು ಶ್ವಾಸಕೋಶಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಮತ್ತು ನಿಮ್ಮ ಬೆನ್ನಿನ ಸ್ನಾಯುಗಳನ್ನು ಸಶಕ್ತಗೊಳಿಸಲು ಅತ್ಯುತ್ತಮ ವ್ಯಾಯಾಮ.
- ನಡಿಗೆಯ ಜೊತೆಯಲ್ಲಿ ಅರ್ಧ ತಾಸಾದರೂ ಬೆನ್ನು ಮತ್ತು ತೊಡೆಗಳ ಸ್ನಾಯುಗಳಿಗಾಗಿ ವ್ಯಾಯಾಮ ಮುಖ್ಯ. ಯೋಗಾಭ್ಯಾಸ ಮಾಡುವವರು ವೃಕ್ಷಾಸನ, ವೀರಭದ್ರಾಸನ, ಸೂರ್ಯನಮಸ್ಕಾರ, ಭುಜಂಗಾಸನ, ಹಾಲಾಸನ ಮತ್ತು ಶಲಭಾಸನವನ್ನು ನಿತ್ಯವೂ ಅಭ್ಯಸಿಸುವುದು ಉತ್ತಮ.
- ಬಿರುಸಾದ ವ್ಯಾಯಾಮ ಮಾಡುವ ಅಭ್ಯಾಸವಿದ್ದವರು ಬೆನ್ನು, ತೊಡೆಗಳ ಸ್ನಾಯುಗಳನ್ನು ಶಕ್ತಿಗೊಳಿಸುವ ಸೂಕ್ತ ಚಲನೆಗಳನ್ನು ಸ್ಕ್ವಾಟ್ಸ್, ಲಾಂಜಸ್, ಪ್ಲ್ಯಾಂಕ್ಸ್, ಪುಷ್ ಅಪ್ಸ್ ಮೊದಲಾದುವನ್ನು ದಿನವೂ ಅಭ್ಯಾಸ ಮಾಡಬೇಕು.
- ಮಂಡಿಗಳ ಕಾಳಜಿಯೂ ಬಹಳ ಮುಖ್ಯ. ಇದಕ್ಕಾಗಿ ದಿನವೂ ಹತ್ತರಿಂದ ಹದಿನೈದು ನಿಮಿಷ ಸೈಕಲ್ ತುಳಿಯುವ ಅಭ್ಯಾಸ ಒಳ್ಳೆಯದು.
- ದಿನವೂ ಐದರಿಂದ ಹತ್ತು ನಿಮಿಷಗಳ ಪ್ರಾಣಾಯಾಮ ಶ್ವಾಸಕೋಶಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ.
- ನಡಿಗೆ ಮತ್ತು ವ್ಯಾಯಾಮಗಳನ್ನು ಮಾಡುವಾಗ ಅಂಗಾಂಶಗಳ ದುರಸ್ಥಿ ಪ್ರಕ್ರಿಯೆಗೆ ಪ್ರೊಟೀನ್ ಬೇಕು. ನಿಮ್ಮ ಆಹಾರದಲ್ಲಿ ಅಧಿಕ ಪ್ರೊಟೀನ್ ಮತ್ತು ಪೌಷ್ಟಿಕಾಂಶಗಳಿರಲಿ; ಜಂಕ್ ಆಹಾರ ಬೇಡ.
- ಕಚೇರಿಗಳಲ್ಲಿ ಲಿಫ್ಟ್ ಬದಲಿಗೆ ಮೆಟ್ಟಿಲುಗಳನ್ನು ಬಳಸಿ.
- ಬಿಡುವಿದ್ದಾಗ ಸ್ನೇಹಿತರೊಂದಿಗೆ ಹತ್ತಿರದ ಸ್ಥಳಗಳಿಗೆ ಚಾರಣ ಹೊರಡಿ. ಇದು ನಿಮ್ಮಲ್ಲಿ ಆತ್ಮವಿಶ್ವಾಸವನ್ನು ತುಂಬಬಹುದು.

ನೆನಪಿಡಿ: ಚಾರಣಕ್ಕೆ ತಯಾರಾಗುವ ಹಾದಿಯು ರೋಚಕವಾದುದು. ದಿನದಿಂದ ದಿನಕ್ಕೆ ನಿಮ್ಮ ಶರೀರದ ಸದೃಢತೆಯ ಬಗ್ಗೆ ನೀವೇ ಅಚ್ಚರಿ ಪಡುವಿರಿ. ಬೆಳಿಗ್ಗೆ ಬೇಗನೇ ಏಳುವ, ಸಮಯವನ್ನು ಹೊಂದಿಸಿಕೊಳ್ಳುವ ಕಲೆಯನ್ನು ಕರಗತ ಮಾಡಿಕೊಳ್ಳುವಿರಿ. ಪ್ರಕೃತಿಗೆ ಹತ್ತಿರವಾಗುವಿರಿ, ಅದರ ಬಗ್ಗೆ ವಿಶೇಷ ಒಲವನ್ನು ಬೆಳೆಸಿಕೊಳ್ಳುವಿರಿ. ಹೊಸ ಸ್ನೇಹಿತರ ಸಂಪಾದನೆಯ ಮೂಲಕ ನಿಮ್ಮ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳುವಿರಿ. ಒಟ್ಟಾರೆ, ಚಾರಣದ ಪ್ರಪಂಚಕ್ಕೆ ನಿಮ್ಮನ್ನು ತೆರೆದುಕೊಳ್ಳುವುದರಿಂದ ಮನಸ್ಸಿನ ದುಗುಡ, ಚಿಂತೆಗಳು ಮರೆಯಾಗಿ, ನೀವು ಸದಾ ಚೈತನ್ಯದಿಂದಲೂ ಲವಲವಿಕೆಯಿಂದಲೂ ಇರುವಿರಿ. ಬದುಕಿನ ಪ್ರತಿಯೊಂದು ಕ್ಷಣವನ್ನೂ ಉತ್ಸಾಹದಿಂದ ಅನುಭವಿಸುವಿರಿ.



ಸಂವಹನದಲ್ಲೂ ಸಂಬಂಧದಲ್ಲೂ ಮೊಬೈಲ್

ರಮ್ಯಾ ಶ್ರೀಹರಿ

ಮಾನವ ಸಂಬಂಧಗಳು ಪ್ರತಿಯೊಂದು ಕಾಲಘಟ್ಟದಲ್ಲಿಯೂ ಆ ಕಾಲಕ್ಕೇ ವಿಶಿಷ್ಟವಾದ ಸವಾಲುಗಳನ್ನು ಎದುರಿಸುತ್ತಲೇ ಇರುತ್ತದೆ. ಬಾಂಧವ್ಯಕ್ಕೆ ಅತಿ ಮುಖ್ಯವಾದ ಸಂವಹನವು ಎಲ್ಲ ಕಾಲದಲ್ಲಿಯೂ ಒಂದಲ್ಲ ಒಂದು ರೀತಿಯಿಂದ ಸಂಕೀರ್ಣವೇ ಹೌದು. ಇದಕ್ಕೆ ಕಾರಣ ಸಂವಹನದ ಮೂಲಗುಣವೇ ಹೊರತು ಮತ್ತೇನಲ್ಲ.

ನಮ್ಮ ಜೀವನದಲ್ಲಿ ತುಂಬಾ ಮುಖ್ಯವಾದ ಸಂಬಂಧಗಳು ನಾವಾಡುವ ಮಾತಿನ ಮೇಲಷ್ಟೇ ನಿಂತಿದೆಯೆ? ಪ್ರೀತಿ, ನಂಬಿಕೆ, ವಿಶ್ವಾಸ ಇವು ಕೂಡ ಮಾತಿನಿಂದ ಮಾತ್ರ ಉಂಟಾಗುವಂಥವೆ? ಬಾಂಧವ್ಯವನ್ನು ಸ್ಥಿರಗೊಳಿಸುವುದಕ್ಕೆ ನಿರಂತರ ಮಾತಿನ ಮೂಲಕ ನಡೆಸುವ ಸಂವಹನವಷ್ಟೇ ಸಾಕಾಗುತ್ತದೆಯೆ? ಮಾತಿನ ಮೂಲಕ ನಿಜಕ್ಕೂ ಬೇರೆಯವರ ಮನಸ್ಸಿನಲ್ಲೇನಿದೆ ಎನ್ನುವುದನ್ನು ಅರಿಯಲು ಸಾಧ್ಯವೆ? ಮಾತೆನ್ನುವುದು ಪದೇ ಪದೇ ಗುರಿತಪ್ಪಿಹೋಗುವ ಬಾಣದಂತೆ – ನಾವು ಇಚ್ಛಿಸಿಲ್ಲದ ಅರ್ಥಗಳನ್ನು ಬಿಟ್ಟುಕೊಡುತ್ತದೆ. ಹೀಗಿದ್ದ ಮೇಲೆ ಮಾತನ್ನು ನಂಬಿ ಸಂಬಂಧ ಬೆಳೆಸುವುದು ಸರಿಯೇ? ಮೊದಲೇ ಸಂವಹನ ಮತ್ತು ಬಾಂಧವ್ಯದ ನಡುವೆ ಇಷ್ಟೊಂದು ತೀವ್ರವಾದ ಹೋರಾಟ ನಡೆಯುತ್ತಿರುವ ಅಖಾಡಕ್ಕೆ ತಂತ್ರಜ್ಞಾನ ಎಂಬ ಮತ್ತೊಂದು ಪ್ರಬಲ ಆಟಗಾರನನ್ನು ತಂದು ಸೇರಿಸಿದರೆ ಹೇಗಿರುತ್ತದೆ? ಇದೇ ಮಾನವ ಸಂಬಂಧಗಳು ನಮ್ಮ ಕಾಲಘಟ್ಟದಲ್ಲಿ ಎದುರಿಸಬೇಕಾಗಿರುವ ಸವಾಲು.

ಝೂಮ್, ಸ್ಕೈಪ್ ಮುಂತಾದ ವಿಡಿಯೊ ಕಾಲಿಂಗ್ ವಿಧಾನಗಳ ಮೂಲಕ ಎಷ್ಟೇ ದೂರವಿದ್ದರೂ ಎದುರಿಗಿದ್ದಂತೆಯೇ ಮಾತನಾಡಬಹುದು, ಮಾತು ಮುಗಿದ ಮೇಲೆ ವಿಡಿಯೊ ಕಾಲನ್ನು ಡಿಸ್‌ಕನೆಕ್ಟ್ ಮಾಡಲೇಬೇಕಲ್ಲವೇ? ಆದರೆ ಅದೇ ವ್ಯಕ್ತಿ ನಮ್ಮ ಮನೆಯಲ್ಲಿ ನಮ್ಮ ಜೊತೆಯಲ್ಲಿಯೇ ಕುಳಿತಿದ್ದಾಗ ಆಡುವ ಮಾತನ್ನೆಲ್ಲಾ ಆಡಿ ಮುಗಿಸಿದ ಮೇಲೂ ಎದ್ದು ಹೋಗಬೇಕೆಂಬುದಿಲ್ಲ; ಮಾತಿಲ್ಲದೆಯೂ ಒಬ್ಬರನ್ನೊಬ್ಬರು ನೋಡಬಹುದು, ಪರಸ್ಪರರ ಉಪಸ್ಥಿತಿಯಲ್ಲಿ ಸುಮ್ಮನೆ ಇರಬಹುದು. 'ಸಂಬಂಧಗಳಲ್ಲಿನ ಆತ್ಮೀಯತೆ ಕೇವಲ ಮಾತಿಗೆ ಅಥವಾ ವಿಡಿಯೊ/ಫೋಟೊಗೆ ಸೀಮಿತವಾದುದಲ್ಲ' – ಎಂದು ತಂತ್ರಜ್ಞಾನ ನೀಡುತ್ತಿರುವ ಬಾಂಧವ್ಯದ ವ್ಯಾಖ್ಯೆಗೆ ಆಕ್ಷೇಪಿಸುವುದು ಸಾಧ್ಯವಿದೆ. ಬಾಂಧವ್ಯ ಎಂದರೆ ಮಾತಷ್ಟೇ ಅಲ್ಲ, ಹೌದು; ಆದರೆ ಹೃದಯಕ್ಕೆ ಹತ್ತಿರವಾದ ಮಾತೇ ಇಲ್ಲದೆ ಬಾಂಧವ್ಯ ಇರುವುದು ಸಾಧ್ಯವೇ? ಮಧ್ಯರಾತ್ರಿಯಾದರೂ ನಿದ್ರೆ ಹತ್ತಿರ ಸುಳಿಯದೆ, ಚಿಂತೆ ಬೃಹದಾಕಾರವಾಗಿ ಬೆಳೆದು ನಮ್ಮನ್ನು ನುಂಗಲು ಸಜ್ಜಾಗಿ ನಿಂತಿದೆಯೇನೋ ಎನಿಸುವ ಕ್ಷಣದಲ್ಲಿ, ಒಂದು ಸುದೀರ್ಘ ವಾಟ್ಸ್‌ಆ್ಯಪ್ ಸಂದೇಶ ಟೈಪಿಸಿ ಗೆಳೆಯನಿಗೊ/ಗೆಳತಿಗೋ (ಅವರ ನಿದ್ರೆ ಭಂಗವಾದೀತೆಂಬ ಸಣ್ಣ ಅಳುಕೂ ಇರದೇ!) ಕಳಿಸಿದ ನಂತರದ ನಿರಾಳತೆಯನ್ನು ಅನುಭವಿಸುವುದು ತಂತ್ರಜ್ಞಾನದಿಂದ ಸಾಧ್ಯವಾಗಿದೆ. ನಮ್ಮ ಸಂದೇಶವನ್ನು ಅವರು ಬೆಳಗ್ಗೆ ಎದ್ದು ನೋಡಬಹುದು, ಎರಡು ದಿನ ಬಿಟ್ಟು ಉತ್ತರಿಸಬಹುದು ಅಥವಾ ಉತ್ತರಿಸದೆಯೂ ಇರಬಹುದು. ಆದರೆ ಉದ್ವಿಗ್ನತೆಯ ಆ ಕ್ಷಣದಲ್ಲಿ ನಾವು ಮತ್ತೊಂದು ಜೀವಿಯನ್ನು, ಅದರಲ್ಲೂ ನಮ್ಮನ್ನು ಅರ್ಥಮಾಡಿಕೊಳ್ಳುವವರನ್ನು ತಲುಪುವುದು ಸಾಧ್ಯವಿದೆ ಎನ್ನುವುದೇ ಆ ಕ್ಷಣಕ್ಕೆ ನಮ್ಮ ತಳಮಳವನ್ನು ಉಪಶಮನಗೊಳಿಸುತ್ತದೆ. ಹೀಗೆ ದಿನದ ಯಾವ ಹೊತ್ತಿನಲ್ಲಿಯಾದರೂ ಮನದ ಭಾವನೆಯನ್ನು ಹೊತ್ತ ಇಂತಹ ಸಂದೇಶಗಳನ್ನು ಪರಸ್ಪರ ಹಂಚಿಕೊಳ್ಳಬಹುದು; ಅದನ್ನು ತಕ್ಷಣ ಓದಬೇಕೆಂಬ, ಪ್ರತಿಕ್ರಿಯೆ ನೀಡಬೇಕೆಂಬ ಒತ್ತಡ ಇಲ್ಲ ಎಂಬ ಮೊದಲೇ ಮಾಡಿಕೊಂಡ ಒಪ್ಪಂದ ಇಬ್ಬರ ಮಧ್ಯೆ ಇದ್ದರೆ ಸಾಕು.

ಎಷ್ಟೋ ಬಾರಿ ಮುಖಾಮುಖಿಯಾಗಿ ಕುಳಿತು ಮಾತನಾಡಿದಾಗ ಮಾತು ಜಗಳಕ್ಕೆ ತಿರುಗಬಹುದಾದ ಸಂದರ್ಭಗಳಲ್ಲಿ ವಾಟ್ಸ್‌ಆ್ಯಪ್ ಬರಹದ ಮೂಲಕ ಅನಿಸಿಕೆಗಳನ್ನು ಹಂಚಿಕೊಂಡಾಗ ಹಲವು ವಿಷಯಗಳು ತಿಳಿಯಾಗಬಹುದು. ಬರಹದ ಮೂಲಕ ಎಲ್ಲವನ್ನೂ ಹೇಳಲಾಗುವುದಿಲ್ಲ; ಹೇಳಿದರೂ ಬರಹದ ಹಿಂದಿನ ಭಾವವನ್ನು ತಪ್ಪಾಗಿ ಗ್ರಹಿಸುವ ಸಾಧ್ಯತೆಯಿದೆಯಾದರೂ, ನಾವು ಹೇಳಬೇಕಾಗಿರುವುದನ್ನು ಯಾವ ಮುಜುಗರವೂ ಇಲ್ಲದೆ, ನಿಷ್ಠುರವಾಗಿದ್ದರೂ ಗೌರವಯುತವಾಗಿ, ಸ್ಪಷ್ಟವಾಗಿ ತಿಳಿಸಬಹುದು.

ಯಾವಾಗಲೋ ಒಮ್ಮೆ ಬೇಸರವಾದಾಗ ನಮಗೆ ಬೇಕಾದವರೊಡನೆ ನಡೆಸಿದ ವಾಟ್ಸ್‌ಆ್ಯಪ್ ಸಂಭಾಷಣೆ, ಹಂಚಿಕೊಂಡ ಫೋಟೊಗಳನ್ನು ಮತ್ತೆ ನೋಡುತ್ತಾ ಕುಳಿತಾಗ ಮನಸ್ಸು ಮುದಗೊಳ್ಳುತ್ತದೆ, ಅವರೊಂದಿಗಿನ ಸೌಹಾರ್ದ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಬೇಕೆನಿಸುತ್ತದೆ, ಜಗಳ/ಭಿನ್ನಾಭಿಪ್ರಾಯವೇನಿದ್ದರೂ ಅದನ್ನು ಮರೆತುಬಿಡೋಣ ಅಂತಲೂ ಎನಿಸುವಷ್ಟು ಅವರೆಡೆಗೆ ಹೃದಯ ಮೃದುವಾಗುತ್ತದೆ.

ಹೌದು, ಪ್ರತ್ಯಕ್ಷ ಸಂಭಾಷಣೆಯ ಆತ್ಮೀಯತೆಯನ್ನು ಯಾವ ತಂತ್ರಜ್ಞಾನವೂ ಸೃಷ್ಟಿಸುವುದು ಸಾಧ್ಯವಿಲ್ಲವಲ್ಲ. ಆದರೆ ಪ್ರತ್ಯಕ್ಷವಾಗಿ ಭೇಟಿಯಾಗುವುದು ಸಾಧ್ಯವೇ ಇಲ್ಲದಿದ್ದಾಗ ಮಾಡುವುದಾದರೂ ಏನು? ಬಾಂಧವ್ಯವನ್ನು ಗಟ್ಟಿಗೊಳಿಸಬೇಕೆನ್ನುವ ಇಚ್ಛೆಯಿದ್ದಲ್ಲಿ ಎಂಥದ್ದೇ ಅಡೆತಡೆಯೂ ಬಾಧಿಸುವುದಿಲ್ಲ. ಅಂದ ಮೇಲೆ ಮೊಬೈಲ್ ಅಥವಾ ಲ್ಯಾಪ್‌ಟಾಪ್‌ನ ಪರದೆ ಒಂದು ತಡೆಗೋಡೆಯಾಗುವುದು ಹೇಗೆ?

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 4: ಜೀವಕ್ರಿಯೆಗಳು

ಜೀವಶಾಸ್ತ್ರ

ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು:

- **ಜೀರ್ಣಕ್ರಿಯೆ**-ಸಂಕೀರ್ಣವಾದ ಆಹಾರ ಪದಾರ್ಥಗಳನ್ನು ಸರಳ ರೂಪಕ್ಕೆ ಪರಿವರ್ತಿಸುವುದು.
- **ಬಾಷ್ಪವಿಸರ್ಜನೆ**-ಸಸ್ಯಗಳಲ್ಲಿ ಹೆಚ್ಚಾದ ನೀರು ಆವಿಯ ರೂಪದಲ್ಲಿ ನಷ್ಟವಾಗುವುದು.
- **ವಿಸರ್ಜನೆ**-ನೈಟ್ರೋಜನ್‌ಯುಕ್ತ ತ್ಯಾಜ್ಯ ವಸ್ತುಗಳನ್ನು ದೇಹದಿಂದ ಹೊರಹಾಕುವ ಕ್ರಿಯೆ.
- **ವಸ್ತುಸ್ಥಾನಾಂತರಣ**- ದ್ಯುತಿಸಂಶ್ಲೇಷಣೆ ಕ್ರಿಯೆಯಲ್ಲಿ ತಯಾರಾದ ಆಹಾರ ಪದಾರ್ಥಗಳನ್ನು ಎಲೆಯಿಂದ ಸಸ್ಯದ ಎಲ್ಲಾ ಭಾಗಗಳಿಗೆ ಸಾಗಿಸುವ ಕ್ರಿಯೆ.
- ಪತ್ರರಂಧ್ರಗಳು ದ್ಯುತಿಸಂಶ್ಲೇಷಣೆ, ಉಸಿರಾಟ, ಬಾಷ್ಪವಿಸರ್ಜನೆ ಕ್ರಿಯೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ.
- ಕ್ಸೈಲಂ ಸಸ್ಯದ ಜಲವಾಹಕ ಅಂಗಾಂಶ, ಫ್ಲೋಯಂ ಆಹಾರವಾಹಕ ಅಂಗಾಂಶವಾಗಿದೆ.
- ದುಗ್ಧರಸವು ಬಣ್ಣವಿಲ್ಲದ ದ್ರವವಾಗಿದ್ದು ದೇಹದ ರಕ್ಷಣೆಯಲ್ಲಿ ಸಹಾಯ ಮಾಡುತ್ತದೆ.
- ನೆಫ್ರಾನ್‌ಗಳು ಮೂತ್ರಪಿಂಡದ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಮೂಲ ಘಟಕಗಳು.
- ಆರೋಗ್ಯವಂತ ಮಾನವನ ದೇಹದ ರಕ್ತದ ಒತ್ತಡ 120/80 ಮಿ.ಮೀ. ಪಾದರಸದ ಎತ್ತರ. ಇದನ್ನು ಸ್ಪಿಗ್ಮೋಮನೋಮೀಟರ್ ಎಂಬ ಉಪಕರಣದಿಂದ ಅಳೆಯುತ್ತಾರೆ.
- ಅಭಿಧಮನಿಗಳು ದೇಹದ ವಿವಿಧ ಭಾಗಗಳಿಂದ ಹೃದಯಕ್ಕೆ ರಕ್ತವನ್ನು ತರುತ್ತವೆ, ಅಪಧಮನಿಗಳು ಹೃದಯದಿಂದ ದೇಹದ ವಿವಿಧ ಭಾಗಗಳಿಗೆ ರಕ್ತವನ್ನು ಕೊಂಡೊಯ್ಯುತ್ತವೆ.
- ಹೀಮೋಗ್ಲೋಬಿನ್ ರಕ್ತಕ್ಕೆ ಕೆಂಪುಬಣ್ಣವನ್ನು ಕೊಡುತ್ತದೆ ಹಾಗೂ ಆಕ್ಸಿಜನ್ ಸಾಗಿಸುತ್ತದೆ.

ಮಾದರಿ ಪ್ರಶ್ನೆ-ಉತ್ತರಗಳು

1.ಪೋಷಣೆಯ ವಿಧಗಳನ್ನು ಹೆಸರಿಸಿ. ಪ್ರತಿಯೊಂದಕ್ಕೂ ಉದಾಹರಣೆ ಕೊಡಿ.

- ಸ್ವಪೋಷಣೆ

ಉದಾ|| ಹಸಿರು ಸಸ್ಯಗಳು

- ಪರಪೋಷಣೆ

ಉದಾ|| ಪ್ರಾಣಿಗಳು, ಶಿಲೀಂದ್ರಗಳು

2.ಇಮ್ಮಡಿ ಪರಿಚಲನೆ ಎಂದರೇನು? ಇದರ ಎರಡು ವಿಧಗಳನ್ನು ತಿಳಿಸಿ.

-ಪ್ರತಿ ಒಂದು ರಕ್ತಪರಿಚಲನೆಗೆ ರಕ್ತವು ಎರಡು ಸಾರಿ ಹೃದಯದ ಮೂಲಕ ಹಾದುಹೋಗುತ್ತದೆ. ಇದನ್ನು ಇಮ್ಮಡಿ ಪರಿಚಲನೆ ಎನ್ನುವರು.

2 ವಿಧಗಳು

- ಪುಪ್ಪಸಕ ಪರಿಚಲನೆ
- ದೈಹಿಕ ಪರಿಚಲನೆ

3.ಸಸ್ಯಗಳು ತ್ಯಾಜ್ಯವಸ್ತುಗಳನ್ನು ಹೇಗೆ ಹೊರಹಾಕುತ್ತವೆ?

- ಎಲೆಗಳು ಮತ್ತು ಹೂವಿನ ದಳಗಳನ್ನು ಉದುರಿಸುವುದರ ಮೂಲಕ
- ಬೇರುಗಳ ಮೂಲಕ ಮಣ್ಣಿಗೆ
- ಅಂಟು ಮತ್ತು ರಾಳಗಳ ಮೂಲಕ
- ಮರದ ತೊಗಟೆಯನ್ನು ಉದುರಿಸುವುದರ ಮೂಲಕ.

4.ವಾಯುವಿಕೆ ಮತ್ತು ಅವಾಯುವಿಕೆ ಉಸಿರಾಟಗಳಿಗಿರುವ ವ್ಯತ್ಯಾಸಗಳೇನು?

-ವಾಯುವಿಕೆ ಉಸಿರಾಟ

- ಆಕ್ಸಿಜನ್ ಉಪಸ್ಥಿತಿಯಲ್ಲಿ ನಡೆಯುತ್ತದೆ.
- CO2 ಮತ್ತು ನೀರು ಉತ್ಪನ್ನಗಳು.
- ಹೆಚ್ಚು ಶಕ್ತಿ ಬಿಡುಗಡೆಯಾಗುತ್ತದೆ.

ಅವಾಯುವಿಕೆ ಉಸಿರಾಟ

- ಆಕ್ಸಿಜನ್ ಅನುಪಸ್ಥಿತಿಯಲ್ಲಿ ನಡೆಯುತ್ತದೆ.
- CO2 ಮತ್ತು ಈಥೈಲ್ ಆಲ್ಕೋಹಾಲ್ ಉತ್ಪನ್ನಗಳು.
- ಕಡಿಮೆ ಶಕ್ತಿ ಬಿಡುಗಡೆಯಾಗುತ್ತದೆ.

5.ರಕ್ತದ 4 ಘಟಕಗಳನ್ನು ಹೆಸರಿಸಿ ಮತ್ತು ಅವುಗಳ ಕಾರ್ಯಗಳನ್ನು ತಿಳಿಸಿ.


- ಪ್ಲಾಸ್ಮಾ- ವಸ್ತುಗಳ ಸಾಗಾಣಿಕೆ
- ಕೆಂಪುರಕ್ತಕಣಗಳು- ಆಕ್ಸಿಜನ್ ಸಾಗಾಣಿಕೆ
- ಬಿಳಿಯರಕ್ತಕಣಗಳು- ದೇಹದ ರಕ್ಷಣೆ
- ಕಿರುತಟ್ಟೆಗಳು- ರಕ್ತಹೆಪ್ಪುಗಟ್ಟಲು ಸಹಾಯ.

6.ದ್ಯುತಿಸಂಶ್ಲೇಷಣೆ ಪ್ರಕ್ರಿಯೆಯಲ್ಲಿ ಜರುಗುವ 3 ಘಟನೆಗಳು ಯಾವುವು?

-(i)ಕ್ಲೋರೋಫಿಲ್‌ನಿಂದ ಬೆಳಕಿನ ಶಕ್ತಿ ಹೀರುವಿಕೆ.

(ii)ಬೆಳಕಿನ ಶಕ್ತಿಯು ರಾಸಾಯನಿಕ ಶಕ್ತಿಯಾಗಿ ಪರಿವರ್ತನೆಯಾಗುವುದು ಮತ್ತು ನೀರಿನ ಅಣುಗಳು ಹೈಡ್ರೋಜನ್ & ಆಕ್ಸಿಜನ್ ಆಗಿ ವಿಭಜಿಸಲ್ಪಡುವುದು.

(iii)ಕಾರ್ಬನ್ ಡೈಆಕ್ಸೈಡ್ ಕಾರ್ಬೋಹೈಡ್ರೇಟ್ ಆಗಿ ವಿಭಜಿಸಲ್ಪಡುವುದು.



7.ಗ್ಲೂಕೋಸ್ ವಿಭಜನೆಯ 3 ಹಂತಗಳನ್ನು ವಿವರಿಸಿ.

-ಕೋಶದ್ರವ್ಯದಲ್ಲಿ ಗ್ಲೂಕೋಸ್ ಅಣು ಪೈರುವೇಟ್ ಅಣುವಾಗಿ ಪರಿವರ್ತನೆಯಾಗುತ್ತದೆ.

i)**ಆಕ್ಸಿಜನ್ ಅನುಪಸ್ಥಿತಿ**- ಎಥೆನಾಲ್, ಕಾರ್ಬನ್ ಡೈಆಕ್ಸೈಡ್ ಉಂಟಾಗಿ ಶಕ್ತಿಯ ಬಿಡುಗಡೆಯಾಗುತ್ತದೆ.

ii)**ಆಕ್ಸಿಜನ್ ಕೊರತೆ**- ಲ್ಯಾಕ್ಟಿಕ್ ಆಮ್ಲ ಉಂಟಾಗಿ ಶಕ್ತಿಯ ಬಿಡುಗಡೆಯಾಗುತ್ತದೆ.

iii)**ಆಕ್ಸಿಜನ್ ಉಪಸ್ಥಿತಿ**- ಕಾರ್ಬನ್ ಡೈಆಕ್ಸೈಡ್ ಮತ್ತು ನೀರು ಉಂಟಾಗಿ ಹೆಚ್ಚು ಶಕ್ತಿ ಬಿಡುಗಡೆಯಾಗುತ್ತದೆ.

8.ಮಾನವನ ಹೃದಯದ 4 ಕೋಣೆಗಳನ್ನು ಹೆಸರಿಸಿ. ಅವುಗಳ ಕಾರ್ಯ ತಿಳಿಸಿ.

i)**ಬಲಹೃತ್ಕರ್ಣ**-ಆಕ್ಸಿಜನ್‌ರಹಿತ ರಕ್ತವನ್ನು ದೇಹದ ವಿವಿಧ ಭಾಗಗಳಿಂದ ಸ್ವೀಕರಿಸುತ್ತದೆ.

ii)**ಬಲಹೃತ್ಕುಕ್ಷಿ**-ಆಕ್ಸಿಜನ್‌ರಹಿತ ರಕ್ತವನ್ನು ಶ್ವಾಸಕೋಶಗಳಿಗೆ ಪಂಪುಮಾಡುತ್ತದೆ.

iii)**ಎಡಹೃತ್ಕರ್ಣ**-ಆಕ್ಸಿಜನ್‌ಸಹಿತ ರಕ್ತವನ್ನು ಶ್ವಾಸಕೋಶಗಳಿಂದ ಸ್ವೀಕರಿಸುತ್ತದೆ.

iv)**ಎಡಹೃತ್ಕುಕ್ಷಿ**-ಆಕ್ಸಿಜನ್‌ಸಹಿತ ರಕ್ತವನ್ನು ದೇಹದ ಎಲ್ಲಾ ಭಾಗಗಳಿಗೆ ಪಂಪುಮಾಡುತ್ತದೆ.

9.ಮಾನವನ ವಿಸರ್ಜನಾಂಗವ್ಯೂಹದ ವಿವಿಧ ಅಂಗಗಳನ್ನು ಹೆಸರಿಸಿ.

i)**ಮೂತ್ರಪಿಂಡಗಳು**-ರಕ್ತವನ್ನು ಶುದ್ಧಗೊಳಿಸುತ್ತವೆ.

ii)**ಮೂತ್ರನಾಳಗಳು**- ಮೂತ್ರವನ್ನು ಮೂತ್ರಪಿಂಡಗಳಿಂದ ಮೂತ್ರಕೋಶಕ್ಕೆ ಸಾಗಿಸುವ ನಾಳಗಳು.

iii)**ಮೂತ್ರಕೋಶ**- ಮೂತ್ರವನ್ನು ಸಂಗ್ರಹಿಸಿಟ್ಟುಕೊಳ್ಳುತ್ತದೆ.

iv)**ಮೂತ್ರದ್ವಾರ**-ಇದರ ಮೂಲಕ ಮೂತ್ರ ಹೊರಹೋಗುತ್ತದೆ.


v)**ರೀನಲ್ ಅಪಧಮನಿ**- ಅಶುದ್ಧ ರಕ್ತವನ್ನು ಮೂತ್ರಪಿಂಡಗಳಿಗೆ ತರುತ್ತವೆ.

vi)**ರೀನಲ್ ಅಭಿಧಮನಿ**- ಶುದ್ಧ ರಕ್ತವನ್ನು ಮೂತ್ರಪಿಂಡಗಳಿಂದ ಕೊಂಡೊಯ್ಯುತ್ತದೆ.

10.ಮೂತ್ರ ವಿಭಜನೆಯ 3 ಹಂತಗಳನ್ನು ಹೆಸರಿಸಿ.

- ಗ್ಲಾಮರುಲಸ್‌ನ ಸೋಸುವಿಕೆ
- ವ್ಯತ್ಯಸ್ಥ ಮರುಹೀರಿಕೆ
- ನಳಿಕಾ ಸ್ರವಿಕೆ

ಪರೀಕ್ಷೆಗೆ ನೀಡಬಹುದಾದ ಸಂಭವನೀಯ ಚಿತ್ರಗಳು:



ಎ)ಮಾನವನ ಜೀರ್ಣಾಂಗವ್ಯೂಹ (ಚಿತ್ರ-6.6)

ಬಿ) ತೆರೆದ ಮತ್ತು ಮುಚ್ಚಿದ ಪತ್ರರಂಧ್ರ (ಚಿತ್ರ-6.3 (ಎ)ಮತ್ತು (ಬಿ))

ಸಿ)ಮನುಷ್ಯನ ಹೃದಯದ ಛೇಧ ನೋಟ (ಚಿತ್ರ-6.10)

ಡಿ)ಮನುಷ್ಯರ ವಿಸರ್ಜನಾಂಗವ್ಯೂಹ (ಚಿತ್ರ-6.13)

ಇ)ನೆಫ್ರಾನ್‌ನ ರಚನೆ (ಚಿತ್ರ-6.14)

ಬಾಲರಾಜು.ಎ ಎಂ.ಎಸ್ಸಿ., ಎಂ.ಇಡಿ.
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಹತ್ತನೇ ತರಗತಿಯ ಜೀವಶಾಸ್ತ್ರದ 'ಲೈಫ್ ಪ್ರೊಸೆಸ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಪ್ರಜಾವಾಣಿ ನೋಡಿಯೊ

ಘನಸ್ಥಿತಿ

ಹಿಂದಿನ ಸಂಚಿಕೆಯಿಂದ

ರಸಾಯನ ಶಾಸ್ತ್ರ

ಪಿಯುಸಿ


ಕೇಂದ್ರಿತ ಘಟಕ ಕೋಶಗಳು ಮೂರು ವಿಧಗಳಾಗಿವೆ

(i) ಕಾಯ-ಕೇಂದ್ರಿತ ಘಟಕ ಕೋಶ: ಇಂತಹ ಒಂದು ಘಟಕ ಕೋಶ ಒಂದು ಕಣವನ್ನು (ಪರಮಾಣು, ಪರಮಾಣು ಅಥವಾ ಅಯಾನು) ತನ್ನ ಕಾಯದ ಕೇಂದ್ರದಲ್ಲಿ ಹೊಂದಿರುವ ಜೊತೆಗೆ ಮೂಲೆಗಳಲ್ಲೂ ಸಹ ಕಣಗಳನ್ನು ಹೊಂದಿರುತ್ತದೆ.

(ii) ಮುಖ ಕೇಂದ್ರೀಕೃತ ಘನ ಘಟಕ ಕೋಶ: ಅಂತಹ ಘಟಕ ಕೋಶವು ಪ್ರತಿ ಮುಖದ ಮಧ್ಯಭಾಗದಲ್ಲಿ ಒಂದು ಕಣವನ್ನು ಹೊಂದಿರುವ ಜೊತೆಗೆ ಮೂಲೆಗಳಲ್ಲೂ ಸಹ ಕಣಗಳನ್ನು ಹೊಂದಿರುತ್ತದೆ.

(iii) ಕೊನೆಯ ಕೇಂದ್ರಿತ ಘಟಕ ಕೋಶಗಳು: ಅಂತಹ ಒಂದು ಘಟಕ ಕೋಶದಲ್ಲಿ ಒಂದು ಘಟಕ ಕಣವು ಅದರ ಮೂಲೆಗಳಲ್ಲಿ ಇರುವ ಕಣಗಳ ಜೊತೆಗೆ ಯಾವುದೇ ಎರಡು ವಿರುದ್ಧ ಮುಖಗಳ ಮಧ್ಯದಲ್ಲಿ ಇರುತ್ತದೆ.

ಎಲ್ಲವುಗಳಿಂದ 7 ವಿಧದ ಆದಿಮ ಘಟಕ ಕೋಶಗಳಿರುವುದನ್ನು ನೋಡಬಹುದಾಗಿದೆ




ಸ್ಫಟಿಕದಲ್ಲಿನ 7 ಆದಿಮ ಘಟಕ ಕೋಶಗಳು.


ಒಂದು ಘಟಕ ಕೋಶದಲ್ಲಿನ ಪರಮಾಣುಗಳ ಸಂಖ್ಯೆ: ಯಾವುದೇ ಸ್ಫಟಿಕ ಜಾಲರಿಯು ಅತಿದೊಡ್ಡ ಸಂಖ್ಯೆಯ ಘಟಕ ಕೋಶಗಳಿಂದ ಮಾಡಲ್ಪಟ್ಟಿದೆ ಮತ್ತು ಪ್ರತಿ ಜಾಲರಿಯ ಬಿಂದುವು ಒಂದು ಘಟಕ ಕಣದಿಂದ (ಪರಮಾಣು, ಅಣು ಅಥವಾ ಅಯಾನ್) ಆಕ್ರಮಿಸಲ್ಪಟ್ಟಿರುತ್ತದೆ. ಪ್ರತಿಯೊಂದು ಕಣದ ಯಾವ ಭಾಗವು ನಿರ್ದಿಷ್ಟ ಘಟಕ ಕೋಶಕ್ಕೆ ಸೇರಿದೆ ಎಂಬುದನ್ನು ಈಗ ನಾವು ಅಭ್ಯಾಸ ಮಾಡೋಣ.

ನಾವು ಮೂರು ವಿಧದ ಘನ ಘಟಕ ಕೋಶಗಳನ್ನು ಪರಿಗಣಿಸಬೇಕು ಮತ್ತು ಸರಳತೆಗಾಗಿ ಘಟಕ ಕಣವು ಪರಮಾಣು ಎಂದು ಊಹಿಸಿಕೊಳ್ಳಬೇಕು.

ಆದಿಮ ಘನ ಘಟಕ ಕೋಶವು ಮೂಲೆಯಲ್ಲಿ ಮಾತ್ರ ಪರಮಾಣುಗಳನ್ನು ಹೊಂದಿರುತ್ತದೆ. ಪ್ರತಿ ಪರಮಾಣು ಎಂಟು ಪಕ್ಕದ ಘಟಕ ಕೋಶಗಳ ನಡುವೆ ಒಂದು ಮೂಲೆಯಲ್ಲಿ ಕೆಳಗಿನ ಚಿತ್ರದಲ್ಲಿ ತೋರಿಸಿದಂತೆ ಕಾಣುವಂತೆ



ಹಂಚಲಾಗಿದೆ, ಒಂದೇ ಪದರದಲ್ಲಿ ನಾಲ್ಕು ಘಟಕ ಕೋಶಗಳಿದ್ದು ಮತ್ತು ಇನ್ನು ನಾಲ್ಕು ಘಟಕ ಕೋಶಗಳು ಮೇಲಿನ (ಅಥವಾ ಕೆಳ) ಪದರದಲ್ಲಿವೆ. ಆದ್ದರಿಂದ, ಪರಮಾಣುವಿನ (ಅಥವಾ ಅಣುವಿನ ಅಥವಾ ಅಯಾನು) ಕೇವಲ 1/8 ನೇ ಭಾಗ ಮಾತ್ರ ಒಂದು ನಿರ್ದಿಷ್ಟ ಘಟಕ ಕೋಶಕ್ಕೆ ಸೇರಿದೆ. ಕೆಳಗಿನ ಚಿತ್ರದ ತೋರಿಸಿದಂತೆ ಆದಿಮ ಘನ ಘಟಕ ಕೋಶವನ್ನು ಮೂರು ವಿಧಗಳಲ್ಲಿ ಬಿಂಬಿಸಲಾಗಿದೆ. ಕೆಳಗಿನ ಚಿತ್ರ(ಸಿ)ನಲ್ಲಿರುವ ಪ್ರತಿಯೊಂದು ಸಣ್ಣ ಗೋಳ ಆಕ್ರಮಿಸಿಕೊಂಡಿರುವ ಕಣದ ಕೇಂದ್ರಸ್ಥಾನವನ್ನು ಮಾತ್ರ ಪ್ರತಿನಿಧಿಸುತ್ತದೆ ಮತ್ತು ಅದರ ನಿಜವಾದ ಗಾತ್ರವನ್ನಲ್ಲ. ಇಂತಹ ರಚನೆಗಳನ್ನು ತೆರೆದ ರಚನೆಗಳೆಂದು ಕರೆಯಲಾಗುತ್ತದೆ. ತೆರೆದ ರಚನೆಗಳಲ್ಲಿ ಕಣಗಳ ಜೋಡಣೆಯನ್ನು ಅನುಸರಿಸುವುದು ಸುಲಭವಾಗಿದೆ.



ಮೇಲಿನ ಚಿತ್ರ (ಬಿ) ಘಟಕ ಕೋಶದ ಜಾಗವನ್ನು ನಿಜವಾದ ಕಣದ ಗಾತ್ರ ಜೊತೆಗೆ ಭರ್ತಿಮಾಡುವುದನ್ನು ಬಿಂಬಿಸುತ್ತದೆ ಮತ್ತು ಮೇಲಿನ ಚಿತ್ರ (ಸಿ)ಒಂದು ಘನಾಕೃತಿ ಘಟಕ ಕೋಶದಲ್ಲಿ ವಿವಿಧ ಪರಮಾಣುಗಳ ನಿಜವಾದ ಭಾಗಗಳನ್ನು ತೋರಿಸುತ್ತದೆ.

ಒಟ್ಟಾರೆಯಾಗಿ, ಪ್ರತಿಯೊಂದು ಘನಾಕೃತಿಯ ಘಟಕ ಕೋಶದಮೂಲೆಗಳಲ್ಲಿ 8 ಪರಮಾಣುಗಳು ಇರುವುದರಿಂದ, ಒಂದು ಘಟಕ ಕೋಶದಲ್ಲಿ ಪರಮಾಣುಗಳ ಒಟ್ಟು ಸಂಖ್ಯೆ 8x 1/8 = 1 ಪರಮಾಣು.

ಕಾಯ-ಕೇಂದ್ರಿತ ಘನಾಕೃತಿಘಟಕ ಕೋಶ

ಕಾಯ ಕೇಂದ್ರಿತ ಘನಾಕೃತಿಯ (ಬಿಸಿಸಿ) ಘಟಕ ಕೋಶವು ಪ್ರತಿಯೊಂದು ಮೂಲೆಗಳಲ್ಲಿ ಪರಮಾಣುವನ್ನು ಹೊಂದಿರುವುದರ ಜೊತೆಗೆ ಅದರ ಕಾಯ ಕೇಂದ್ರದಲ್ಲೂ ಸಹ ಒಂದು ಪರಮಾಣುವನ್ನು ಹೊಂದಿರುತ್ತದೆ. ಕಾಯ ಕೇಂದ್ರಿತ ಘನಾಕೃತಿ (ಬಿಸಿಸಿ) ಘಟಕ ಕೋಶದಲ್ಲಿ,

i) 8 ಮೂಲೆಗಳು * 18 ಪ್ರತಿ ಮೂಲೆಯ ಪರಮಾಣುವಿಗೆ = 8* 18 = 1 ಪರಮಾಣು

ii) 1 ಕಾಯ ಕೇಂದ್ರ ಪರಮಾಣು = 1* 1 = 1 ಪರಮಾಣು ಒಂದು ಘಟಕ ಕೋಶದ ಒಟ್ಟು ಪರಮಾಣುಗಳ ಸಂಖ್ಯೆ = 2 ಪರಮಾಣುಗಳು

(ಮುಂದುವರಿಯುವುದು.....)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನ ಶಾಸ್ತ್ರದ 'ದಿ ಸಾಲಿಡ್ ಸ್ಟೇಟ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಬೆಳಗಾವಿಯಲ್ಲಿ ಪಂಚಮಸಾಲಿ ರಾಜ್ಯ ಕಾರ್ಯಕಾರಿಣಿ ನಾಳೆ



ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ದಾವಣಗೆರೆ: ಪಂಚಮ ಸಾಲಿಗೆ 2ಎ ಮೀಸಲಾತಿ ಬೇಡಿಕೆ ಕುರಿತಂತೆ ಮುಂದಿನ ಹೋರಾಟದ ಸಿದ್ಧತೆಗೆ ಬೆಳಗಾವಿಯ ಗಾಂಧಿಭವನದಲ್ಲಿ ಫೆ.2ರಂದು ಬೆಳಿಗ್ಗೆ 11ಕ್ಕೆ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ರಾಜ್ಯ ಕಾರ್ಯಕಾರಿಣಿ ಹಮ್ಮಿಕೊಳ್ಳಲಾಗಿದೆ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಅಧ್ಯಕ್ಷ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಹೋರಾಟದ ವಿಚಾರವಾಗಿ ಮಹತ್ವದ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮೀಸಲಾತಿ ಚಳವಳಿ ಪಾದಯಾತ್ರೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ, ಶಾಸಕ ಬಸನಗೌಡ ಪಾಟೀಲ ಯತ್ನಾಳ್, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಮುಖಂಡರಾದ ಎ.ಬಿ.ಪಾಟೀಲ್, ವಿನಯ ಕುಲಕರ್ಣಿ, ಎಚ್.ಎಸ್. ಶಿವಶಂಕರ್ ಭಾಗವಹಿಸಲಿದ್ದಾರೆ ಎಂದರು.

ದಲಿತ, ಹಿಂದುಳಿದ ಮಠಾಧೀಶರ ಒಕ್ಕೂಟದಿಂದ ಮುಖ್ಯಮಂತ್ರಿ ಬೊಮ್ಮಾಯಿಗೆ ಮನವಿ

ಮಠಗಳಿಗೆ ತಲಾ ₹ 5 ಕೋಟಿ ಕೊಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಚಿವ ಕೆ.ಎಸ್. ಈಶ್ವರಪ್ಪ ನೇತೃತ್ವದಲ್ಲಿ ಸ್ವಾಮೀಜಿಗಳ ನಿಯೋಗ
- ಬೆಂಗಳೂರಿನಲ್ಲಿ ಮಠಗಳಿಗೆ ತಲಾ 5 ಎಕರೆ ಜಮೀನಿಗೂ ಮನವಿ

ಬೆಂಗಳೂರು: 'ದಲಿತ ಮತ್ತು ಹಿಂದುಳಿದ ಸಮುದಾಯದವರ ಏಳಿಗೆಗಾಗಿ ಕೆಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ವರ್ಗದ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಬದ್ಧವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ತಿಳಿಸಿದರು.

ಕಾಗಿನೆಲೆ ಕನಕಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ನೇತೃತ್ವದಲ್ಲಿ ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ನಿಯೋಗ ಮುಖ್ಯಮಂತ್ರಿ ಅವರನ್ನು ಸೋಮವಾರ ಭೇಟಿ ಮಾಡಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸಿತು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೊಮ್ಮಾಯಿ, ದಲಿತ ಮತ್ತು ಹಿಂದುಳಿದ ವರ್ಗಗಳ ಏಳಿಗೆಗೆ ಬಜೆಟ್‌ನಲ್ಲಿ ಕಾರ್ಯಕ್ರಮಗಳನ್ನು ಪ್ರಕಟಿಸಬೇಕು. ಶಿಕ್ಷಣ, ಉದ್ಯೋಗದಲ್ಲಿ ಸಮುದಾಯದ ಯುವಜನರಿಗೆ ಪ್ರಾತಿನಿಧ್ಯ ನೀಡಬೇಕು. ರಾಜಕೀಯ ಕ್ಷೇತ್ರದಲ್ಲೂ ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕು ಎಂದು ಮಠಾಧೀಶರು ಮನವಿ ಮಾಡಿದ್ದಾರೆ. ಈ ಬಗ್ಗೆ ಹೋರಾಟ ನಡೆಸಿದರೂ ಈವರೆಗೆ ಹೆಚ್ಚಿನ ಒತ್ತು ನೀಡಿಲ್ಲ. ಆದ್ದರಿಂದ ವಿಶೇಷ ಕಾರ್ಯಕ್ರಮ ರೂಪಿಸಲು ಕೋರಿದ್ದಾರೆ' ಎಂದರು.

'ಮಠಗಳು ನಡೆಸುವ ಶಾಲಾ–ಕಾಲೇಜುಗಳು, ವಿದ್ಯಾರ್ಥಿ ನಿಲಯಗಳಿಗೆ ಅನುದಾನ, ಮಠಾಧೀಶರ ಒಕ್ಕೂಟಕ್ಕೆ ಬೆಂಗಳೂರಿನಲ್ಲಿ ಜಮೀನು ಕೇಳಿದ್ದರು. ಹಿಂದಿನ ಸರ್ಕಾರ ಜಮೀನು ನೀಡಿತ್ತು. ಅದು ಕಾನೂನಿನ ಗೊಂದಲದಲ್ಲಿದೆ. ಹೈಕೋರ್ಟ್‌ನಲ್ಲಿ ಪ್ರಕರಣ ನಡೆಯುತ್ತಿದೆ. ಸಂಬಂಧಿಸಿದ ಕಡತ ತರಿಸಿ ನೋಡುತ್ತೇನೆ' ಎಂದು ಅವರು ಹೇಳಿದರು.

ಇದಕ್ಕೆ ಮುನ್ನ ಸಭೆಯಲ್ಲಿ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ ಅವರು ಮಾತನಾಡಿ, 'ಹಿಂದೆ ಬಿ.ಎಸ್.ಯಡಿಯೂರಪ್ಪ ಸರ್ಕಾರ ನಮ್ಮ ಒಕ್ಕೂಟದ ಶ್ರೇಯೋಭಿವೃದ್ಧಿಗೆ ಸುಮಾರು ₹90 ಕೋಟಿ ಮಂಜೂರು ಮಾಡಿತ್ತು. ಸಚಿವ ಕೆ.ಎಸ್. ಈಶ್ವರಪ್ಪ ಅವರ ಮುಂದಾಳತ್ವದಲ್ಲಿ ಈ ಕೆಲಸ ಆಗಿದೆ' ಎಂದರು.

'ಸಾಕಷ್ಟು ವರ್ಷಗಳಿಂದ ಹಿಂದುಳಿದ ಸಮಾಜದ ಏಳಿಗೆಗಾಗಿ ಹೋರಾಟ ಮಾಡಿಕೊಂಡು ಬಂದಿದ್ದೇವೆ. ನಮ್ಮ ಹೋರಾಟದ ಮುಂದಿನ ಹಂತವಾಗಿ ಇತ್ತೀಚೆಗೆ ಒಕ್ಕೂಟ ರಚಿಸಿಕೊಂಡು ನಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ ನೀಡಿದ್ದೇವೆ. ಎಲ್ಲ ಮಠಗಳು ಆರ್ಥಿಕ ಅಭದ್ರತೆಯಲ್ಲಿವೆ. ಅದಕ್ಕಾಗಿ ಹಿಂದುಳಿದ ದಲಿತ ಸಮಾಜದ ವಿವಿಧ ಮಠಗಳ ಶಿಕ್ಷಣ ಸಂಸ್ಥೆಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗೆ ಪ್ರತಿಯೊಂದು ಮಠಕ್ಕೂ ತಲಾ ₹5 ಕೋಟಿ ಅನುದಾನ ಮತ್ತು ಶಿಕ್ಷಣ ಸಂಸ್ಥೆ ಸ್ಥಾಪಿಸಲು ಬೆಂಗಳೂರಿನಲ್ಲಿ ತಲಾ 5 ಎಕರೆ ಜಮೀನು ನೀಡಬೇಕು' ಎಂದು ಅವರು ಮನವಿ ಮಾಡಿದರು.

ಈ ಮನವಿಗೆ ಪುರುಷೋತ್ತಮಾನಂದಪುರಿ ಸ್ವಾಮೀಜಿ, ದಯಾನಂದಪುರಿ ಸ್ವಾಮೀಜಿ, ಆರ್ಯ ರೇಣುಕಾನಂದ ಸ್ವಾಮೀಜಿ, ಕೃಷ್ಣಾನಂದ ಸ್ವಾಮೀಜಿ, ಜ್ಞಾನಾನಂದಪುರಿ ಸ್ವಾಮೀಜಿ, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಬಸವ ಮಾಚಿದೇವ ಸ್ವಾಮೀಜಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ವಾಲ್ಮೀಕಿ ಪ್ರಸನ್ನಾನಂದ ಪುರಿ ಬಸವಕುಮಾರ ಸ್ವಾಮೀಜಿ, ಬಸವ ನಾಗಿದೇವ ಸ್ವಾಮೀಜಿ, ವೇಮನಾನಂದಪುರಿ ಸ್ವಾಮೀಜಿ, ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಅನ್ನದಾನಿ ಭಾರತೀ ಅಪ್ಪಣ್ಣ ಸ್ವಾಮೀಜಿ ಹಾಗೂ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಸಹಿ ಮಾಡಿದ್ದಾರೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ನಿಯೋಗ ಸೋಮವಾರ ಭೇಟಿ ಮಾಡಿತು. ಸಚಿವ ಕೋಟ ಶ್ರೀನಿವಾಸ ಪೂಜಾರಿ, ಹೊಸದುರ್ಗ ಭಗೀರಥ ಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಚಿತ್ರದುರ್ಗದ ಭೋವಿ ಗುರುಪೀಠದ ಇಮ್ಮಡಿ ಸಿದ್ದೇಶ್ವರ ಸ್ವಾಮೀಜಿ, ಕಾಗಿನೆಲೆ ಕನಕಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಸಚಿವ ಕೆ ಎಸ್ ಈಶ್ವರಪ್ಪ, ಹೊಸದುರ್ಗದ ಕುಂಚಟಿಗ ಮಹಾಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ (ಮುಂದಿನ ಸಾಲು) ಇದ್ದಾರೆ.

ಸುದ್ದಿ 2 ನಿಮಿಷ

ಚಿತ್ರಮಂದಿರ ಭರ್ತಿ: 4 ದಿನಗಳಲ್ಲಿ ತೀರ್ಮಾನ–ಸಿ.ಎಂ ಬೊಮ್ಮಾಯಿ


ಬೆಂಗಳೂರು: ರಾಜ್ಯದಲ್ಲಿ ರಾತ್ರಿ ಕರ್ಫ್ಯೂ ರದ್ದುಪಡಿಸಿರುವ ಬೆನ್ನಲ್ಲೇ ಚಲನಚಿತ್ರಮಂದಿರಗಳಲ್ಲಿ ಶೇ 100 ಪ್ರೇಕ್ಷಕರ ಭರ್ತಿಗೆ ಅವಕಾಶ ನೀಡುವಂತೆ ಕೋರಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ನಿಯೋಗ ಸೋಮವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದೆ.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಮುಖ್ಯಮಂತ್ರಿ ಬೊಮ್ಮಾಯಿ, ನಾಲ್ಕು ದಿನಗಳಲ್ಲಿ ತಜ್ಞರ ಜತೆ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಚಲನಚಿತ್ರ ವಾಣಿಜ್ಯ ಮಂಡಳಿ ತಿಳಿಸಿದೆ.

'ಕೋವಿಡ್‌ನ ಎಲ್ಲ ಮಾರ್ಗಸೂಚಿಗಳನ್ನು ಪಾಲಿಸಲಾಗುವುದು. ಹವಾನಿಯಂತ್ರಣ ವ್ಯವಸ್ಥೆಯ ಅಗತ್ಯ, ಹವಾನಿಯಂತ್ರಣ ಇಲ್ಲವಾದರೆ ಆಗುವ ಪರಿಣಾಮಗಳ ಬಗೆಗೂ ಮುಖ್ಯಮಂತ್ರಿಯವರಿಗೆ ಮನವರಿಕೆ ಮಾಡಲಾಯಿತು' ಎಂದು ವಾಣಿಜ್ಯ ಮಂಡಳಿ ಕಾರ್ಯದರ್ಶಿ ಎನ್.ಎಂ. ಸುರೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಆಸನ ಭರ್ತಿ ಇತಿಮಿತಿಯಿಂದಾಗಿ ಉದ್ಯಮ ಎದುರಿಸುತ್ತಿರುವ ಸಂಕಷ್ಟಗಳ ಬಗ್ಗೆ ವಿವರಿಸಿದ್ದೇವೆ. ಮನವಿ ಆಲಿಸಿದ ಅವರು ಸಕಾರಾತ್ಮಕ ಭರವಸೆ ನೀಡಿದ್ದಾರೆ.

ಮಂಡಳಿಯ ಅಧ್ಯಕ್ಷ ಡಿ.ಆರ್. ಜೈರಾಜ್ ನಿಯೋಗದ ನೇತೃತ್ವ ವಹಿಸಿದ್ದರು. ನಿರ್ಮಾಪಕ ಸಾ.ರಾ.ಗೋವಿಂದು, ನಿರ್ದೇಶಕ ನಾಗಣ್ಣ ನಿಯೋಗದಲ್ಲಿದ್ದರು.



'ತರಗತಿಯಲ್ಲಿ ಹಿಜಾಬ್‌ಗೆ ಅವಕಾಶವಿಲ್ಲ'

ಉಡುಪಿ: 'ತರಗತಿ ಕೊಠಡಿಯಲ್ಲಿ ಹಿಜಾಬ್ ತೆಗೆದು ಬರುವ ನಿರ್ಧಾರವಿದ್ದರೇ ಮಾತ್ರ ಕಾಲೇಜಿಗೆ ಬನ್ನಿ. ಇಲ್ಲದಿದ್ದರೆ ಬರಬೇಡಿ. ಶೈಕ್ಷಣಿಕ ವಾತಾವರಣ ಹಾಳಾಗಬಾರದು ಎನ್ನುವ ದೃಷ್ಟಿಯಿಂದ ಈ ನಿರ್ಧಾರ ಮಾಡಲಾಗಿದೆ. ಶಾಂತಿ ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆಗೂ ತಿಳಿಸಲಾಗಿದೆ' ಎಂದು ಇಲ್ಲಿನ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಶಾಸಕ ರಘುಪತಿ ಭಟ್ ತಿಳಿಸಿದರು.

ಕಾಲೇಜಿನಲ್ಲಿ ಸೋಮವಾರ ಸಭೆಯ ಬಳಿಕ ಮಾತನಾಡಿದ ಅವರು, 'ಸರ್ಕಾರ ನಿರ್ಧಾರ ಪ್ರಕಟಿಸುವವರೆಗೂ ಕಾಲೇಜಿನಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಲು ಸಾಧ್ಯವಿಲ್ಲ. ಕಾಲೇಜಿನ ಆವರಣದ ಒಳಗೆ ಹಿಜಾಬ್ ಧರಿಸಿಕೊಂಡು ಬಂದು, ತರಗತಿಯಲ್ಲಿ ಹಿಜಾಬ್ ತೆಗೆದು ಭಾಗವಹಿಸುವಂತೆ ವಿನಂತಿಸಲಾಗಿದೆ. ಈ ಸಂಬಂಧ ಸಂಘ-ಸಂಸ್ಥೆಯವರು, ಮಾಧ್ಯಮದವರು ಮಂಗಳವಾರದಿಂದ ಕಾಲೇಜಿನ ಒಳಗೆ ಪ್ರವೇಶ ಮಾಡಬಾರದು' ಎಂದೂ ಮನವಿ ಮಾಡಿದರು.

ಪ್ರಮುಖ ಆಸ್ಪತ್ರೆಗಳ ವೈದ್ಯಕೀಯ ವಿಶ್ಲೇಷಣೆಗಳಿಂದ ದೃಢ ● ಆಸ್ಪತ್ರೆ ದಾಖಲಾತಿಯೂ ಹೆಚ್ಚಳ

ಕೋವಿಡ್: ಹೃದಯಕ್ಕೆ ಹಾನಿ, ಮಧುಮೇಹಕ್ಕೆ ಆಹ್ವಾನ

● ವರುಣ ಹೆಗಡೆ/ ಜಿ.ಶಿವಕುಮಾರ



ಕೋವಿಡ್‌ನಿಂದ ಚೇತರಿಸಿಕೊಂಡ 2-3 ವಾರಗಳ ಬಳಿಕ ಹೃದಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ಇದರಿಂದ ಮುಂದಾಗುವ ಅಪಾಯ ತಡೆಯಬಹುದು
ಡಾ.ಸಿ.ಎನ್.ಮಂಜುನಾಥ್, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ



ಕೋವಿಡ್ ನಂತರ ಮಧುಮೇಹಿಗಳ ಸಂಖ್ಯೆ ಏರಿಕೆಯಾಗಿದೆ. ಸೋಂಕಿನಿಂದ ಚೇತರಿಸಿಕೊಂಡ ಬಳಿಕ ಮುಂಜಾಗ್ರತಾ ಕ್ರಮವಾಗಿ ಮಧು ಮೇಹ ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ
ಡಾ.ಸಂಜಯ್ ಕಂಬಾರ, ಮಧುಮೇಹ ತಜ್ಞ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಿಗೆ ಹೃದಯ ನಾಳಗಳಲ್ಲಿ ರಕ್ತವು ಹೆಪ್ಪುಗಟ್ಟಿ, ಹೃದಯ ಸಮಸ್ಯೆ ಕಾಣಿಸಿಕೊಳ್ಳಲಾರಂಭಿಸಿದೆ. ಕೊರೊನಾ ವೈರಾಣುಗಳು ಕೆಲವರ ದೇಹದಲ್ಲಿನ ಮೇದೋಜೀರಕ ಗ್ರಂಥಿಯ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಿ, ಮಧುಮೇಹಕ್ಕೂ ಕಾರಣವಾಗುತ್ತಿವೆ.

ರಾಜ್ಯದ ಪ್ರಮುಖ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿನ ವೈದ್ಯರು ಈ ಬಗ್ಗೆ ವೈದ್ಯಕೀಯ ವಿಶ್ಲೇಷಣೆ ನಡೆಸಿದ್ದಾರೆ. ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಸೋಂಕು ಹೆಚ್ಚಿನ ಅಪಾಯ ಉಂಟುಮಾಡಲಿದೆ ಎನ್ನುವುದನ್ನು ವೈದ್ಯಕೀಯ ಸಂಶೋಧನೆಗಳು ಹೇಳಿವೆ. ಸೋಂಕಿನಿಂದ ಚೇತರಿಸಿಕೊಂಡ ಬಳಿಕವೂ ಕೆಲವರ ಆರೋಗ್ಯದ ಮೇಲೆ ವೈರಾಣು ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿದೆ.

ಮೊದಲ ಅಲೆಯಲ್ಲಿ 9.41 ಲಕ್ಷಕ್ಕೂ ಅಧಿಕ ಮಂದಿ ಕೋವಿಡ್ ಪೀಡಿತರಾಗಿದ್ದರು. ಸೋಂಕಿನ ತೀವ್ರತೆ ಕಡಿಮೆಯಿದ್ದರೂ 12 ಸಾವಿರಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದರು. ಎರಡನೇ ಅಲೆಯಲ್ಲಿ 20 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತರಾಗಿ, 25 ಸಾವಿರಕ್ಕೂ ಹೆಚ್ಚು ಜನ ಮೃತಪಟ್ಟಿದ್ದರು. ಎರಡನೇ ಅಲೆಯಲ್ಲಿ ಕೋವಿಡ್ ಪೀಡಿತರಾದವರ ಪೈಕಿ ಶೇ 5ರಷ್ಟು ಮಂದಿಯಲ್ಲಿ ಹೃದಯ ಸಮಸ್ಯೆ ಕಾಣಿಸಿಕೊಂಡಿತ್ತು. ಮೃತಪಟ್ಟವರಲ್ಲಿ ಬಹುತೇಕರು ಹೃದಯಾಘಾತಕ್ಕೆ ಒಳಗಾಗಿದ್ದರು.

ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ಕಾಣಿಸಿಕೊಳ್ಳುವ ಹೃದಯ ಸಮಸ್ಯೆ ಬಗ್ಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಅಧ್ಯಯನ ನಡೆಸಿತ್ತು. ಅಧ್ಯಯನಕ್ಕೆ ಒಳಪಟ್ಟ 26 ಮಂದಿಯಲ್ಲಿ ನಾಲ್ಕು ಮಂದಿಗೆ ಮಾತ್ರ ಈ ಮೊದಲೇ ಹೃದಯ ಸಂಬಂಧಿ ಸಮಸ್ಯೆಗಳು ಇದ್ದವು. ಉಳಿದವರಿಗೆ ಕೋವಿಡ್‌ನಿಂದ ಚೇತರಿಸಿಕೊಂಡ ಮೂರರಿಂದ ನಾಲ್ಕು ವಾರಗಳ ಬಳಿಕ ಹೃದಯಾಘಾತ ಸಮಸ್ಯೆ ಕಾಣಿಸಿಕೊಂಡಿತ್ತು. 26 ಮಂದಿಯಲ್ಲಿ 10 ಜನರಿಗೆ ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ಯಾವುದೇ ಕೋವಿಡೇತರ ಸಮಸ್ಯೆ ಇರಲಿಲ್ಲ. ಆದರೂ ಹೃದಯಾಘಾತ ಸಂಭವಿಸಿತ್ತು.

ಕೋವಿಡ್ ಎರಡನೇ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ ತಗ್ಗಿದ ಬಳಿಕ ಮಣಿಪಾಲ್, ನಾರಾಯಣ ಹೆಲ್ತ್, ಅಪೋಲೊ, ಫೋರ್ಟಿಸ್, ವಿಕ್ರಮ್, ಆಸ್ಟರ್ ಸೇರಿದಂತೆ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿ ಹೃದಯ ಹಾಗೂ ಮಧುಮೇಹ ಸಮಸ್ಯೆಯ ತಪಾಸಣೆಗೆ ಆದ್ಯತೆ ನೀಡಲಾಗಿತ್ತು. ಈ ಸಮಸ್ಯೆಗಳಿಗಾಗಿ ಚಿಕಿತ್ಸೆಗೆ ಬರುವವರ ಸಂಖ್ಯೆ ಆಗ ಶೇ 15 ರಿಂದ ಶೇ 20ರವರೆಗೆ ಹೆಚ್ಚಳವಾಗಿತ್ತು.

ಮಧುಮೇಹ ಹೆಚ್ಚಳ: ಆರೋಗ್ಯ ಇಲಾಖೆಯು ರಾಷ್ಟ್ರೀಯ ಮಧುಮೇಹ ನಿಯಂತ್ರಣ ಕಾರ್ಯಕ್ರಮದಡಿ 30 ವರ್ಷ ಮೇಲ್ಪಟ್ಟ ಎಲ್ಲ ವಯಸ್ಕರಿಗೂ ಎನ್‌ಸಿಡಿ ಕ್ಲಿನಿಕ್‌ಗಳಲ್ಲಿ (ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್) ತಪಾಸಣೆ ನಡೆಸುತ್ತಿದೆ. ರಾಜ್ಯದಲ್ಲಿ ಜಿಲ್ಲಾ ಹಂತದ 30 ಎನ್‌ಸಿಡಿ ಕ್ಲಿನಿಕ್‌ಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ 347 ಸಿ.ಎಚ್.ಸಿ–ಎನ್.ಸಿ.ಡಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ.

ಈ ಕ್ಲಿನಿಕ್‌ಗಳಿಗೆ 2019–20ನೇ ಸಾಲಿನಲ್ಲಿ 36.07 ಲಕ್ಷ ಮಂದಿ ಭೇಟಿ ನೀಡಿ, ತಪಾಸಣೆ ಮಾಡಿಸಿಕೊಂಡಿದ್ದರು. ಅವರಲ್ಲಿ 96,989 ಮಂದಿಯಲ್ಲಿ ಹೊಸದಾಗಿ ಮಧುಮೇಹ ಪತ್ತೆಯಾಗಿತ್ತು. ಅದೇ ರೀತಿ, 2020–21ನೇ ಸಾಲಿನಲ್ಲಿ ತಪಾಸಣೆಗೆ ಒಳಪಟ್ಟ 20.94 ಲಕ್ಷ ಜನರಲ್ಲಿ 49,392 ಮಂದಿಯಲ್ಲಿ ಮಧುಮೇಹ ದೃಢಪಟ್ಟಿದೆ.

ಮಧ್ಯ ವಯಸ್ಕರಷ್ಟೇ ಅಲ್ಲದೆ ಮಕ್ಕಳು ಕೂಡ ಮಧುಮೇಹಕ್ಕೆ ಗುರಿಯಾಗುತ್ತಿದ್ದಾರೆ. ಕೋವಿಡ್‌ನಿಂದ ಚೇತರಿಸಿಕೊಂಡ 30 ದಿನಗಳ ನಂತರ ಮಕ್ಕಳಲ್ಲಿ ಮಧುಮೇಹದ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ಸಾಮಾನ್ಯ ಮಕ್ಕಳಿಗಿಂತಲೂ ಕೋವಿಡ್ ಗುಣಮುಖ ಮಕ್ಕಳು ಮೊದಲ ಅಥವಾ ಎರಡನೇ ಹಂತದ ಮಧುಮೇಹಕ್ಕೆ ಹೆಚ್ಚಾಗಿ ತುತ್ತಾಗುತ್ತಿದ್ದಾರೆ. ಅಮೆರಿಕದ ರೋಗ ನಿಯಂತ್ರಣ ಮತ್ತು ತಡೆ ಕೇಂದ್ರ (ಸಿಡಿಸಿಪಿ) ಜನವರಿ ಮೊದಲ ವಾರದಲ್ಲಿ ಬಿಡುಗಡೆಗೊಳಿಸಿದ್ದ ವರದಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ.

'ಇನ್ಸುಲಿನ್ ಉತ್ಪತ್ತಿಮಾಡುವ ಕೋಶ ನಾಶ'

'ಮೇದೋಜೀರಕ ಗ್ರಂಥಿಯು ದೇಹಕ್ಕೆ ಅಗತ್ಯವಿರುವ ಇನ್ಸುಲಿನ್ ಉತ್ಪತ್ತಿ ಮಾಡಲು ನೆರವಾಗುತ್ತದೆ. ಇನ್ಸುಲಿನ್ ಪ್ರಮಾಣ ಹೆಚ್ಚಿರುವವರಿಗೆ ಮಧುಮೇಹ ಬಾಧಿಸುವುದಿಲ್ಲ. ಈ ಗ್ರಂಥಿಯ ಮೇಲೆ ಕೊರೊನಾ ವೈರಾಣುಗಳು ದಾಳಿ ನಡೆಸುತ್ತವೆ. ಅವು ಇನ್ಸುಲಿನ್ ಉತ್ಪತ್ತಿಮಾಡುವ ಕೋಶಗಳನ್ನೆಲ್ಲಾ ನಾಶಪಡಿಸುತ್ತವೆ. ಆಗ ಸಹಜವಾಗಿಯೇ ಇನ್ಸುಲಿನ್ ಉತ್ಪತ್ತಿ ಕುಂಠಿತಗೊಳ್ಳುತ್ತದೆ. ಅಂತಹ ರೋಗಿಗಳು ಮಧುಮೇಹದ ಸಮಸ್ಯೆಗೆ ಒಳಗಾಗುತ್ತಾರೆ' ಎಂದು ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಯ ಮಧುಮೇಹ ತಜ್ಞ ಡಾ.ಸಂಜಯ್ ಕಂಬಾರ ಹೇಳಿದರು.

'ಕೋವಿಡ್ ಎರಡನೇ ಅಲೆ ವೇಳೆ ಬಹಳಷ್ಟು ಮಂದಿ ಸೋಂಕಿನಿಂದ ಮುಕ್ತರಾಗಲು ಸ್ಟಿರಾಯ್ಡ್‌ಯುಕ್ತ ಮಾತ್ರೆಗಳ ಮೊರೆ ಹೋಗಿದ್ದರು. ಅವುಗಳ ಅವೈಜ್ಞಾನಿಕ ಬಳಕೆಯಿಂದಾಗಿಯೂ ಬಹುಪಾಲು ಮಂದಿ ಮಧುಮೇಹಕ್ಕೆ ತುತ್ತಾಗಿದ್ದಾರೆ. ಶೇ 5ರಷ್ಟು ಯುವಕರು ಇದರಲ್ಲಿ ಸೇರಿದ್ದಾರೆ' ಎಂದು ತಿಳಿಸಿದರು.

ರಕ್ತ ಹೆಪ್ಪುಗಟ್ಟುವಿಕೆಯಿಂದ ಸಮಸ್ಯೆ

'ಕೊರೊನಾ ಸೋಂಕು ತೀವ್ರವಾಗಿ ದಾಳಿ ಮಾಡಿದರೆ ರಕ್ತ ಹೆಪ್ಪುಗಟ್ಟುವ ಸಾಧ್ಯತೆ ಇರುತ್ತದೆ. ಹೃದಯ ನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿದರೆ ಹೃದಯ ಸಮಸ್ಯೆ, ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿದರೆ ಪಾರ್ಶ್ವವಾಯು ಹಾಗೂ ಕಾಲಿನಲ್ಲಿ ರಕ್ತ ಹೆಪ್ಪುಗಟ್ಟಿದರೆ ಗ್ಯಾಂಗ್ರೀನ್‌ನಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ' ಎಂದು ಹೃದ್ರೋಗ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ಪೀಡಿತರಿಗೆ ರಕ್ತನಾಳಗಳಲ್ಲಿ ರಕ್ತವು ಹೆಪ್ಪುಗಟ್ಟಿ, ಹೃದಯಾಘಾತ ಸಂಭವಿಸುವ ಸಾಧ್ಯತೆ ಇರುತ್ತದೆ. ವೈರಾಣುಗಳು ದೇಹದ ಮೇಲೆ ನಡೆಸುವ ದಾಳಿಯಿಂದ ಹೃದಯದ ಮಾಂಸಖಂಡಗಳಲ್ಲಿ ಉರಿ ಊತ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಇದರಿಂದ ಹೃದಯದ ಕ್ಷಮತೆ ಕಡಿಮೆ ಆಗಲಿದೆ. ಎರಡನೇ ಅಲೆಯಲ್ಲಿ ಈ ಸಮಸ್ಯೆ ಹೆಚ್ಚಿನವರಲ್ಲಿ ಕಾಣಿಸಿಕೊಂಡಿತ್ತು. ಈಗ ವೈರಾಣುವಿನ ತೀವ್ರತೆ ಕಡಿಮೆಯಾಗಿದೆ. ಹೀಗಾಗಿ, ಹೃದಯ ಸಮಸ್ಯೆ ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ' ಎಂದು ಮಣಿಪಾಲ್ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಕಾರ್ತಿಕ್ ವಾಸುದೇವನ್ ತಿಳಿಸಿದರು.

ಹಿಜಾಬ್: ಹೈಕೋರ್ಟ್‌ನಲ್ಲಿ ಅರ್ಜಿ

ಬೆಂಗಳೂರು: ಹಿಜಾಬ್ ಧರಿಸಿ ಕಾಲೇಜು ಪ್ರವೇಶಿಸದಂತೆ ಉಡುಪಿಯ ಸರ್ಕಾರಿ ಪಿಯು ಕಾಲೇಜು ವಿಧಿಸಿರುವ ನಿರ್ಬಂಧವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

ಈ ಬಗ್ಗೆ ವಿದ್ಯಾರ್ಥಿನಿ ರೇಶಮ್ ಫರೂಕ್ ಎಂಬುವರ ಸಹೋದರ ಮುಬಾರಕ್ ಫರೂಕ್ ಸಲ್ಲಿಸಿರುವ ಅರ್ಜಿಯು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

'ಹಿಜಾಬ್ ಧರಿಸುವುದು ಇಸ್ಲಾಮಿಕ್ ನಂಬಿಕೆಯಂತೆ ಅಗತ್ಯ ಆಚರಣೆ. ಆದರೆ, ಕಾಲೇಜು 8 ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಿರುವುದು ಅವರ ಶಿಕ್ಷಣದ ಮೂಲಭೂತ ಹಕ್ಕನ್ನು ನಿರಾಕರಿಸಿದಂತೆ. ಈ ನಿರ್ಬಂಧ ಅಸಾಂವಿಧಾನಿಕ, ಏಕಪಕ್ಷೀಯ ಹಾಗೂ ಬಹಿಷ್ಕಾರದಂತಿದೆ' ಎಂದು ಅರ್ಜಿದಾರರು ಆರೋಪಿಸಿದ್ದಾರೆ.

'ಹಿಜಾಬ್ ಧರಿಸುವುದು ಅವರ ಮೂಲಭೂತ ಹಕ್ಕು. ಕಾಲೇಜು ಆಡಳಿತ ಮಂಡಳಿ ಇದರಲ್ಲಿ ಮಧ್ಯಪ್ರವೇಶ ಮಾಡಬಾರದು. ಇಲ್ಲವಾದಲ್ಲಿ ಇದು ಸಂವಿಧಾನದ 14 ಮತ್ತು 25ನೇ ವಿಧಿಯ ಉಲ್ಲಂಘನೆಯಾಗುತ್ತದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಅರ್ಜಿದಾರರ ಪರ ವಕೀಲ ಶತಭಿಷ ಶಿವಣ್ಣ ವಕಾಲತ್ತು ವಹಿಸಿದ್ದಾರೆ.

ಚುನಾವಣಾ ಕರ್ತವ್ಯ ನಿಯೋಜಿತ ಸಿಬ್ಬಂದಿಗೆ 'ಬೂಸ್ಟರ್ ಡೋಸ್'

ಬೆಂಗಳೂರು: 'ಉತ್ತರಪ್ರದೇಶ ಸೇರಿ ಐದು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆ ಕರ್ತವ್ಯಕ್ಕೆ ರಾಜ್ಯದಿಂದ ನಿಯೋಜನೆಗೊಂಡಿರುವ ಅಧಿಕಾರಿಗಳು, ಸಿಬ್ಬಂದಿಗೆ ಶೀಘ್ರವೇ ಬೂಸ್ಟರ್ ಡೋಸ್ ನೀಡಲಾಗುತ್ತದೆ' ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ತಿಳಿಸಿದ್ದಾರೆ.

2ನೇ ಡೋಸ್ ಪಡೆದ 39 ವಾರ ಬಳಿಕ ಬೂಸ್ಟರ್ ಡೋಸ್ ನೀಡಲಾಗುತ್ತದೆ. ಚುನಾವಣೆ ಕರ್ತವ್ಯದ ಸಿಬ್ಬಂದಿಗೆ ಇದರಿಂದ ವಿನಾಯಿತಿ ನೀಡಲಾಗಿದೆ. ಕೇಂದ್ರ ಸರ್ಕಾರದ ಆದೇಶದ ಅನ್ವಯ ಈ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದಿದ್ದಾರೆ.

ವಿದ್ಯಾರ್ಥಿನಿಯರಿಗೆ ಕೋವಿಡ್ ದೃಢ: (ಮಸ್ಕಿ): ಇಲ್ಲಿಯ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯ 21 ವಿದ್ಯಾರ್ಥಿನಿಯರಿಗೆ ಸೋಮವಾರ ಕೋವಿಡ್ ದೃಢಪಟ್ಟಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

38,09,467 ▲	ಒಟ್ಟು ಸೋಂಕಿತರು (37,85,295 ನಿನ್ನೆಯ ವಿವರ)
2,44,331 ▼	ಸಕ್ರಿಯ ಪ್ರಕರಣಗಳು
35,26,108 ▲	ಗುಣಮುಖರಾದವರು
38,998 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	24,172	▲
ಗುಣಮುಖ	30,869	▲
ಸಾವು	56	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: 2.09 ಲಕ್ಷ ಪ್ರಕರಣ ದೃಢ, 959 ಸಾವು

ನವದೆಹಲಿ (ಪಿಟಿಐ): ದೇಶದಾದ್ಯಂತ ಸೋಮವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 2.09 ಲಕ್ಷ ಜನರಲ್ಲಿ ಕೋವಿಡ್ ದೃಢಪಟ್ಟಿದ್ದು, 959 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. 2,62,628 ಮಂದಿ ಸೋಂಕಿತರು ಗುಣಮುಖರಾಗಿದ್ದಾರೆ.

ಪಾಸಿಟಿವಿಟಿ ದರ ಶೇ 15.77ರಷ್ಟಿದೆ. ಸದ್ಯ 18,31,268 ಸಕ್ರಿಯ ಪ್ರಕರಣಗಳಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ದೇಶದಾದ್ಯಂತ ಈವರೆಗೆ 166 ಕೋಟಿಗೂ ಹೆಚ್ಚು ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ. ಶೇ 75ರಷ್ಟು ಮಂದಿ ವಯಸ್ಕರಿಗೆ ಎರಡೂ ಡೋಸ್ ಲಸಿಕೆ ನೀಡಲಾಗಿದೆ.

ಶಾಲೆ–ಕಾಲೇಜು ಪುನರಾರಂಭ: ಸಾಂಕ್ರಾಮಿಕ ಪರಿಸ್ಥಿತಿ ಸುಧಾರಿಸಿದ ಬೆನ್ನಲ್ಲೇ ಪಶ್ಚಿಮ ಬಂಗಾಳ ಸರ್ಕಾರವು 8ರಿಂದ 12 ನೇ ತರಗತಿ ವಿದ್ಯಾರ್ಥಿಗಳಿಗೆ ಫೆಬ್ರುವರಿ 3 ರಿಂದ ಶಾಲೆಗಳನ್ನು ಪುನಃ ತೆರೆಯಲು ಅನುಮತಿ ನೀಡಿದೆ.

ಮತ್ತೊಂದೆಡೆ, ಮಧ್ಯಪ್ರದೇಶದಲ್ಲಿ 1ರಿಂದ 12ನೇ ತರಗತಿಯನ್ನು ಶೇ 50ರಷ್ಟು ಹಾಜರಾತಿಗೆ ಅನುಗುಣವಾಗಿ ಫೆಬ್ರುವರಿ 1ರಿಂದ ಪುನಃ ತೆರೆಯಲು ನಿರ್ಧರಿಸಲಾಗಿದೆ.

ಹಿಮಾಚಲ ಪ್ರದೇಶ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ತನ್ನ ಕಚೇರಿಗಳಲ್ಲಿ ಶೇ 100ರಷ್ಟು ಸಿಬ್ಬಂದಿಯೊಂದಿಗೆ ವಾರದ ಆರು ದಿನವೂ ಕಾರ್ಯ ನಿರ್ವಹಿಸುವಂತೆ ಸೂಚಿಸಿದೆ.

ಆದರೆ, ರಾತ್ರಿ 10ರಿಂದ ಬೆಳಿಗ್ಗೆ 6 ಗಂಟೆವರೆಗಿನ ರಾತ್ರಿ ಕರ್ಫ್ಯೂ ಅನ್ನು ಮುಂದುವರಿಸಿದೆ.

ಯಾರೂ ಏನನ್ನೂ ಕಳೆದುಕೊಳ್ಳುತ್ತಿಲ್ಲ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ವಿವಿಧ ರಾಜ್ಯಗಳು ಮತ್ತು ಅಧಿಕಾರಿಗಳು ಹೊರಡಿಸಿದ ಕೋವಿಡ್-19ರ ಲಸಿಕೆ ಕಡ್ಡಾಯ ಕುರಿತ ಆದೇಶಗಳಿಂದಾಗಿ ಜನರು ತಮ್ಮ ಉದ್ಯೋಗ ಮತ್ತು ಪಡಿತರವನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬ ವಾದಗಳನ್ನು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ಅಲ್ಲಗಳೆದಿದ್ದು, 'ಯಾರೂ ಏನನ್ನೂ ಕಳೆದುಕೊಳ್ಳುತ್ತಿಲ್ಲ' ಎಂದು ಪ್ರತಿಪಾದಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್ ಮತ್ತು ಬಿ.ಆರ್. ಗವಾಯಿ ಅವರನ್ನೊಳಗೊಂಡ ಪೀಠಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮಹ್ತಾ ಈ ವಿಷಯ ತಿಳಿಸಿದರು.

'ಲಸಿಕೆ ಕಡ್ಡಾಯ ಕುರಿತ ಆದೇಶಗಳಿಂದ ಜನರು ಉದ್ಯೋಗ ಮತ್ತು ಪಡಿತರವನ್ನು ಕಳೆದುಕೊಳ್ಳುತ್ತಿದ್ದಾರೆ. ಅಲ್ಲದೆ ಜನರಿಗೆ ಮುಕ್ತವಾಗಿ ತಿರುಗಾಡಲು ಸಾಧ್ಯವಾಗುತ್ತಿಲ್ಲ. ಈ ಆದೇಶಗಳು ಜನರ ಮೂಲಭೂತ ಹಕ್ಕುಗಳನ್ನು ನಿರ್ಬಂಧಿಸುತ್ತಿವೆ. ಹೀಗಾಗಿ ಈ ಕುರಿತು ತುರ್ತಾಗಿ ವಿಚಾರಣೆ ನಡೆಸುವಂತೆ' ಅರ್ಜಿದಾರರ ಪರ ವಾದಿಸಿದ ವಕೀಲ ಪ್ರಶಾಂತ್ ಭೂಷಣ್ ತಿಳಿಸಿದರು.

ಈ ವಿಷಯಗಳು ಕುರಿತು ಆಲಿಸಿ ನಂತರ ತೀರ್ಮಾನಿಸುವುದಾಗಿ ಪೀಠ ಹೇಳಿತು.

ಕಾನೂನು ಸರಳೀಕರಣ ಅಗತ್ಯ: ಸಿ.ಎಂ

ಬೆಂಗಳೂರು: ಬಡವರಿಗೆ ನಿವೇಶನ, ಮನೆಗಳನ್ನು ಒದಗಿಸುವುದಕ್ಕಾಗಿ ವಸತಿಗೆ ಸಂಬಂಧಿಸಿದ ಕಾನೂನುಗಳನ್ನು ಸರಳೀಕರಣ ಮಾಡುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆ ಫಲಾನುಭವಿಗಳಿಗೆ ಮನೆ ಹಂಚಿಕೆ ಪತ್ರ ವಿತರಿಸಿ ಅವರು ಮಾತನಾಡಿದರು.

ಕಾನೂನುಬದ್ಧವಾಗಿ ಬಡಾವಣೆಗಳ ಅಭಿವೃದ್ಧಿಯಾಗದಿದ್ದರೆ ಸೌಕರ್ಯದ ಕೊರತೆ ಇರುವ ಕಂದಾಯ ನಿವೇಶನಗಳ ಸಂಖ್ಯೆ ಹೆಚ್ಚುತ್ತಲೇ ಇರುತ್ತದೆ. ಬಡವರಿಗೆ ವಸತಿ ಸೌಲಭ್ಯ ಕಲ್ಪಿಸುವುದೂ ಕಷ್ಟವಾಗುತ್ತದೆ. ಹೀಗಾಗಿ, ಸೌಲಭ್ಯ ವಿತರಣೆಗೆ ಇರುವ ತೊಡಕುಗಳ ನಿವಾರಣೆಗೆ ತಿದ್ದುಪಡಿ ಕಾಯ್ದೆಗೆ ಅಗತ್ಯವಾಗಿದೆ ಎಂದರು.

ನಗರಗಳಲ್ಲಿ ಸಾಮಾನ್ಯ ಜನರು ನಿವೇಶನ, ಮನೆ ಹೊಂದುವುದು ಕಷ್ಟವಾಗಿದೆ. ಇದು ಸಾಮಾಜಿಕ ಸವಾಲಾಗಿ ಪರಿಣಮಿಸುತ್ತಿದೆ. ಈ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ಬಡವರಿಗಾಗಿ ಉಪ ನಗರಗಳನ್ನು ನಿರ್ಮಿಸಲು ಯೋಜನೆ ಸಿದ್ಧಪಡಿಸಬೇಕು ಎಂದು ವಸತಿ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಂತಿನಲ್ಲಿ ಪಾವತಿಗೆ ಅವಕಾಶ: 46,000 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. 64,000 ಮನೆಗಳಿಗೆ ಫಲಾನುಭವಿಗಳ ಆಯ್ಕೆ ಆರಂಭಿಸಬೇಕು. ಡಿಸೆಂಬರ್ ಒಳಗಾಗಿ 1 ಲಕ್ಷ ಮನೆ ನಿರ್ಮಿಸಬೇಕು. ಫಲಾನುಭವಿಗಳ ಪಾಲಿನ ವಂತಿಕೆಯನ್ನು ಒಂದೇ ಬಾರಿ ಪಾವತಿಸಿದರೆ ಹೆಚ್ಚಿನ ಬಡ್ಡಿ ಕಟ್ಟಬೇಕಾಗುತ್ತದೆ. ಈ ಕಾರಣಕ್ಕಾಗಿ ಕಂತುಗಳಲ್ಲಿ ಪಾವತಿಗೆ ಅವಕಾಶ ಕಲ್ಪಿಸಬೇಕು ಎಂದು ಸೂಚಿಸಿದರು.

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ 4 ಲಕ್ಷ, ನಗರ ಪ್ರದೇಶಗಳಲ್ಲಿ 1ಲಕ್ಷ ಮತ್ತು ಕೊಳೆಗೇರಿಗಳಲ್ಲಿ 97,000 ಮನೆಗಳನ್ನು ನಿರ್ಮಿಸಲಾಗುತ್ತಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಹೆಚ್ಚಿನ ಮನೆಗಳ ಮಂಜೂರಾತಿ ಆಗ ಲಿದೆ. ರಾಜ್ಯವು ವಸತಿ ಕ್ರಾಂತಿಯ ಹಾದಿಯಲ್ಲಿದೆ ಎಂದು ಹೇಳಿದರು.

ವಸತಿ ಸಚಿವ ವಿ.ಸೋಮಣ್ಣ, 'ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಯಡಿ 46,499 ಮನೆಗಳ ಹಂಚಿಕೆಗೆ ಫಲಾನುಭವಿಗಳ ಆಯ್ಕೆ ಮುಗಿದಿದೆ. 6,000 ಮನೆಗಳ ನಿರ್ಮಾಣ ಮುಗಿದಿದೆ. ಫಲಾನುಭವಿಗಳ ವಂತಿಗೆ ಪಾವತಿ ತಡವಾದ ಕಾರಣದಿಂದ ಯೋಜನೆ ಅನುಷ್ಠಾನ ವಿಳಂಬವಾಗಿದೆ' ಎಂದರು.

ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್, ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ

ಅಲೆಮಾರಿಗಳ ವಸತಿ ಯೋಜನೆ ಅನುದಾನ ವಾಪಸ್ ಇಲ್ಲ

ಪ್ರಜಾವಾಣಿ ವಾರ್ತೆ



ಕೋಟ ಶ್ರೀನಿವಾಸ ಪೂಜಾರಿ

ವರದಿ ಪರಿಣಾಮ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪಂಗಡಗಳ (ಎಸ್.ಟಿ) ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ವಸತಿರಹಿತ ಕುಟುಂಬಗಳಿಗೆ ವಸತಿ ಕಲ್ಪಿಸಲು ವಿಶೇಷ ಯೋಜನೆಯಡಿ ಒದಗಿಸಿರುವ ₹ 250 ಕೋಟಿ ಅನುದಾನ ವಾಪಸ್ ಪಡೆದು, ಅನ್ಯ ಉದ್ದೇಶಕ್ಕೆ ಬಳಸುವುದಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದ್ದಾರೆ.

ಎಸ್.ಸಿ ಮತ್ತು ಎಸ್‌ಟಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯಗಳ ವಿಶೇಷ ವಸತಿ ಯೋಜನೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಬಿಡುಗಡೆ ಮಾಡಿದ್ದ ₹ 250 ಕೋಟಿ ಅನುದಾನವನ್ನು ಹಿಂಪಡೆದು, ನಿಗಮದಲ್ಲಿ ಪ್ರಗತಿಯಲ್ಲಿರುವ ವಸತಿ ಯೋಜನೆಗಳಿಗೆ ಮರು ಹಂಚಿಕೆ ಮಾಡುವಂತೆ ಹಣಕಾಸು ಇಲಾಖೆ ಸೂಚನೆ ನೀಡಿತ್ತು. ಇದರಿಂದ ಈ ಸಮುದಾಯಗಳ 14,000 ಕುಟುಂಬಗಳ ಸ್ವಂತ ಸೂರಿನ ಸೌಲಭ್ಯದಿಂದ ವಂಚಿತರಾಗುವ ಕುರಿತು 'ಪ್ರಜಾವಾಣಿ'ಯ ಜನವರಿ 27ರ ಸಂಚಿಕೆ ಯಲ್ಲಿ 'ಅಲೆಮಾರಿಗಳ ಸ್ವಂತ ಸೂರಿನ ಕನಸು ಭಗ್ನ!' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು.

ಅಲೆಮಾರಿಗಳು ಮತ್ತು ಅರೆ ಅಲೆಮಾರಿಗಳ ವಿಶೇಷ ವಸತಿ ಯೋಜನೆಗೆ ನೀಡಿದ್ದ ಅನುದಾನವನ್ನು ಹಿಂಪಡೆಯುವ ಸರ್ಕಾರದ ನಿರ್ಧಾರವನ್ನು ಎಸ್.ಸಿ, ಎಸ್.ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ವಿರೋಧಿಸಿತ್ತು. ಸಂಘಟನೆಯ ಸದಸ್ಯರ ಉಪಸ್ಥಿತಿಯಲ್ಲಿ ಸಮಾಜ ಕಲ್ಯಾಣ, ವಸತಿ ಮತ್ತು ಹಣಕಾಸು ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಕೋಟ ಶ್ರೀನಿವಾಸ ಪೂಜಾರಿ, ಯೋಜನೆಯ ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಕ್ರಿಮಿನಲ್ ಪ್ರಕರಣದ ಎಚ್ಚರಿಕೆ: 'ಎಸ್.ಸಿ ಹಾಗೂ ಎಸ್.ಟಿಗೆ ಸೇರಿದ ಅಲೆಮಾರಿಗಳು, ಅರೆ ಅಲೆಮಾರಿಗಳು ಮತ್ತು ಅತಿಸಣ್ಣ ಸಮುದಾಯಗಳ ವಿಶೇಷ ವಸತಿ ಯೋಜನೆಯ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಿದರೆ ಕ್ರಿಮಿನಲ್ ಪ್ರಕರಣ ದಾಖಲು ಮಾಡುವುದಾಗಿ ಸಚಿವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಆದಷ್ಟು ಬೇಗ ವಸತಿ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವಂತೆ ತಾಕೀತು ಮಾಡಿದ್ದಾರೆ. ಅನುದಾನವನ್ನು ನಿಗದಿತ ಉದ್ದೇಶಕ್ಕೆ ಮಾತ್ರ ಬಳಸುವುದಾಗಿ ಭರವಸೆಯನ್ನೂ ನೀಡಿದ್ದಾರೆ' ಎಂದು ಎಸ್.ಸಿ ಮತ್ತು ಎಸ್.ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ಪ್ರಧಾನ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಮಹಾಸಭಾ ಅಧ್ಯಕ್ಷ ವೆಂಕಟರಮಣಯ್ಯ, ಕಾರ್ಯಾಧ್ಯಕ್ಷ ಆದರ್ಶ್ ಯಲ್ಲಪ್ಪ, ಉಪಾಧ್ಯಕ್ಷರಾದ ಆನಂದ್ ಕುಮಾರ್ ಏಕಲವ್ಯ, ಲೋಹಿತಾಶ್ವ, ಜಂಟಿ ಕಾರ್ಯದರ್ಶಿ ಮಂಜುನಾಥ್ ಬಿ.ಎಚ್., ಖಜಾಂಚಿ ಸಿದ್ದಪ್ಪಾಜಿ ಕೊಳ್ಳೇಗಾಲ ಸಭೆಯಲ್ಲಿ ಪಾಲ್ಗೊಂಡಿದ್ದರು.

ಜೆಡಿಎಸ್‌ನಿಂದ ಮಾಜಿ ಸಂಸದ ಶಿವರಾಮೇಗೌಡ ಉಚ್ಚಾಟನೆ



ಬೆಂಗಳೂರು: ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಅವರನ್ನು ಜೆಡಿಎಸ್‌ನಿಂದ ಉಚ್ಚಾಟಿಸಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ಸೋಮವಾರ ಆದೇಶ ಹೊರಡಿಸಿದ್ದಾರೆ.

ಜೆಡಿಎಸ್ ವರಿಷ್ಠರು, ಮಂಡ್ಯದ ಮಾಜಿ ಸಂಸದ ಜಿ.ಮಾದೇಗೌಡ, ಜೆಡಿಎಸ್ ಶಾಸಕ ಸುರೇಶ್ ಗೌಡ ಕುರಿತು ಶಿವರಾಮೇಗೌಡ ಅವರು ಕಾರ್ಯಕರ್ತೆಯೊಬ್ಬರ ಜತೆ ದೂರವಾಣಿಯಲ್ಲಿ ಅನುಚಿತವಾಗಿ ಮಾತನಾಡಿದ್ದ ಆಡಿಯೊ ಜಾಲತಾಣಗಳಲ್ಲಿ ಪ್ರಸಾರವಾಗಿತ್ತು. ಇದೇ ಕಾರಣದಿಂದ ಉಚ್ಚಾಟಿಸಿ ಆದೇಶ ಹೊರಡಿಸಲಾಗಿದೆ.

ಈ ಕುರಿತು ಸೋಮವಾರ ಮಾತನಾಡಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, 'ರಾಜ್ಯವೇ ಗೌರವಿಸುತ್ತಿದ್ದ ಮಾದೇಗೌಡ ಅವರ ಬಗ್ಗೆ ಅಸಭ್ಯವಾಗಿ ಮಾತನಾಡಿರು ವುದು ಅಕ್ಷಮ್ಯ. ಇಂತಹದ್ದನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಅಂಥವರು ಪಕ್ಷದಲ್ಲಿರುವುದು ನಮಗೆ ಶೋಭೆ ತರುವುದಿಲ್ಲ' ಎಂದಿದ್ದರು.

'ಶಿವರಾಮೇಗೌಡರು ಪಕ್ಷದ ಕಾರ್ಯಕರ್ತೆಯ ಜತೆಗೆ ಮಂಡ್ಯ ರಾಜಕೀಯಕ್ಕೆ ಸಂಬಂಧಿಸಿ ಅನಗತ್ಯ ವಿಚಾರಗಳನ್ನು ಚರ್ಚಿಸಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ₹ 30 ಕೋಟಿ ಖರ್ಚು ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ಅಷ್ಟು ಹಣವನ್ನು ಯಾರಿಗೆ ಕೊಟ್ಟಿದ್ದರೋ ಗೊತ್ತಿಲ್ಲ' ಎಂದು ಹೇಳಿದರು.

ಆರ್‌ಎಲ್‌ಡಿಯ ಜಯಂತ್ ಪರ ಶಾ ಮೃದು ನಿಲುವು: ಯೋಗಿಯಿಂದ ತೀವ್ರ ಟೀಕೆ

ಜಾಟ್ ಸಿಟ್ಟು: ಬಿಜೆಪಿ ಗೊಂದಲದ ಗೂಡು

• ಸಂಜಯ ಪಾಂಡೆ

ಲಖನೌ: ಉತ್ತರ ಪ್ರದೇಶ ವಿಧಾನಸಭೆಗೆ ಮೊದಲ ಮತ್ತು ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಪಶ್ಚಿಮ ಭಾಗದಲ್ಲಿ ಬಿಜೆಪಿ ಪೂರ್ಣ ಗೊಂದಲಕ್ಕೆ ಈಡಾದಂತೆ ತೋರುತ್ತಿದೆ. ಜಾಟ್ ಸಮುದಾಯ ಮತ್ತು ರೈತರ ಆಕ್ರೋಶವು ಬಿಜೆಪಿಯ ನೆಲೆಗಟ್ಟನ್ನು ಅಲುಗಾಡಿಸಿದಂತೆ ಕಾಣಿಸುತ್ತಿದೆ. 'ಜಾಟ್ ಪ್ರದೇಶ'ದಲ್ಲಿ ಕೋಮು ಧ್ರುವೀಕರಣದ ಪ್ರಯತ್ನಗಳನ್ನು ಬಿಜೆಪಿ ನಡೆಸಿದೆ. ಜತೆಗೆ, ಮತದಾರರಿಗೆ ವಿರೋಧಾಭಾಸಕರ ಸಂದೇಶಗಳನ್ನೂ ಕಳುಹಿಸುತ್ತಿದೆ.

ಜಾಟ್ ಸಮುದಾಯದ ಪ್ರಮುಖ ನಾಯಕ, ರಾಷ್ಟ್ರೀಯ ಲೋಕ ದಳದ (ಆರ್‌ಎಲ್‌ಡಿ) ಅಧ್ಯಕ್ಷ ಜಯಂತ್ ಚೌಧರಿ ಬಗ್ಗೆ ಬಿಜೆಪಿಯಲ್ಲಿ ಭಿನ್ನ ನಿಲುವು ಇದೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಬಿಜೆಪಿಗೆ ಅವರು ಈಗ ಬಹುದೊಡ್ಡ ಸವಾಲು.

ಸಮಾಜವಾದಿ ಪಕ್ಷದ ಜತೆಗೆ ಮೈತ್ರಿ ಮಾಡಿಕೊಂಡಿರುವ ಜಯಂತ್ ಅವರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎನ್‌ಡಿಎಗೆ ಆಹ್ವಾನಿಸಿದ್ದಾರೆ. ಆದರೆ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಇದಕ್ಕೆ ತದ್ವಿರುದ್ಧ ನಿಲುವು ತಳೆದಿದ್ದಾರೆ.

ಶಾ ಮತ್ತು ಬಿಜೆಪಿಯ ಇತರ ಕೆಲವು ಮುಖಂಡರು ಜಯಂತ್ ಅವರ ವಿರುದ್ಧ ವಾಗ್ದಾಳಿ ನಡೆಸುತ್ತಿಲ್ಲ. ಆದರೆ, ಯೋಗಿ ಅವರು ಜಯಂತ್ ಅವರನ್ನು ಟೀಕಿಸುವ ವಿಚಾರದಲ್ಲಿ ಹಿಂದೆ ಮುಂದೆ ನೋಡಿದ್ದೇ ಇಲ್ಲ.

ರಾಜ್ಯದಲ್ಲಿ ಗಲಭೆ ಸೃಷ್ಟಿಸುವುದಕ್ಕಾಗಿಯೇ ಈ ಇಬ್ಬರು ಒಂದಾಗಿದ್ದಾರೆ ಎಂದು ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಮತ್ತು ಜಯಂತ್ ಅವರನ್ನು ಉಲ್ಲೇಖಿಸಿ ಯೋಗಿ ಇತ್ತೀಚೆಗೆ ಹೇಳಿದ್ದರು.

ದೆಹಲಿಯ ಬಿಜೆಪಿ ಸಂಸದ ಪ್ರವೇಶ ವರ್ಮಾ ಅವರ ಹೇಳಿಕೆಗೂ ಯೋಗಿ ಅವರ ನಿಲುವಿಗೂ ಬಹಳ ವ್ಯತ್ಯಾಸ ಇದೆ. ಜಯಂತ್ ಅವರು ಕೆಟ್ಟ ಪಕ್ಷದ ಸಹವಾಸದಲ್ಲಿದ್ದಾರೆ ಎಂದು ವರ್ಮಾ ಹೇಳಿದ್ದಾರೆ. ಆರ್‌ಎಲ್‌ಡಿಗೆ ಬಿಜೆಪಿಯ ಬಾಗಿಲು ತೆರೆದೇ ಇದೆ. ವಿಧಾನಸಭೆ ಚುನಾವಣೆ ಮುಗಿದ ಬಳಿಕವೂ ಅವರು ಬಿಜೆಪಿಯ ಜತೆಗೆ ಕೈಜೋಡಿಸಬಹುದು ಎಂದು ವರ್ಮಾ ಹೇಳಿದ್ದಾರೆ.

'ಜಯಂತ್ ವಿರುದ್ಧ ಮಾತನಾಡುವುದು ತಿರುಗುಬಾಣ ಆಗಬಹುದು ಎಂದು ಶಾ ಅವರಿಗೆ ಅರಿವಾಗಿದೆ. ಏಕೆಂದರೆ ಜಾಟ್ ಸಮುದಾಯದಲ್ಲಿ ಅವರಿಗೆ ಭಾರಿ ಬೆಂಬಲ ಇದೆ. ಅದೂ ಅಲ್ಲದೆ, ವಿಧಾನಸಭೆ ಚುನಾವಣೆಯ ಬಳಿಕ ಯಾರಿಗೂ ಬಹುಮತ ಇಲ್ಲದ ಸ್ಥಿತಿ ಎದುರಾದರೆ, ಆರ್‌ಎಲ್‌ಡಿಯ ಬೆಂಬಲ ಕೋರಬಹುದು ಎಂಬ ಲೆಕ್ಕಾಚಾರವೂ ಬಿಜೆಪಿಯಲ್ಲಿ ಇದೆ' ಎಂದು ಮೀರಠ್‌ನ ಪತ್ರಕರ್ತರೊಬ್ಬರು ವಿಶ್ಲೇಷಿಸಿದ್ದಾರೆ.

ಬಿಜೆಪಿ ನೇತೃತ್ವದ ಮೈತ್ರಿಕೂಟ ಸೇರುವುದಕ್ಕೆ ಸಂಬಂಧಿಸಿ ಜಯಂತ್ ಅವರು ನೀಡಿರುವ ಹೇಳಿಕೆಗಳನ್ನು ಬಿಜೆಪಿ ಗಂಭೀರವಾಗಿ ತೆಗೆದುಕೊಂಡಿಲ್ಲ ಎಂದು ಕೇಂದ್ರ ಸಚಿವ ಮತ್ತು ಉತ್ತರ ಪ್ರದೇಶ ಬಿಜೆಪಿ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಅವರೂ ಹೇಳಿದ್ದಾರೆ.

'ಅವರು (ಜಯಂತ್) ಈಗಷ್ಟೇ ರಾಜಕಾರಣ ಕಲಿಯುತ್ತಿದ್ದಾರೆ. ರಾಜಕೀಯದ ಒಳಸುಳಿಗಳನ್ನು ಅರ್ಥ ಮಾಡಿಕೊಳ್ಳುವಷ್ಟು ಪ್ರಬುದ್ಧತೆ ಅವರಿಗೆ ಇಲ್ಲ. ಅವರನ್ನು ಕ್ಷಮಿಸುವುದು ಹಿರಿಯರಾಗಿರುವ ನಮ್ಮ ಕರ್ತವ್ಯ' ಎಂದು ಪ್ರಧಾನ್ ಹೇಳಿದ್ದಾರೆ.

ಇತಿಹಾಸದಿಂದ ಕಲಿಯುವಂತೆ ಪ್ರಧಾನ್ ಅವರು ಜಯಂತ್‌ಗೆ ಹೇಳಿದ್ದಾರೆ. 'ಅವರ ತಂದೆ (ಅಜಿತ್ ಸಿಂಗ್ ಚೌಧರಿ) ಅವರು ಹಲವು ಬಾರಿ ಪಕ್ಷ ಬದಲಾಯಿಸಿದ್ದರು' ಎಂದು ಪ್ರಧಾನ್ ಹೇಳಿದ್ದಾರೆ.

ಶಾ, ಪ್ರಧಾನ್ ಮತ್ತು ಇತರರು ಜಯಂತ್ ಅವರ ಮನವೊಲಿಕೆಯ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಹೀಗಿರುವಾಗ, ಯೋಗಿ ಅವರು ಜಯಂತ್ ಅವರನ್ನು ತೀವ್ರವಾಗಿ ಖಂಡಿಸುತ್ತಿರುವುದು ಹಲವರ ಆಶ್ಚರ್ಯಕ್ಕೆ ಕಾರಣವಾಗಿದೆ. 'ಜಯಂತ್ ಅವರ ಜತೆಗೆ ಚೆನ್ನಾಗಿ ಇರುವುದು ಯೋಗಿ ಅವರಿಗೆ ಬೇಕಿದ್ದಂತೆ ಕಾಣಿಸುತ್ತಿಲ್ಲ' ಎಂದು ಲಖನೌದ ರಾಜಕೀಯವ ವಿಶ್ಲೇಷಕರೊಬ್ಬರು ಹೇಳಿದ್ದಾರೆ.

ಯೋಗಿ ಅವರೊಬ್ಬರಿಂದಲೇ ಉತ್ತರ ಪ್ರದೇಶದಲ್ಲಿ ಗೆಲುವು ಸಾಧ್ಯವಿಲ್ಲ ಎಂಬ ಭಾವನೆ ಬಿಜೆಪಿಯಲ್ಲಿ ಇದೆ ಎಂಬುದಕ್ಕೆ ಜಯಂತ್ ಅವರ ಬಗ್ಗೆ ಬಿಜೆಪಿ ಮುಖಂಡರು ತೋರುತ್ತಿರುವ ವರ್ತನೆ ಪುರಾವೆಯಾಗಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರ ನೋಡಿ ಮತ ಹಾಕಿ ಎಂದು ಅಮಿತ್ ಶಾ ಅವರು ಮೀರಠ್‌ನಲ್ಲಿ ಕೆಲವು ದಿನಗಳ ಹಿಂದೆ ಹೇಳಿದ್ದರು.

'ಯೋಗಿ ಅವರು ತಮ್ಮ ಭಾವನೆಗಳನ್ನು ಅಡಗಿಸಿ ಇರಿಸುವುದಿಲ್ಲ. ಅವರು ತಮ್ಮ ಮನದಲ್ಲಿ ಇರುವುದನ್ನು ಪಕ್ಷದ ನಾಯಕತ್ವದ ಗಮನಕ್ಕೆ ತಂದೇ ತರುತ್ತಾರೆ' ಎಂದು ವಿಶ್ಲೇಷಕರು ಹೇಳಿದ್ದಾರೆ.



ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಉತ್ತರ ಪ್ರದೇಶದ ನೊಯ್ಡಾದಲ್ಲಿ ಸೋಮವಾರ ಮನೆ ಮನೆ ಪ್ರಚಾರ ನಡೆಸಿದರು –ಪಿಟಿಐ ಚಿತ್ರ

ಪಂಜಾಬ್: ಪಕ್ಷಾಂತರಿಗಳಿಗೆ ಎಲ್ಲ ಪಕ್ಷಗಳ ಮಣೆ

ಚಂಡೀಗಡ (ಪಿಟಿಐ): ಪಂಜಾಬ್‌ನಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಪಕ್ಷಾಂತರಿಗಳಿಗೆ ಮಣೆ ಹಾಕಿವೆ. ಬೇರೆ ಪಕ್ಷದಿಂದ ಬಂದವರಿಗೆ ಟಿಕೆಟ್ ಕೊಟ್ಟಿವೆ.

ಮಾಜಿ ಸಚಿವ ಮತ್ತು ಶಾಸಕ ಗುರ್ಮಿತ್ ಸಿಂಗ್ ಸೋಧಿ, ಶಾಸಕ ಫತೇಹ್‌ಜಂಗ್ ಸಿಗ್ ಬಾಜ್ವಾ ಮತ್ತು ಮಾಜಿ ಸಚಿವ ಅನಿಲ್ ಜೋಷಿ ಟಿಕೆಟ್ ಪಡೆದ ಪಕ್ಷಾಂತರಿಗಳಲ್ಲಿ ಪ್ರಮುಖರು.

ಕ್ಯಾಪ್ಟನ್ ಅಮರಿಂದರ್ ಸಿಂಗ್ ನೇತೃತ್ವದ ಸರ್ಕಾರದಲ್ಲಿ ಕ್ರೀಡಾ ಸಚಿವರಾಗಿದ್ದ ಸೋಧಿ ಅವರು ಬಳಿಕ ಬಿಜೆಪಿ ಸೇರಿದ್ದರು. ಅವರಿಗೆ ಫಿರೋಜ್‌ಪುರ ನಗರ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಈ ಹಿಂದೆ, ನಾಲ್ಕು ಬಾರಿ ಅವರು ಶಾಸಕರಾಗಿದ್ದರು.

ಕಾಂಗ್ರೆಸ್ ಶಾಸಕ ಫತೇಹ್‌ಜಂಗ್ ಸಿಂಗ್ ಬಾಜ್ವಾ ಬಿಜೆಪಿ ಸೇರಿದ್ದು, ಅವರಿಗೆ ಬಟಾಲಾ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಬಾಜ್ವಾ ಅವರು ಖದಿಯನ್ ಕ್ಷೇತ್ರವನ್ನು ಈಗ ಪ್ರತಿನಿಧಿಸುತ್ತಿದ್ದಾರೆ. ಅವರ ಅಣ್ಣ ಮತ್ತು ರಾಜ್ಯ ಸಭಾ ಸದಸ್ಯ ಪ್ರತಾಪ್ ಸಿಂಗ್ ಬಾಜ್ವಾ ಅವರನ್ನು ಕಾಂಗ್ರೆಸ್ ಪಕ್ಷವು ಕಣಕ್ಕೆ ಇಳಿಸಿದೆ.

ಪಂಜಾಬ್‌ನ ಮಾಜಿ ಸಚಿವ ಅನಿಲ್ ಜೋಶಿ ಅವರು ಬಿಜೆಪಿಯನ್ನು ಕಳೆದ ವರ್ಷ ತೊರೆದು ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಸೇರಿದ್ದರು. ಅವರಿಗೆ ಅಮೃತಸರ ಉತ್ತರ ಕ್ಷೇತ್ರದಿಂದ ಎಸ್‌ಎಡಿ ಟಿಕೆಟ್ ನೀಡಲಾಗಿದೆ. 2007–2012ರ ಅವಧಿಯಲ್ಲಿ ಜೋಶಿ ಅವರು ಈ ಕ್ಷೇತ್ರದ ಶಾಸಕರಾಗಿದ್ದರು. 2017ರಲ್ಲಿ ಅವರಿಗೆ ಸೋಲಾಗಿತ್ತು.

ಮೊಗಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಹರಜೋತ್ ಕಮಲ್ ಅವರು ಬಿಜೆಪಿ ಸೇರಿದ್ದಾರೆ. ಮೊಗಾ ಕ್ಷೇತ್ರದಿಂದ ಅವರಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಲಾಗಿತ್ತು. ಬಾಲಿವುಡ್ ನಟ ಮತ್ತು ಸಮಾಜಸೇವಕ ಸೋನು ಸೂದ್ ಅವರ ತಂಗಿ ಮಾಳವಿಕಾ ಸೂದ್ ಅವರಿಗೆ ಮೊಗಾ ಕ್ಷೇತ್ರದ ಟಿಕೆಟ್ ಘೋಷಣೆ ಮಾಡಲಾಗಿತ್ತು. ಬಳಿಕ, ಕಮಲ್ ಅವರು ಕಾಂಗ್ರೆಸ್ ತೊರೆದಿದ್ದರು. ಕಮಲ್ ಅವರು ಮೊಗಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

ಕಾಂಗ್ರೆಸ್ ಶಾಸಕ ಅರವಿಂದ ಖನ್ನಾ ಅವರು ಬಿಜೆಪಿಗೆ ಇತ್ತೀಚೆಗೆ ಸೇರ್ಪಡೆಯಾಗಿದ್ದು, ಸಂಗ್ರೂರ್‌ನಿಂದ ಸ್ಪರ್ಧಿಸಲಿದ್ದಾರೆ. ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರ ಆಪ್ತ ಎಂದು ಗುರುತಿಸಿಕೊಂಡಿದ್ದ ಖನ್ನಾ ಅವರು 2015ರಲ್ಲಿಯೇ ಕಾಂಗ್ರೆಸ್ ತೊರೆದಿದ್ದರು.

ಮೂರು ಬಾರಿಯ ಶಾಸಕ ಮತ್ತು ಮಾಜಿ ಸಚಿವ ಜೋಗಿಂದರ್ ಸಿಂಗ್ ಮಾನ್ ಅವರು ಆಮ್ ಆದ್ಮಿ ಪಕ್ಷ ಸೇರಿದ್ದಾರೆ. 50 ವರ್ಷ ಅವರು ಕಾಂಗ್ರೆಸ್‌ನಲ್ಲಿ ಇದ್ದರು. ಫಗ್ವಾರಾ ಕ್ಷೇತ್ರದಿಂದ ಅವರಿಗೆ ಟಿಕೆಟ್ ನೀಡಲಾಗಿದೆ.

ಕಾಂಗ್ರೆಸ್ ಶಾಸಕ ಹಂಸರಾಜ್ ಜೋಸನ್ ಅವರು ಎಸ್‌ಎಡಿ ಸೇರಿದ್ದು, ಫಜಿಲ್ಕಾ ಕ್ಷೇತ್ರದ ಅಭ್ಯರ್ಥಿ.

ಎಎಪಿಯ ಮಾಜಿ ಶಾಸಕ ಸುಖಪಾಲ್ ಸಿಂಗ್ ಖೈರಾ ಅವರು ಭೋಲಥ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. 2019ರಲ್ಲಿ ಎಎಪಿ ತೊರೆದ ಅವರು ಸ್ವಂತ ಪಕ್ಷ ಸ್ಥಾಪಿಸಿದ್ದರು. ಕಳೆದ ವರ್ಷ ಜೂನ್‌ನಲ್ಲಿ ಅವರು ಕಾಂಗ್ರೆಸ್‌ಗೆ ಮರುಸೇರ್ಪಡೆ ಆದರು. 2015ರಲ್ಲಿ ಅವರು ಕಾಂಗ್ರೆಸ್ ತೊರೆದು ಎಎಪಿ ಸೇರಿದ್ದರು.

ಎಸ್‌ಎಡಿ ಮಾಜಿ ಶಾಸಕ ದೀದಾರ್ ಸಿಂಗ್ ಭಾಟಿ ಅವರು ಬಿಜೆಪಿ ಸೇರಿ ಫತೇಗಡ ಸಾಹಿಬ್ ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ. ಎಎಪಿಯ ಮಾಜಿ ಪಂಜಾಬ್ ಸಂಚಾಲಕ ಸುಚಾ ಸಿಂಗ್ ಛೋಟೆಪುರ ಅವರೂ ಈಗ ಎಸ್‌ಎಡಿಯಲ್ಲಿದ್ದಾರೆ. ಅವರು ಬಟಾಲಾ ಕ್ಷೇತ್ರದ ಅಭ್ಯರ್ಥಿ. ಕಾಂಗ್ರೆಸ್ ತೊರೆದ ಲಾಲಿ ಮಜಿಥಿಯಾ ಅವರಿಗೆ ಎಎಪಿ ಅಮೃತಸರದಿಂದ ಸ್ಪರ್ಧಿಸಲು ಟಿಕೆಟ್ ನೀಡಿದೆ.

ಪಂಜಾಬ್: ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಇಳಿದ ಮುಖ್ಯಮಂತ್ರಿ

ಭಾದೌರ್ ಮೀಸಲು ಕ್ಷೇತ್ರದಿಂದ ಚನ್ನಿ ಕಣಕ್ಕೆ

ಚಂಡೀಗಡ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಮಾಳ್ವಾ ಪ್ರಾಂತದ ಭಾದೌರ್ ಮೀಸಲು ಕ್ಷೇತ್ರದ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ತಮ್ಮ ಎಂದಿನ ಕ್ಷೇತ್ರ ಚಮಕೌರ್ ಸಾಹಿಬ್‌ನಿಂದಲೂ ಅವರು ಸ್ಪರ್ಧಿಸಲಿದ್ದು, ಎರಡು ಕ್ಷೇತ್ರಗಳಿಂದ ಕಣಕ್ಕೆ ಇಳಿದಿದ್ದಾರೆ. ಚನ್ನಿ ಅವರನ್ನು ಎರಡು ಕ್ಷೇತ್ರಗಳಿಂದ ಕಣಕ್ಕೆ ಇಳಿಸುವ ಮೂಲಕ, ಅವರೇ ಕಾಂಗ್ರೆಸ್ ಮುಖ್ಯಮಂತ್ರಿ ಅಭ್ಯರ್ಥಿ ಎಂಬ ಸೂಚನೆಯನ್ನು ಪಕ್ಷ ನೀಡಿದೆ ಎಂದು ವಿಶ್ಲೇಷಿಸಲಾಗಿದೆ.

ಮಾಳ್ವಾ ಪ್ರಾಂತದಲ್ಲಿ 69 ವಿಧಾನಸಭಾ ಕ್ಷೇತ್ರಗಳಿದ್ದು, ಈ ಪ್ರಾಂತದಲ್ಲಿ ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ಪ್ರಾಬಲ್ಯವಿದೆ. ಚನ್ನಿ ಅವರು ಕಣಕ್ಕೆ ಇಳಿದಿರುವ ಬರ್ನಾಲಾ ಜಿಲ್ಲೆಯ ಭಾದೌರ್ ಮೀಸಲು ಕ್ಷೇತ್ರದಲ್ಲಿ ಹೆಚ್ಚು ಬಾರಿ ಗೆಲುವು ಸಾಧಿಸಿರುವುದು ಅಕಾಲಿದಳ. ಆದರೆ ಈ ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಈ ಕ್ಷೇತ್ರವನ್ನು ತನ್ನದಾಗಿಸಿಕೊಂಡಿತ್ತು.

50 ವರ್ಷಗಳಲ್ಲಿ ಕಾಂಗ್ರೆಸ್ ಎರಡು ಬಾರಿ ಮಾತ್ರ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿದೆ. ಎಎಪಿ ಒಮ್ಮೆ ಆಯ್ಕೆಯಾಗಿದ್ದು ಹೊರತುಪಡಿಸಿದರೆ, ಉಳಿದ ಎಲ್ಲಾ ಬಾರಿ ಅಕಾಲಿ ದಳವೇ ಈ ಕ್ಷೇತ್ರವನ್ನು ರಾಜ್ಯ ವಿಧಾನಸಭೆಯಲ್ಲಿ ಪ್ರತಿನಿಧಿಸಿದೆ.

ಈ ಬಾರಿ ಅಕಾಲಿದಳ ಮತ್ತು ಎಎಪಿ ಮಧ್ಯೆಯೇ ತೀವ್ರ ಪೈಪೋಟಿ ಇರುವ ಕ್ಷೇತ್ರವಿದು. ಹೀಗಿದ್ದೂ ಕಾಂಗ್ರೆಸ್, ಚನ್ನಿ ಅವರನ್ನು ಈ ಕ್ಷೇತ್ರದಿಂದ ಕಣಕ್ಕೆ ಇಳಿಸಿದೆ. ಚನ್ನಿ ಅವರು ಈ ಕ್ಷೇತ್ರದಿಂದ ಕಣಕ್ಕೆ ಇಳಿದಿರುವುದನ್ನು ಎಎಪಿ ಲೇವಡಿ ಮಾಡಿದೆ. ಚಮಕೌರ್ ಕ್ಷೇತ್ರದಲ್ಲಿ ಸೋಲುವ ಭಯವಿರುವ ಕಾರಣ, ಚನ್ನಿ ಬೇರೆ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಇದಕ್ಕೆ ಖಾರವಾಗಿ ಪ್ರತಿಕ್ರಿಯಿಸಿರುವ ಚನ್ನಿ, 'ಕೇಜ್ರಿವಾಲ್ ಪಂಜಾಬ್‌ಗೆ ಬಂದು ಯಾವ ಕ್ಷೇತ್ರದಲ್ಲಾದರೂ ನನ್ನ ಎದುರು ಸ್ಪರ್ಧಿಸಲಿ' ಎಂದು ಸವಾಲು ಹಾಕಿದ್ದಾರೆ. 'ಕ್ಯಾಪ್ಟನ್ ಅಮರಿಂದರ್ ಸಿಂಗ್ ಮತ್ತು ಪ್ರಕಾಶ ಸಿಂಗ್ ಬಾದಲ್ ಅವರ ಆಡಳಿತದಲ್ಲಿ ಮಾಳ್ವಾ ಕ್ಷೇತ್ರವು ಅಭಿವೃದ್ಧಿಯೇ ಆಗಿಲ್ಲ. ನಮ್ಮ ಸರ್ಕಾರವು ಮಾಳ್ವಾವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಿದೆ' ಎಂದು ಚನ್ನಿ ಹೇಳಿದ್ದಾರೆ.



ನಾಮಪತ್ರ ಸಲ್ಲಿಕೆಯ ನಂತರ ಪಠ್ರಾನ್ ವಾಲಿಯಲ್ಲಿನ ರುದ್ರಶಿವ ದೇವಾಲಯದಲ್ಲಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಪೂಜೆ ನೆರವೇರಿಸಿದರು – ಪಿಟಿಐ ಚಿತ್ರ

ಪ್ರಮುಖರ ನಾಮಪತ್ರ

- ಶಿರೋಮಣಿ ಅಕಾಲಿ ದಳ ಮುಖ್ಯಸ್ಥ ಸುಖಬೀರ್ ಸಿಂಗ್ ಬಾದಲ್ ಅವರು ಫಜಿಲ್ಕಾ ಜಿಲ್ಲೆಯ ಜಲಾಲಾಬಾದ್ ಕ್ಷೇತ್ರದ ಅಭ್ಯರ್ಥಿಯಗಿ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ
- ಶಿರೋಮಣಿ ಅಕಾಲಿ ದಳದ ಹಿರಿಯ ನಾಯಕ ಪ್ರಕಾಶ್ ಸಿಂಗ್ ಬಾದಲ್ (94) ಅವರು ಲಂಬಿ ಕ್ಷೇತ್ರದ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ಈಗ ಚುನಾವಣೆ ನಡೆಯುತ್ತಿರುವ ಐದು ರಾಜ್ಯಗಳಲ್ಲಿ ಕಣದಲ್ಲಿರುವ ಅತ್ಯಂತ ಹಿರಿಯ ಅಭ್ಯರ್ಥಿ ಅವರಾಗಿದ್ದಾರೆ
- ಪಂಜಾಬ್ ಲೋಕ ಕಾಂಗ್ರೆಸ್‌ನ ಮುಖ್ಯಸ್ಥ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಪಟಿಯಾಲಾ ನಗರ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದಾರೆ

ನಾನು ಸುಧಾಮನಂತೆ ಮಾಳ್ವಾಗೆ ಬಂದಿದ್ದೇನೆ. ಮಾಳ್ವಾ ಜನರು ಶ್ರೀ ಕೃಷ್ಣನಂಥವರು. ಈ ಜನರು ನನ್ನನ್ನು ಚೆನ್ನಾಗಿ ನೋಡಿಕೊಳ್ಳಲಿದ್ದಾರೆ
ಚರಣ್‌ಜಿತ್ ಸಿಂಗ್ ಚನ್ನಿ, ಪಂಜಾಬ್ ಮುಖ್ಯಮಂತ್ರಿ

ಅವರು ದಲಿತ ಅಭ್ಯರ್ಥಿ, ನಾನೂ ದಲಿತ ಅಭ್ಯರ್ಥಿ. ವ್ಯತ್ಯಾಸವೆಂದರೆ ಚನ್ನಿ ಖಾಸಗಿ ವಿಮಾನದಲ್ಲಿ ಓಡಾಡುವ ದಲಿತ
ಲಾಭ್ ಸಿಂಗ್ ಉಘೋಕ್, ಭಾದೌರ್‌ನ ಹಾಲಿ ಶಾಸಕ , ಎಎಪಿ ಅಭ್ಯರ್ಥಿ

ನುಡಿ–ಕಿಡಿ



ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಆಳ್ವಿಕೆಯಲ್ಲಿ ಹಣದುಬ್ಬರ ಹೆಚ್ಚುತ್ತಲೇ ಇದೆ. ಜತೆಗೆ, ಬಿಜೆಪಿಯ ಸ್ವತ್ತಿನ ಮೌಲ್ಯವು ₹780 ಕೋಟಿಯಿಂದ ₹4,850 ಕೋಟಿಗೆ ಏರಿದೆ. ಬಿಜೆಪಿಯ ಸಂಪತ್ತು ಶೇ 550ರಷ್ಟು ಹೆಚ್ಚಳವಾಗಿದೆ

ರಣದೀಪ್ ಸುರ್ಜೇವಾಲಾ, ಕಾಂಗ್ರೆಸ್ ಮುಖ್ಯ ವಕ್ತಾರ



ಉತ್ತರ ಪ್ರದೇಶದಲ್ಲಿ, ಐದು ವರ್ಷಗಳ ಹಿಂದೆ ಬಾಹುಬಲಿಗಳು ಮತ್ತು ಗಲಭೆಕೋರರರೇ ಕಾನೂನಾಗಿದ್ದರು. ಅವರು ಏನು ಹೇಳುತ್ತಿದ್ದರೋ ಅದುವೇ ಸರ್ಕಾರಿ ಆದೇಶವಾಗುತ್ತಿತ್ತು. ವರ್ತಕರನ್ನು ಲೂಟಿ ಮಾಡಲಾಗುತ್ತಿತ್ತು. ಹೆಣ್ಣು ಮಕ್ಕಳು ಮನೆಯಿಂದ ಹೊರಬರಲು ಹೆದರುತ್ತಿದ್ದರು. ಮಾಫಿಯಾಗಳು ಮುಕ್ತವಾಗಿ ಓಡಾಡುತ್ತಿದ್ದರು

ನರೇಂದ್ರ ಮೋದಿ, ಪ್ರಧಾನಿ



ತೆರಿಗೆ ಹೊರೆಯಿಂದ ದೇಶದ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಆದರೆ, ತೆರಿಗೆ ಸಂಗ್ರಹ ಹೆಚ್ಚಳವೇ ದೊಡ್ಡ ಸಾಧನೆ ಎಂದು ಕೇಂದ್ರ ಸರ್ಕಾರ ಬೀಗುತ್ತಿದೆ. ಗ್ರಹಿಕೆಯಲ್ಲಿ ವ್ಯತ್ಯಾಸ ಇದೆ. ಅವರು ತಮ್ಮ ಸಂಪತ್ತು ಮಾತ್ರ ನೋಡುತ್ತಿದ್ದಾರೆ. ಜನರ ನೋವು ಅವರಿಗೆ ಅರ್ಥ ಆಗುತ್ತಿಲ್ಲ

ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ



ಉತ್ತರಾಖಂಡ ರಾಜ್ಯ ರಚನೆಯ ಪರವಾಗಿ ಕಾಂಗ್ರೆಸ್ ಮುಖಂಡರು ಇರಲಿಲ್ಲ. ಉತ್ತರಾಖಂಡವನ್ನು ಕೇಂದ್ರಾಡಳಿತ ಪ್ರದೇಶ ಮಾಡಬೇಕು ಎಂಬುದು ಕಾಂಗ್ರೆಸ್ ಮುಖಂಡರ ಬಯಕೆಯಾಗಿತ್ತು. ಆದರೆ, ಬಿಜೆಪಿ ಉತ್ತರಾಖಂಡ ರಾಜ್ಯ ರಚಿಸಿದ್ದಷ್ಟೇ ಅಲ್ಲದೆ, ಈ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಿದೆ

ರಮೇಶ್ ಪೋಖ್ರಿಯಾಲ್ ನಿಶಾಂಕ್, ಬಿಜೆಪಿ ಮುಖಂಡ

ಆಧಾರ: ಪಿಟಿಐ

ಚುನಾವಣಾ ರ‍್ಯಾಲಿ: ಫೆ.11ರವರೆಗೆ ನಿರ್ಬಂಧ ವಿಸ್ತರಣೆ

ನವದೆಹಲಿ (ಪಿಟಿಐ): ರೋಡ್‌ಶೋ, ಪಾದಯಾತ್ರೆ, ವಾಹನಗಳ ರ‍್ಯಾಲಿ ಹಾಗೂ ಮೆರವಣಿಗೆಗಳ ಮೇಲಿನ ನಿರ್ಬಂಧವನ್ನು ಚುನಾವಣಾ ಆಯೋಗವು ಫೆ. 11ರವರೆಗೆ ವಿಸ್ತರಿಸಿದೆ. ಆದರೆ, ಮನೆಮನೆ ಪ್ರಚಾರಕ್ಕೆ ಹೋಗುವ ಜನರ ಸಂಖ್ಯೆಯನ್ನು 10ರಿಂದ 20ಕ್ಕೆ ಹೆಚ್ಚಿಸಿದೆ. ಜೊತೆಗೆ ಭೌತಿಕ ಸಭೆಗಳಲ್ಲಿ ಸೇರುವ ಜನರ ಸಂಖ್ಯೆಯನ್ನು ಗರಿಷ್ಠ 1,000ಕ್ಕೆ ಮಿತಿಗೊಳಿಸಿದೆ.

ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ, ಆಯುಕ್ತರಾದ ರಾಜೀವ್ ಕುಮಾರ್ ಮತ್ತು ಅನೂಪ್ ಚಂದ್ರ ಪಾಂಡೆ ಅವರು ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ, ಗೋವಾ, ಮಣಿಪುರ, ಪಂಜಾಬ್, ಉತ್ತರಾಖಂಡ ರಾಜ್ಯಗಳಲ್ಲಿನ ಕೋವಿಡ್ ಪರಿಸ್ಥಿತಿಯನ್ನು ಅವಲೋಕಿಸಿದ ಬಳಿಕ ಈ ನಿರ್ಧಾರವನ್ನು ಪ್ರಕಟಿಸಿದರು.

ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ನಡೆಸುವ ಭೌತಿಕ ಸಾರ್ವಜನಿಕ ಸಭೆಗಳನ್ನು ಗೊತ್ತುಪಡಿಸಿದ ತೆರೆದ ಸ್ಥಳಗಳಲ್ಲಿ ಮಾತ್ರ ನಡೆಸಲು ಆಯೋಗ ಅನುಮತಿ ನೀಡಿದೆ.

ಚುನಾವಣಾ ಕಣದಲ್ಲಿ



ಅಖಿಲೇಶ್ ಯಾದವ್ ಅವರು ಮೈನ್‌ಪುರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿ ಬೆಂಬಲಿಗರೊಂದಿಗೆ ಹೊರ ಬಂದರು ಪಿಟಿಐ ಚಿತ್ರ

ಅಖಿಲೇಶ್ ವಿರುದ್ಧ ಬಘೇಲ್: ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ವಿರುದ್ಧ ಕೇಂದ್ರ ಸಚಿವ ಎಸ್.ಪಿ. ಸಿಂಗ್ ಬಘೇಲ್ ಅವರನ್ನು ಉತ್ತರ ಪ್ರದೇಶದ ಕರ್ಹಾಲ್ ಕ್ಷೇತ್ರದಿಂದ ಬಿಜೆಪಿ ಕಣಕ್ಕೆ ಇಳಿಸಿದೆ. ಸೋಮವಾರ ಅವರು ನಾಮಪತ್ರ ಸಲ್ಲಿಸಿದ್ದಾರೆ. ಅಖಿಲೇಶ್ ಅವರ ಚಿಕ್ಕಪ್ಪ ಶಿವಪಾಲ್ ಸಿಂಗ್ ಯಾದವ್ ಅವರ ವಿರುದ್ಧ ಜಸ್ವಂತ್ ನಗರ ಕ್ಷೇತ್ರದಿಂದ ವಿವೇಕ್ ಶಾಕ್ಯ ಅವರನ್ನು ಬಿಜೆಪಿ ಕಣಕ್ಕೆ ಇಳಿಸಲಿದೆ. ಅಖಿಲೇಶ್ ಅವರೂ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ.

ಮಣಿಪುರ ಬಿಜೆಪಿ ಶಾಸಕ ಕಾಂಗ್ರೆಸ್‌ಗೆ: ಮಣಿಪುರದ ಬಿಜೆಪಿ ಶಾಸಕ ಪಿ. ಶರತ್‌ಚಂದ್ರ ಅವರು ಕಾಂಗ್ರೆಸ್ ಸೇರಿದ್ದಾರೆ. ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ಸಿಗದ ಕಾರಣ ಅವರು ಭಾನುವಾರ ಬಿಜೆಪಿ ತೊರೆದಿದ್ದರು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಶರತ್‌ಚಂದ್ರ ವಿರುದ್ಧ 400 ಮತಗಳ ಅಂತರದಲ್ಲಿ ಸೋತಿದ್ದ ಪೃಥ್ವಿರಾಜ್ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ. ಬಿಜೆಪಿಯ ಹಿರಿಯ ಮುಖಂಡರಾದ ಎನ್. ಬೀರೇನ್ ಮತ್ತು ಎನ್. ಜಾಯ್‌ಕುಮಾರ್ ಅವರೂ ಕಾಂಗ್ರೆಸ್‌ಗೆ ಸೇರಿದ್ದಾರೆ.

'ಎಲ್ಲ ಕ್ಷೇತ್ರಗಳ ಸ್ಪರ್ಧೆಯೇ ಸಾಧನೆ': ಉತ್ತರ ಪ್ರದೇಶದ ಎಲ್ಲ 403 ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು ಮೂರು ದಶಕಗಳ ಬಳಿಕ ಕಾಂಗ್ರೆಸ್ ಸ್ಪರ್ಧಿಸುತ್ತಿದೆ ಎಂಬುದೇ ದೊಡ್ಡ ಸಾಧನೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಕಠಿಣ ಸ್ಪರ್ಧೆ ಒಡ್ಡಿದ್ದಕ್ಕಾಗಿ ಎಫ್‌ಐಆರ್, ದೂರುಗಳು ಮತ್ತು ಜೈಲು ವಾಸಕ್ಕೂ ಸಿದ್ಧ ಎಂದು ಪ್ರಿಯಾಂಕಾ ಹೇಳಿದ್ದಾರೆ.

10 ಕ್ಷೇತ್ರಗಳಲ್ಲಿ ಎನ್‌ಪಿಎಫ್ ಸ್ಪರ್ಧೆ: ಮಣಿಪುರ ವಿಧಾನಸಭೆಯ 10 ಕ್ಷೇತ್ರಗಳಿಗೆ ಸ್ಪರ್ಧಿಸಲು ನಾಗಾ ಪೀಪಲ್ಸ್ ಫ್ರಂಟ್ (ಎನ್‌ಪಿಎಫ್) ನಿರ್ಧರಿಸಿದೆ. ಕಳೆದ ಬಾರಿಯ ಚುನಾವಣೆಯಲ್ಲಿ ಪಕ್ಷವು ನಾಲ್ಕು ಕ್ಷೇತ್ರಗಳಲ್ಲಿ ಗೆದ್ದಿತ್ತು. ಪಕ್ಷವು ಸ್ಪರ್ಧಿಸಲಿರುವ ಎಲ್ಲ ಕ್ಷೇತ್ರಗಳು ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರಗಳಾಗಿವೆ. ಮಣಿಪುರದಲ್ಲಿ ಪರಿಶಿಷ್ಟ ಪಂಗಡಗಳಿಗೆ 20 ಮೀಸಲು ಕ್ಷೇತ್ರಗಳಿವೆ. ಶಿವಸೇನಾ ಕೂಡ ಮಣಿಪುರದಲ್ಲಿ ಸ್ಪರ್ಧಿಸಲಿದ್ದು, ಆರು ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದೆ.

ಆಧಾರ: ಪಿಟಿಐ

ನೋಟಾ ಮತ: ಗ್ರಾಮಸ್ಥರ ನಿರ್ಧಾರ

ಪಿಥೋರಗಡ (ಉತ್ತರಾಖಂಡ) (ಪಿಟಿಐ): ಸಂಪರ್ಕ ರಸ್ತೆಯೊಂದು ಬೇಕು ಎಂಬುದು ಚಂಪಾವತ್‌ನ ಆಮ್ ಖರ್ಕ್ ಗ್ರಾಮದ ಜನರ ಸುದೀರ್ಘ ಕಾಲದ ಬೇಡಿಕೆ. ಈ ಬೇಡಿಕೆ ಈವರೆಗೆ ಈಡೇರಿಯೇ ಇಲ್ಲ. ಹಾಗಾಗಿ, ಈ ಬಾರಿ ನೋಟಾಕ್ಕೆ ಮತ ಹಾಕಲು (ಯಾವ ಅಭ್ಯರ್ಥಿಗೂ ಮತ ಇಲ್ಲ) ಗ್ರಾಮದ ಎಲ್ಲ ಜನರು ನಿರ್ಧರಿಸಿದ್ದಾರೆ. ಫೆ. 14ರಂದು ಇಲ್ಲಿ ಮತದಾನ ನಡೆಯಲಿದೆ.

ಸಂಪರ್ಕ ರಸ್ತೆ ಇಲ್ಲ ಎಂಬ ಕಾರಣಕ್ಕೆ ಗ್ರಾಮದ ಶೇ 65ರಷ್ಟು ಜನರು ಈಗಾಗಲೇ ಊರು ತೊರೆದಿದ್ದಾರೆ ಎಂದು ಗ್ರಾಮಸ್ತರು ಹೇಳಿದ್ದಾರೆ.

1,500 ಮೀಟರ್ ಉದ್ದದ ಸಂಪರ್ಕ ರಸ್ತೆ ಬೇಕು ಎಂಬ ಬೇಡಿಕೆ 2007ರಿಂದಲೂ ಇದೆ. ಪ್ರಸ್ತಾವಿತ ಯೋಜನೆಯು ಜಿಲ್ಲಾ ಯೋಜನೆಯಲ್ಲಿ ಸೇರ್ಪಡೆಯಾಗಿದೆ. ಆದರೆ, ಅನುಷ್ಠಾನ ಮಾತ್ರ ಆಗಿಲ್ಲ ಎಂಬುದು ಗ್ರಾಮಸ್ತರ ಅಳಲಾಗಿದೆ. ಸಂಪರ್ಕ ರಸ್ತೆ ನಿರ್ಮಾಣವಾದರೆ, ಅದು ಗ್ರಾಮವನ್ನು ತನಕ್‌ಪುರ–ಚಂಪಾವತ್ ಹೆದ್ದಾರಿಯೊಂದಿಗೆ ಜೋಡಿಸುತ್ತದೆ. ಇದರೊಂದಿಗೆ, ಗ್ರಾಮಸ್ಥರ ನಿತ್ಯದ ಹಲವು ಸಮಸ್ಯೆಗಳು ಪರಿಹಾರ ಆಗುತ್ತವೆ ಎಂದು ಜನರು ಹೇಳುತ್ತಾರೆ.

'ಓಮ್ಮೈಕ್ರಾನ್‌ಗಿಂತ 'ಓ ಮಿತ್ರೋನ್' ಹೆಚ್ಚು ಅಪಾಯಕಾರಿ'



ನವದೆಹಲಿ (ಪಿಟಿಐ): ಓಮ್ಮೈಕ್ರಾನ್‌ಗಿಂತ 'ಓ ಮಿತ್ರೋನ್' ಹೆಚ್ಚು ಅಪಾಯಕಾರಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿ ಕಾಂಗ್ರೆಸ್‌ನ ಸಂಸದ ಶಶಿ ತರೂರ್ ಟ್ವೀಟ್ ಮಾಡಿ ವ್ಯಂಗ್ಯವಾಡಿದ್ದಾರೆ.

ಸರ್ಕಾರ ಒಡೆದು ಆಳುವ ಮಾತುಗಳನ್ನಾಡುತ್ತಿದೆ ಮತ್ತು ದ್ವೇಷವನ್ನು ಹರಡುತ್ತಿದೆ ಎಂದು ಅವರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಓಮ್ಮೈಕ್ರಾನ್‌ಗಿಂತ್ ಓ ಮಿತ್ರೋನ್ ಹೆಚ್ಚು ಅಪಾಯಕಾರಿ. ಹೆಚ್ಚಿದ ಧ್ರುವೀಕರಣ, ದ್ವೇಷ ಮತ್ತು ಮತಾಂಧತೆಯ ಪ್ರಚಾರ, ಸಂವಿಧಾನದ ಮೇಲಿನ ಕಪಟ ದಾಳಿಗಳು ನಮ್ಮ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿವೆ' ಎಂದು ಅವರು ಟೀಕಿಸಿದ್ದಾರೆ.

ಈ ವೈರಸ್‌ಗೆ ಯಾವುದೇ 'ಸೌಮ್ಯ ರೂಪಾಂತರ' ಇಲ್ಲ ಎಂದು ಅವರು ಹೇಳಿದ್ದಾರೆ.

'ಮಿತ್ರೋನ್' ಅಂದರೆ ಸ್ನೇಹಿತರು ಎಂದರ್ಥ. ಮೋದಿ ಅವರು ಹಿಂದೆ ತಮ್ಮ ಭಾಷಣಗಳಲ್ಲಿ ಈ ಪದವನ್ನು ಹೆಚ್ಚಾಗಿ ಬಳಸಿದ್ದಾರೆ.

ತರೂರ್ ಅವರ ವ್ಯಂಗ್ಯವನ್ನು ಟೀಕಿಸಿರುವ ಬಿಜೆಪಿ, ಅವರಿಗೆ ಜವಾಬ್ದಾರಿಯ ಪ್ರಜ್ಞೆ ಇಲ್ಲವೇ ಎಂದು ದೂರಿದೆ.

ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ಭಾಷಣ

ಅಭಿವೃದ್ಧಿಯತ್ತ ಹೆಜ್ಜೆ, ದೇಶದ 'ಸಮಷ್ಟಿ ಸಾಧನೆ'

ನವದೆಹಲಿ (ಪಿಟಿಐ): ದಾಖಲೆಯ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳ ಖರೀದಿ, ದೇಶದ ಆಂತರಿಕ ಭದ್ರತೆಗೆ ಕ್ರಮ, ಕೋವಿಡ್‌ನ ಪರಿಣಾಮಕಾರಿ ನಿರ್ವಹಣೆ ಸೇರಿ ಹಲವು 'ಸಾಧನೆ'ಗಳನ್ನು ಪಟ್ಟಿಮಾಡಿರುವ ರಾಷ್ಟ್ರಪತಿ ರಾಮನಾಥ ಕೋವಿಂದ್, ಅಭಿವೃದ್ಧಿ ಗುರಿ ಸಾಧನೆ ಹಾದಿಯಲ್ಲಿ ಈ ಎಲ್ಲವು 'ಸಮಷ್ಟಿ ಸಾಧನೆಗಳು' ಎಂದೂ ಶ್ಲಾಘಿಸಿದರು.

ಸೋಮವಾರ ಬಜೆಟ್ ಅಧಿವೇಶನಕ್ಕೆ ಚಾಲನೆ ನೀಡಿ, ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ 50 ನಿಮಿಷದ ಭಾಷಣದಲ್ಲಿ ಅವರು, ಉತ್ತರ ಪ್ರದೇಶ ಸೇರಿದಂತೆ ಶೀಘ್ರದಲ್ಲಿಯೇ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿಶೇಷವಾಗಿ ಉಲ್ಲೇಖಿಸಿದರು.

ಸಾಧನೆಗಳ ಉಲ್ಲೇಖದ ಹಿಂದೆಯೇ ಈ ಎಲ್ಲ ಸಾಧನೆಗಳ ಶ್ರೇಯ ಒಂದು ಸಂಸ್ಥೆ, ವ್ಯವಸ್ಥೆಯದಲ್ಲ; ಬದಲಿಗೆ ಇವು ಸಮಷ್ಟಿ ಸಾಧನೆ. ಇದರಲ್ಲಿ ದೇಶದ ಎಲ್ಲ ನಾಗರಿಕರು ಭಾಗಿಯಾಗಿದ್ದಾರೆ ಎಂದರು. ಭವ್ಯ, ಆಧುನಿಕ ಮತ್ತು ಅಭಿವೃದ್ಧಿ ಭಾರತವನ್ನು 2047ರ ವೇಳೆಗೆ ನಿರ್ಮಿಸಲು ಎಲ್ಲರೂ ಶಕ್ತಿಮೀರಿ ಶ್ರಮಿಸಬೇಕು ಎಂದು ಕರೆ ನೀಡಿದರು.

ಇದರಲ್ಲಿ ನಮ್ಮೆಲ್ಲರ ಪಾಲೂ ಇದೆ. ಈ ಪ್ರಯಾಣದಲ್ಲಿ ನಮ್ಮಗಳದು ಸಮಾನ ಪಾಲು ಎಂದರು. ಸಂಸದರನ್ನು ಉದ್ದೇಶಿಸಿ ನೀವುಗಳು ದೇಶದ ಕೋಟ್ಯಂತರ ಜನರ ಭರವಸೆಗಳ ಚುಕ್ಕಾಣಿ. ಭವಿಷ್ಯದಲ್ಲಿಯೂ ಉತ್ಸಾಹದಿಂದ ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಗೋವಾ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ, ಅಫ್ಘಾನಿಸ್ತಾನದಿಂದ ಗುರುಗ್ರಂಥ ಸಾಹೀಬ್ ಅವರ ಎರಡು ವಿಶೇಷ ವಸ್ತುಗಳನ್ನು ಮರಳಿ ತಂದುದು, ಕೃಷಿಕರ ಸಬಲೀಕರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ರಾಷ್ಟ್ರಪತಿ ಕೋವಿಂದ್ ಅವರು ವಿಶೇಷವಾಗಿ ಉಲ್ಲೇಖಿಸಿದರು.

ರಕ್ಷಣಾ ಇಲಾಖೆಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳನ್ನು ಪಟ್ಟಿ ಮಾಡಿದ ಅವರು, ರಕ್ಷಣಾ ಪರಿಕರಗಳ ಆಧುನೀಕರಣಕ್ಕೆ ನೀಡಲಾದ ಶೇ 87ರಷ್ಟು ಅನುಮೋದನೆಗಳು ಸ್ವಾವಲಂಬನೆಗೆ ಒತ್ತು ನೀಡಿವೆ ಎಂದು ಹೇಳಿದರು.

ಕೋವಿಡ್ ಪರಿಸ್ಥಿತಿ ನಿರ್ವಹಣೆಯನ್ನು ಉಲ್ಲೇಖಿಸಿ ಆರೋಗ್ಯ ಕಾರ್ಯಕರ್ತರು, ವಿಜ್ಞಾನಿಗಳು, ಉದ್ಯಮಿಗಳ ಸೇವೆ ಶ್ಲಾಘನೀಯ. ಇದರ ಪರಿಣಾಮ ಒಂದೇ ವರ್ಷದಲ್ಲಿ 150 ಕೋಟಿ ಡೋಸ್ ಲಸಿಕೆ ನೀಡಲಾಯಿತು ಎಂದರು.

ಹಕ್ಕುಚ್ಯುತಿ ನಿಲುವಳಿ ಮಂಡಿಸಲು ನೋಟಿಸ್

ನವದೆಹಲಿ (ಪಿಟಿಐ): ಪೆಗಾಸಸ್ ಕುತಂತ್ರಾಂಶ ಪ್ರಕರಣ ಸಂಬಂಧ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಕಳೆದ ವರ್ಷ ಸಂಸತ್ತಿನಲ್ಲಿ ನೀಡಿದ್ದ ಹೇಳಿಕೆಗೆ ಸಂಬಂಧಿಸಿ ಅವರ ವಿರುದ್ಧ ಹಕ್ಕುಚ್ಯುತಿ ನಿಲುವಳಿ ಮಂಡಿಸಲು ಸಿಪಿಐ ಸಂಸದ ಬಿನೋಯ್ ವಿಶ್ವಂ ಅವರು ನೋಟಿಸ್ ನೀಡಿದ್ದಾರೆ.

ಪೆಗಾಸಸ್ ಕುರಿತಂತೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ವರದಿ ಹಿನ್ನೆಲೆಯಲ್ಲಿ ಬಿನೋಯ್ ವಿಶ್ವಂ ಈಗ ನೋಟಿಸ್ ನೀಡಿದ್ದಾರೆ. ಈ ವರದಿ ಪ್ರಕಾರ, ಕುತಂತ್ರಾಂಶವು ಇಸ್ರೇಲ್ ಜೊತೆಗೆ 2017ರಲ್ಲಿ ನಡೆದಿದ್ದ ರಕ್ಷಣಾ ಪರಿಕರ ವಹಿವಾಟಿನ ಭಾಗವೇ ಆಗಿತ್ತು.

ಕಳೆದ ವರ್ಷ ಜುಲೈನಲ್ಲಿ ಮುಂಗಾರು ಅಧಿವೇಶನದಲ್ಲಿ ವೈಷ್ಣವ್ ಅವರು, 'ಪೆಗಾಸಸ್ ಕುರಿತು ಅಧಿವೇಶನ ಸಂದರ್ಭದಲ್ಲಿಯೇ ಲೇಖನ ಪ್ರಕಟವಾಗಿರುವುದು ಕಾಕತಾಳೀಯ ಅಲ್ಲ. ಇದನ್ನು ಪ್ರಮುಖವಾಗಿ ಪರಿಗಣಿಸಲು ಆಧಾರಗಳಿಲ್ಲ' ಎಂದಿದ್ದರು.

ರಾಜ್ಯಸಭೆ ಸದಸ್ಯರಾದ ವಿಶ್ವಂ ಅವರು, 'ಸತ್ಯವನ್ನು ಅಡಗಿಸಲು ಸರ್ಕಾರದ ಪುನರಾವರ್ತಿತ ಯತ್ನಗಳ ನಡುವೆಯೂ, ಪೆಗಾಸಸ್ ಕುತಂತ್ರಾಂಶ ಖರೀದಿ ಕುರಿತಂತೆ ವಿವಿಧ ಸತ್ಯಗಳು ಹೊರಬೀಳುತ್ತಿವೆ. ನ್ಯೂಯಾರ್ಕ್ ಟೈಮ್ಸ್ ವರದಿ ಈ ಪಟ್ಟಿಗೆ ಹೊಸ ಸೇರ್ಪಡೆ ಎಂದಿದ್ದಾರೆ.



ಬಜೆಟ್ ಅಧಿವೇಶನ ಸೋಮವಾರ ಆರಂಭವಾಗಿದ್ದು, ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ರಾಷ್ಟ್ರಪತಿ ರಾಮನಾಥ ಕೋವಿಂದ್ ಸಂಸತ್ತಿಗೆ ಬಂದರು. ಪ್ರಧಾನಿ ನರೇಂದ್ರ ಮೋದಿ, ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಇದ್ದರು ಪಿಟಿಐ ಚಿತ್ರ

ಪೆಗಾಸಸ್: ಪ್ರತ್ಯೇಕ ಚರ್ಚೆ ಅಗತ್ಯವಿಲ್ಲ– ಜೋಶಿ

ನವದೆಹಲಿ (ಪಿಟಿಐ): ಪೆಗಾಸಸ್ ವಿಷಯ ಕುರಿತು ಪ್ರತ್ಯೇಕ ಚರ್ಚೆ ಅಗತ್ಯವಿಲ್ಲ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಸೋಮವಾರ ಹೇಳಿದ್ದಾರೆ.

ಈ ಕುರಿತ ವಿಷಯವು ನ್ಯಾಯಾಂಗದ ಅಂಗಳದಲ್ಲಿ ಇರುವ ಕಾರಣ ಪ್ರತ್ಯೇಕವಾದ ಚರ್ಚೆಯ ಅಗತ್ಯವಿಲ್ಲ ಎಂದಿರುವ ಅವರು, ವಿರೋಧ ಪಕ್ಷಗಳು ಬಯಸಿದರೆ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ವೇಳೆ ಮಾತನಾಡುವಾಗ ಯಾವುದೇ ವಿಷಯವನ್ನು ಪ್ರಸ್ತಾಪಿಸಬಹುದು ಎಂದಿದ್ದಾರೆ.

ವರ್ಚುವಲ್ ಆಗಿ ನಡೆದ ಸರ್ವ ಪಕ್ಷ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಸರ್ವ ಪಕ್ಷ ಸಭೆಯಲ್ಲಿ 25 ಪಕ್ಷಗಳ ನಾಯಕರು ಪಾಲ್ಗೊಂಡಿದ್ದರು. ಸರ್ಕಾರದ ಪ್ರತಿನಿಧಿಯಾಗಿ ರಕ್ಷಣಾ ಸಚಿವರೂ ಆದ ಲೋಕಸಭೆಯ ಉಪ ನಾಯಕ ರಾಜನಾಥ್ ಸಿಂಗ್ ಭಾಗವಹಿಸಿದ್ದರು.

'ಹಿಂದೆ ದಗಾಕೋರರ ಸರ್ಕಾರವಿತ್ತು'

ಲಖನೌ (ಪಿಟಿಐ): 'ಉತ್ತರ ಪ್ರದೇಶದಲ್ಲಿ ಈ ಹಿಂದೆ ನಕಲಿ ಸಮಾಜವಾದಿಗಳ ಸರ್ಕಾರವಿತ್ತು. ಅವರ ಆಡಳಿತದ ಅವಧಿಯಲ್ಲಿ ದಗಾಕೋರರು ಮತ್ತು ಗಲಭೆಕೋರರು ತಾವೇ ಕಾನೂನು ಎಂಬಂತಿದ್ದರು. ಆದರೆ ಬಿಜೆಪಿ ಸರ್ಕಾರವು ರಾಜ್ಯದ ಅಭಿವೃದ್ಧಿಗಾಗಿ ದುಡಿಯುತ್ತಿದೆ' ಎಂದು ಪ್ರಧಾನಿ ಮೋದಿ ಅವರು ಹೇಳಿದ್ದಾರೆ.

ಚುನಾವಣೆ ಘೋಷಣೆಯಾದ ನಂತರ ಮೋದಿ ಅವರು ಸೋಮವಾರ ಮೊದಲ ವರ್ಚುವಲ್ ರ‍್ಯಾಲಿ ನಡೆಸಿದರು. ಉತ್ತರ ಪ್ರದೇಶದ ಪಶ್ಚಿಮ ಭಾಗದ ಕ್ಷೇತ್ರಗಳನ್ನು ಗುರಿಯಾಗಿಸಿಕೊಂಡು ಈ ರ‍್ಯಾಲಿಯನ್ನು ಆಯೋಜಿಸಲಾಗಿತ್ತು. ಈ ಭಾಗದಲ್ಲಿ ಕಬ್ಬು ಬೆಳೆಗಾರರ ದೊಡ್ಡ ಸಮುದಾಯವಿದ್ದು, ರೈತರಿಗಾಗಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಕಲ್ಯಾಣ ಯೋಜನೆಗಳನ್ನು ಮೋದಿ ಅವರು ತಮ್ಮ ಭಾಷಣದಲ್ಲಿ ಪಟ್ಟಿ ಮಾಡಿದರು.

'ಬಿಜೆಪಿ ಅಭಿವೃದ್ಧಿಗಾಗಿ ದುಡಿಯುತ್ತಿದ್ದರೆ, ವಿರೋಧ ಪಕ್ಷಗಳು ಅದಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದಾರೆ. ಆದರೆ ದಗಾಕೋರರ ಬಗ್ಗೆ ಉತ್ತರ ಪ್ರದೇಶದ ಜನರು ಬಹಳ ಎಚ್ಚರಿಕೆಯಿಂದ ಇದ್ದಾರೆ' ಎಂದು ಮೋದಿ ಹೇಳಿದ್ದಾರೆ.

'ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಮಿಕರಿಗೆ, ಬಡವರಿಗೆ ತೀವ್ರ ತೊಂದರೆಯಾಗಿತ್ತು. ಅವರಿಗೆಲ್ಲಾ ನಾವು ಆಗ ರೊಟ್ಟಿ ನೀಡಿದ್ದೇವೆ. ಈಗ ಕಮಲ ತಂದಿದ್ದೇವೆ. ಅವರು (ಅಖಿಲೇಶ್ ಯಾದವ್) ಕನಸಿನಲ್ಲಿ ಕೃಷ್ಣನನ್ನು ಕಾಣಲು ಮಲಗಿರುತ್ತಾರೆ. ಆದರೆ ನಮ್ಮ ಯೋಗಿಜೀ ಎಚ್ಚರದಿಂದ ಇದ್ದು, ಕನಸು ನನಸಾಗಿಸಲು ದುಡಿಯುತ್ತಿದ್ದಾರೆ' ಎಂದು ಅವರು ಹೇಳಿದ್ದಾರೆ.

ನಾವು ರಾಜ್ಯದ ಕಬ್ಬು ಬೆಳೆಗಾರರ ಸಂಕಷ್ಟಗಳನ್ನು ಅರ್ಥ ಮಾಡಿಕೊಂಡಿದ್ದೇವೆ. ಕಬ್ಬು ಬಾಕಿಯನ್ನು ಶೀಘ್ರವೇ ಪಾವತಿ ಮಾಡುವ ಗುರಿ ಹಾಕಿಕೊಂಡಿದ್ದೇವೆ
ನರೇಂದ್ರ ಮೋದಿ, ಪ್ರಧಾನಿ

2021–22ನೇ ಸಾಲಿನ ಆರ್ಥಿಕ ಸಮೀಕ್ಷೆಯು ಮಂಡನೆಯಾಗಿದೆ. ಕೋವಿಡ್ ಸಾಂಕ್ರಾಮಿಕದ 1,2 ಮತ್ತು 3ನೇ ಅಲೆಯಿಂದ ಆರ್ಥಿಕ ವ್ಯವಸ್ಥೆಯು ಕಳೆದ ಎರಡು ವರ್ಷಗಳಲ್ಲಿ ಜರ್ಜರಿತವಾಗಿದೆ. ಹಾಗಾಗಿ, ಆರ್ಥಿಕ ಸಮೀಕ್ಷೆಯಲ್ಲಿ ಕೂಡ ಕೋವಿಡ್ ಸಾಂಕ್ರಾಮಿಕದ ಕರಿ ಛಾಯೆ ದಟ್ಟವಾಗಿದೆ. ಹಲವು ಕ್ಷೇತ್ರಗಳ ಬೆಳವಣಿಗೆ ಕುಂಠಿತಗೊಂಡಿದೆ. ಆದರೆ, ಸಾಂಕ್ರಾಮಿಕದ ಪರಿಣಾಮವು ಕುಗ್ಗುತ್ತಿದ್ದು, ಅರ್ಥ ವ್ಯವಸ್ಥೆಯು ಸಹಜ ಸ್ಥಿತಿಗೆ ಮರಳುವ ಹಾದಿಯಲ್ಲಿದೆ ಎಂಬ ಭಾವ ಆರ್ಥಿಕ ಸಮೀಕ್ಷೆಯಲ್ಲಿ ಇದೆ

ಕೋವಿಡ್‌ನ ದಟ್ಟ ಛಾಯೆ



ಪ್ರಜಾವಾಣಿ ವಾರ್ತೆ

ಕೈಗಾರಿಕೆ ಮತ್ತು ಮೂಲಸೌಕರ್ಯ: ಕುಂಠಿತ ಬೆಳವಣಿಗೆ

2021-22ನೇ ಆರ್ಥಿಕ ವರ್ಷದ ಮೊದಲ ಮೂರು ತ್ರೈಮಾಸಿಕದಲ್ಲಿ ಕೈಗಾರಿಕಾ ವಲಯವು ಸಾಧಾರಣ ಮಟ್ಟದ ಪ್ರಗತಿ ಸಾಧಿಸಿದೆ. ಆರ್ಥಿಕ ವರ್ಷದ ಆರಂಭದಲ್ಲೇ ಕೋವಿಡ್‌ನ ಎರಡನೇ ಅಲೆ ತಲೆದೋರಿದ ಕಾರಣ ಕೈಗಾರಿಕಾ ವಲಯವು ಬಹುತೇಕ ಸ್ಥಗಿತವಾಗಿತ್ತು. ಹೀಗಾಗಿ ಬೆಳವಣಿಗೆ ಸಾಧಾರಣ ಮಟ್ಟದಲ್ಲಿ ಇದೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ವಿವರಿಸಲಾಗಿದೆ.

ಈ ಆರ್ಥಿಕ ವರ್ಷದ ಮೊದಲ ಮೂರು–ನಾಲ್ಕು ತಿಂಗಳು ಬಹುತೇಕ ಎಲ್ಲಾ ವಲಯದ ಕೈಗಾರಿಕೆಗಳು ಸ್ಥಗಿತವಾಗಿದ್ದವು. ಅಲ್ಲದೆ, ಈ ಅವಧಿಯಲ್ಲಿ ಈ ಎಲ್ಲಾ ವಲಯದ ಕೈಗಾರಿಕೆಗಳು ಋಣಾತ್ಮಕ ಪ್ರಗತಿ ಸಾಧಿಸಿದ್ದವು. ಎರಡನೇ ಅಲೆ ಇಳಿದ ಬಳಿಕ ಚಟುವಟಿಕೆಗಳು ಆರಂಭವಾದ್ದರಿಂದ ಬೆಳವಣಿಗೆ ಕಂಡವು. ನಂತರದ ದಿನಗಳಲ್ಲಿ ಚೇತರಿಕೆ ಕಂಡವು. ಹೀಗಾಗಿ ಮೂರನೇ ತ್ರೈಮಾಸಿಕ ಅಂತ್ಯದ ವೇಳೆಗೆ, ಒಟ್ಟಾರೆ ಕೈಗಾರಿಕಾ ಉತ್ಪಾದನೆ ಸೂಚ್ಯಂಕದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 17.6ರಷ್ಟು ಪ್ರಗತಿ ಸಾಧಿಸಿದೆ.

ಗಣಿ, ತಯಾರಿಕಾ ವಲಯ, ಮೂಲಸೌಕರ್ಯ ಅಭಿವೃದ್ಧಿ ವಲಯ ಮತ್ತು ಗ್ರಾಹಕ ಬಳಕೆಯ ವಸ್ತುಗಳ ವಲಯವು ಆರ್ಥಿಕ ವರ್ಷದ ಆರಂಭದಲ್ಲಿ ಭಾರಿ ಹಿನ್ನಡೆ ಅನುಭವಿಸಿವೆ. ನಂತರದ ದಿನಗಳಲ್ಲಿ ಸಾಧಾರಣ ಮಟ್ಟದ ಪ್ರಗತಿ ಸಾಧಿಸಿವೆ. ಗ್ರಾಹಕ ಬಳಕೆಯ ವಸ್ತುಗಳ ಕೈಗಾರಿಕಾ ಉತ್ಪಾದನೆ ಸೂಚ್ಯಂಕವು ವರ್ಷವಿಡೀ ಕುಂಠಿತ ಬೆಳವಣಿಗೆಯನ್ನು ದಾಖಲಿಸಿದೆ. ಈ ವಲಯದ ಬೆಳವಣಿಗೆಯು ಶೇ 1ರಷ್ಟನ್ನೂ ದಾಟಿಲ್ಲ.

ರಸ್ತೆ ನಿರ್ಮಾಣ ಕುಸಿತ: ಈ ಹಿಂದಿನ ಆರ್ಥಿಕ ವರ್ಷಗಳಲ್ಲಿ ಪ್ರತಿದಿನ 30–39 ಕಿ.ಮೀ. ಉದ್ದದ ಹೆದ್ದಾರಿಯನ್ನು ನಿರ್ಮಿಸಲಾಗುತ್ತಿತ್ತು. ಐದಾರು ಆರ್ಥಿಕ ವರ್ಷಗಳಲ್ಲಿ ರಸ್ತೆ ನಿರ್ಮಾಣದಲ್ಲಿ ನಿರಂತರ ಬೆಳವಣಿಗೆಯನ್ನು ದಾಖಲಿಸಲಾಗಿತ್ತು. ಆದರೆ 2021–22ನೇ ಆರ್ಥಿಕ ವರ್ಷದ ಮೊದಲ ಮೂರು ತ್ರೈಮಾಸಿಕಗಳಲ್ಲಿ ಈ ವಲಯವು ಕುಂಠಿತ ಪ್ರಗತಿ ದಾಖಲಿಸಿದೆ. ಈ ಅವಧಿಯಲ್ಲಿ ಪ್ರತಿ ದಿನ ಕೇವಲ 10.8 ಕಿ.ಮೀ.ನಷ್ಟು ಉದ್ದದ ಹೆದ್ದಾರಿಯನ್ನು ನಿರ್ಮಿಸಲಾಗಿದೆ.

ದೇಶದ ಎಲ್ಲಾ ಬಂದರುಗಳಲ್ಲಿ ನಿರ್ವಹಿಸಲಾಗುವ ಸರಕುಗಳ ಪ್ರಮಾಣದಲ್ಲಿ ಈ ಬಾರಿ ಸ್ವಲ್ಪ ಕುಸಿತವಾಗಿದೆ. ಹಿಂದಿನ ಎಂಟು ಆರ್ಥಿಕ ವರ್ಷಗಳಲ್ಲಿ ಈ ವಲಯವು ಗಮನಾರ್ಹ ಪ್ರಗತಿ ಸಾಧಿಸಿತ್ತು. ಆದರೆ ಈ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ದೇಶದ ಎಲ್ಲಾ ಬಂದರುಗಳು ನಿರ್ವಹಿಸಿದ ಸರಕು 59 ಕೋಟಿ ಟನ್‌ಗಳಷ್ಟಾಗಿದೆ.



2020–21ನೇ ಆರ್ಥಿಕ ವರ್ಷದಲ್ಲಿ ಒಟ್ಟು 61 ಕೋಟಿ ಟನ್ ಸರಕನ್ನು ನಿರ್ವಹಿಸಲಾಗಿತ್ತು. ದೇಶದ ಎಲ್ಲಾ ಬಂದರುಗಳಲ್ಲಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಿದ್ದರೂ, ಜಾಗತಿಕ ವಿದ್ಯಮಾನಗಳ ಕಾರಣ ಸರಕು ಸಾಗಣೆ ನಿರೀಕ್ಷಿತ ಪ್ರಗತಿ ಸಾಧಿಸಿಲ್ಲ ಎಂದು ಆರ್ಥಿಕ ಸಮೀಕ್ಷೆಯಲ್ಲಿ ವಿವರಿಸಲಾಗಿದೆ.

ಕೃಷಿ ಆದಾಯ ಬಾಧಿಸದ ಕೋವಿಡ್

ಕೋವಿಡ್ ಸಾಂಕ್ರಾಮಿಕದ ತೀವ್ರ ಹೊಡೆತಕ್ಕೆ ಅಷ್ಟಾಗಿ ಸಿಲುಕದ ಕ್ಷೇತ್ರ ಎನಿಸಿಕೊಂಡಿರುವ ಕೃಷಿ ವಲಯವು ಈ ಆರ್ಥಿಕ ವರ್ಷದಲ್ಲಿ ಶೇ 3.9ರಷ್ಟು ಬೆಳವಣಿಗೆ ದಾಖಲಿಸಬಹುದು ಎಂದು ಆರ್ಥಿಕ ಸಮೀಕ್ಷೆ ತಿಳಿಸಿದೆ. ಬೆಳೆ ವೈವಿಧ್ಯ ಹಾಗೂ ಕೃಷಿ ಸಂಬಂಧಿತ ವಲಯಗಳಿಗೆ ಆದ್ಯತೆ ನೀಡಬೇಕು. ಜೊತೆಗೆ ನ್ಯಾನೊ ಯೂರಿಯಾದಂತಹ ಪರ್ಯಾಯ ರಸಗೊಬ್ಬರಗಳನ್ನು ಉತ್ತೇಜಿಸಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿದೆ.

ಕಳೆದ ಎರಡು ವರ್ಷಗಳಲ್ಲಿ ಕೃಷಿ ವಲಯವು ಗಮನಾರ್ಹ ಬೆಳವಣಿಗೆ ದಾಖಲಿಸಿದ್ದು, ಕಳೆದ ವರ್ಷದಲ್ಲಿ ಶೇ 3.6ರಷ್ಟು ಪ್ರಗತಿ ಕಂಡುಬಂದಿತ್ತು. ಈ ಪ್ರಗತಿ ದರ ಮುಂದುವರಿಯಬೇಕಾದರೆ, ಡ್ರೋನ್‌ಗಳಂತಹ ಹೊಸ ತಂತ್ರಜ್ಞಾನಗಳ ಬಳಕೆಯ ಜೊತೆಗೆ ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಸಾವಯವ ಕೃಷಿಯನ್ನು ಹೆಚ್ಚಿಸುವಂತೆ ಸೂಚಿಸಿದೆ.

ಕೃಷಿ ಸಂಬಂಧಿತ ಕ್ಷೇತ್ರಗಳತ್ತಲೂ ಸಮಾನ ಆದ್ಯತೆ ನೀಡಬೇಕಿದೆ ಎಂದು ವರದಿ ಅಭಿಪ್ರಾಯಪಟ್ಟಿದೆ. ರೈತರ ಬೆಳವಣಿಗೆ ಮತ್ತು ಆದಾಯದಲ್ಲಿ ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸೇರಿದಂತೆ ಸಂಬಂಧಿತ ವಲಯಗಳಿಗೆ ಪ್ರಾಮುಖ್ಯ ನೀಡಬೇಕಿದೆ. ಈ ಕ್ಷೇತ್ರಗಳನ್ನು ಸದುಪಯೋಗಪಡಿಸಿಕೊಳ್ಳುವತ್ತ ಹೆಚ್ಚಿನ ಗಮನ ಕೇಂದ್ರೀಕರಿಸುವ ಅಗತ್ಯವಿದೆ ಎಂದು ತಿಳಿಸಿದೆ.

ವಸ್ತುಸ್ಥಿತಿ ಮೌಲ್ಯಮಾಪನ ಸಮೀಕ್ಷೆಯ (ಎಸ್‌ಎಎಸ್) ಇತ್ತೀಚಿನ ವರದಿ ಪ್ರಕಾರ, ಕೃಷಿಯನ್ನು ನಂಬಿಕೊಂಡಿರುವ ಕುಟುಂಬಗಳಿಗೆ ಸಂಬಂಧಿತ ವಲಯಗಳು ಸ್ಥಿರ ಆದಾಯ ತಂದುಕೊಡುತ್ತಿವೆ. ರೈತರ ಸರಾಸರಿ ಮಾಸಿಕ ಆದಾಯದಲ್ಲಿ



ಈ ವಲಯಗಳ ಪಾಲು ಶೇ 15ರಷ್ಟಿದೆ. ಸಣ್ಣ ಹಿಡುವಳಿಗಳಿಗೆ ನೆರವಾಗುವ ಕೃಷಿ ತಂತ್ರಜ್ಞಾನ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಬೇಕು ಎಂದು ವರದಿ ತಿಳಿಸಿದೆ. ಈ ಮೂಲಕ ಸಣ್ಣ ಮತ್ತು ಅತಿ ಸಣ್ಣ ರೈತರ ಉತ್ಪಾದಕತೆಯನ್ನು ಸುಧಾರಿಸಬೇಕಾದ ಅಗತ್ಯವೂ ಇದೆ ಎಂದು ಸಮೀಕ್ಷೆ ಹೇಳಿದೆ.

ಕಬ್ಬು, ಭತ್ತ ಮತ್ತು ಗೋಧಿ ಕೃಷಿಗೆ ಅಂತರ್ಜಲದ ಬಳಕೆ ಹೆಚ್ಚಿರುವ ಕಾರಣ, ದೇಶದ ಅನೇಕ ಭಾಗಗಳಲ್ಲಿ ಸ್ವಚ್ಛ ಅಂತರ್ಜಲದ ಮಟ್ಟವು ಆತಂಕಪಡುವಷ್ಟು ಕುಸಿದಿದೆ. ಹೀಗಾಗಿ ಬೆಳೆ ವೈವಿಧ್ಯಕ್ಕೆ ಒತ್ತು ನೀಡುವಂತೆ ಸೂಚಿಸಲಾಗಿದೆ. ಬೆಳೆ ವೈವಿಧ್ಯವು ಸುಸ್ಥಿರ ಕೃಷಿಯನ್ನು ಪ್ರೋತ್ಸಾಹಿಸಿ, ಆಮದಿನ ಮೇಲಿನ ಅವಲಂಬನೆಯನ್ನು ತಗ್ಗಿಸುತ್ತದೆ. ಜೊತೆಗೆ ರೈತರ ಆದಾಯವನ್ನೂ ಹೆಚ್ಚಿಸುತ್ತದೆ ಎಂದು ತಿಳಿಸಿದೆ. ಎಣ್ಣೆಬೀಜಗಳು, ದ್ವಿದಳ ಧಾನ್ಯಗಳು ಹಾಗೂ ತೋಟಗಾರಿಕಾ ಬೆಳೆಗಳಿಗೆ ಆದ್ಯತೆ ನೀಡುವುದರಿಂದ ಬೆಳೆ ವೈವಿಧ್ಯ ಉಂಟಾಗಿ, ಕೃಷಿಯ ಮೂಲಭೂತ ಸಮಸ್ಯೆಗಳಾದ ನೀರಾವರಿ, ಹೂಡಿಕೆ, ಬೆಳೆಗಳಿಗೆ ಮಾರುಕಟ್ಟೆ, ಸಾಲ ಮೊದಲಾದವುಗಳಿಗೆ ಪರಿಹಾರ ದೊರಕಿದಂತಾಗುತ್ತದೆ ಎಂದಿದೆ.

ಔಷಧ ವಲಯಕ್ಕೆ ಸಂಜೀವಿನಿಯಾದ ಎಫ್‌ಡಿಐ



ಭಾರತದ ಔಷಧ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ (ಎಫ್‌ಡಿಐ) ಅವಕಾಶ ನೀಡಿದ ಬಳಿಕ 2020–21ರ ಸಾಲಿನಲ್ಲಿ ಈ ವಲಯದಲ್ಲಿ ಭಾರಿ ಸಂಚಲನ ಕಂಡುಬಂದಿದೆ. ಕೋವಿಡ್ ಸಂಬಂಧಿತ ಔಷಧ ಹಾಗೂ ಲಸಿಕೆಗಳ ಬೇಡಿಕೆಯಲ್ಲಿ ಗುರಿ ಮುಟ್ಟಲು ಇದರಿಂದ ಸಾಧ್ಯವಾಗಿದೆ ಎಂದು ಸಮೀಕ್ಷೆ ತಿಳಿಸಿದೆ.

2021ರ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಈ ಕ್ಷೇತ್ರಕ್ಕೆ ₹4,413 ಕೋಟಿ ಎಫ್‌ಡಿಐ ಒಳಹರಿವು ಇತ್ತು. ಶೇ 53ರ ಬೆಳವಣಿಗೆ ದರ ದಾಖಲಿಸಿತ್ತು. ಬೆಲೆಯ ಸ್ಪರ್ಧಾತ್ಮಕತೆ ಮತ್ತು ಉತ್ತಮ ಗುಣಮಟ್ಟವು ಸ್ವದೇಶಿ ಔಷಧ ಉತ್ಪಾದಕರನ್ನು ವಿಶ್ವ ಮಾರುಕಟ್ಟೆಯಲ್ಲಿ ಪ್ರಬಲ ಸ್ಪರ್ಧೆ ಒಡ್ಡುವಂತೆ ಮಾಡಿತು. ಈ ಮೂಲಕ ದೇಶವು 'ಜಾಗತಿಕ ಔಷಧ ಕೇಂದ್ರ'ವಾಗಿ ಹೊರಹೊಮ್ಮಿತು. ಆದರೆ ಭಾರತವು ಔಷಧ ತಯಾರಿಗೆ ಬಳಸುವ ಮೂಲವಸ್ತುಗಳ ಆಮದಿನ ಮೇಲೆ ಬಹುವಾಗಿ ಅವಲಂಬಿತವಾಗಿದೆ ಎಂದು ಸಮೀಕ್ಷೆ ತಿಳಿಸಿದೆ.

ಜಾಗತಿಕವಾಗಿ ಔಷಧ ಉತ್ಪಾದನೆಯಲ್ಲಿ (ಪ್ರಮಾಣ) ಭಾರತದ ಔಷಧ ಉದ್ಯಮವು ಮೂರನೇ ಸ್ಥಾನದಲ್ಲಿದೆ. 2020–21ರ ಆರ್ಥಿಕ ವರ್ಷದಲ್ಲಿ ₹1.83 ಲಕ್ಷ ಕೋಟಿ ಮೌಲ್ಯದ ಔಷಧ ರಫ್ತು ಮಾಡಲಾಗಿತ್ತು. ಇದೇ ಅವಧಿಯಲ್ಲಿ ಭಾರತ ಆಮದು ಮಾಡಿಕೊಂಡ ಔಷಧಗಳ ಮೌಲ್ಯ ₹52,000 ಕೋಟಿ. ಭಾರತವು ಜನರಿಕ್ ಔಷಧಗಳ ಅತಿದೊಡ್ಡ ಪೂರೈಕೆ ದೇಶವಾಗಿದ್ದು, ಜಾಗತಿಕವಾಗಿ ಶೇ 20ರಷ್ಟು ಪಾಲು ಹೊಂದಿದೆ ಎಂದು ಸಮೀಕ್ಷೆ ಮಾಹಿತಿ ನೀಡಿದೆ.

ಕಾರ್ಮಿಕ ಸಂಹಿತೆ: ರಾಜ್ಯಗಳ ನಿರಾಸಕ್ತಿ

ಸಂಸತ್ತು ಅನುಮೋದಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ದೇಶದ 16 ರಾಜ್ಯಗಳು ಮಾತ್ರ ಈವರೆಗೆ ಕರಡು ನಿಯಮಾವಳಿಗಳನ್ನು ಪ್ರಕಟಿಸಿವೆ ಎಂದು ಆರ್ಥಿಕ ಸಮೀಕ್ಷೆ ಮಾಹಿತಿ ನೀಡಿದೆ. ಆರು ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳು ನಾಲ್ಕರ ಪೈಕಿ ಒಂದು ಸಂಹಿತೆಗೂ ಕರಡು ನಿಯಮಗಳನ್ನು ಪ್ರಕಟಿಸಿಲ್ಲ. ವೇತನ ಸಂಹಿತೆ, ಕೈಗಾರಿಕಾ ಸಂಬಂಧಗಳು, ಸಾಮಾಜಿಕ ಭದ್ರತೆ ಮತ್ತು ಉದ್ಯೋಗ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳು – ಎಂಬ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಕೇಂದ್ರ ಪರಿಚಯಿಸಿತ್ತು. ಈ ಎಲ್ಲ ನಾಲ್ಕೂ ಸಂಹಿತೆಗಳಿಗೆ ಕೇಂದ್ರ ಕರಡು ನಿಯಮಗಳನ್ನು ಪ್ರಕಟಿಸಿದೆ.

26 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ವೇತನದ ಸಂಹಿತೆ, 22 ರಾಜ್ಯಗಳು ಕೈಗಾರಿಕಾ ಸಂಬಂಧಗಳ ಸಂಹಿತೆ, 20 ರಾಜ್ಯಗಳು ಸಾಮಾಜಿಕ ಭದ್ರತೆ ಮತ್ತು ಉದ್ಯೋಗ ಸುರಕ್ಷತೆ, 17 ರಾಜ್ಯಗಳು ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿ ಸಂಹಿತೆ ಕುರಿತು ಕರಡು ನಿಯಮಗಳನ್ನು ಪ್ರಕಟಿಸಿವೆ. ಎಲ್ಲ ನಾಲ್ಕು ಸಂಹಿತೆಗಳಿಗೆ ಕೇಂದ್ರ ಕರಡು ನಿಯಮಗಳನ್ನು ಮೊದಲೇ ಪ್ರಕಟಿಸಿದೆ.



ಸಾಮಾನ್ಯ ಸ್ಥಿತಿಗೆ ಸೇವಾ ವಲಯ

ಈ ಆರ್ಥಿಕ ವರ್ಷದ ಮೊದಲ ಮೂರು ತ್ರೈಮಾಸಿಕದಲ್ಲಿ ಸೇವಾ ವಲಯವು ಒಟ್ಟಾರೆ ಶೇ 10.8ರಷ್ಟು ಬೆಳವಣಿಗೆ ಸಾಧಿಸಿದೆ. ಈ ಆರ್ಥಿಕ ವರ್ಷದ ಆರಂಭದಲ್ಲಿ ಕೋವಿಡ್ ಎರಡನೇ ಅಲೆಯಿಂದ ಈ ವಲಯವು ಬಹುತೇಕ ಸ್ಥಗಿತವಾಗಿದ್ದರೂ, ನಂತರದ ದಿನಗಳಲ್ಲಿ ಚೇತರಿಕೆ ಕಂಡಿದೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ವಿವರಿಸಲಾಗಿದೆ. ವ್ಯಾಪಾರ, ಪ್ರವಾಸ, ಹೋಟೆಲ್, ಸಾರಿಗೆ ಮತ್ತು ಸಂವಹನ ವಲಯವು ಎರಡು ತ್ರೈಮಾಸಿಕದಲ್ಲಿ ಶೇ 18.4ರಷ್ಟು ಬೆಳವಣಿಗೆಯನ್ನು ದಾಖಲಿಸಿವೆ. ಈ ಹಿಂದಿನ ಆರ್ಥಿಕ ವರ್ಷದಲ್ಲಿ ಕೋವಿಡ್‌ನ ಕಾರಣ ಈ ವಲಯವು ಶೇ 18.2ರಷ್ಟು ಋಣಾತ್ಮಕ ಪ್ರಗತಿ ಸಾಧಿಸಿತ್ತು. ಈ ಅವಧಿಯಲ್ಲಿ ಹಣಕಾಸು ಸೇವೆಗಳು, ರಿಯಲ್ ಎಸ್ಟೇಟ್ ಮತ್ತು ಇತರ ಸೇವೆಗಳು ಪ್ರಗತಿ ದಾಖಲಿಸಿದ್ದರೂ, ಶೇ 5.8ರಷ್ಟು ಬೆಳವಣಿಗೆ ಕಂಡಿದೆ. ಸಾರ್ವಜನಿಕ ಸೇವೆ, ಶಿಕ್ಷಣ, ಆರೋಗ್ಯ ಕ್ಷೇತ್ರಗಳು ಶೇ 12ರಷ್ಟು ಬೆಳವಣಿಗೆಯನ್ನು ದಾಖಲಿಸಿವೆ. ಈ ಮೂಲಕ ಸೇವಾ ವಲಯವು ಕೋವಿಡ್ ಮೊದಲಿನ ಅವಧಿಯಲ್ಲಿ ಇದ್ದ ಸ್ಥಿತಿಗೆ ಮರಳಿದೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ವಿವರಿಸಲಾಗಿದೆ.



ಶಿಕ್ಷಣ, ಆರೋಗ್ಯಕ್ಕೆ ಹೆಚ್ಚು ವ್ಯಯ

ಕೇಂದ್ರ ಸರ್ಕಾರವು ಈ ಆರ್ಥಿಕ ವರ್ಷದ ಮೊದಲ ಮೂರು ತ್ರೈಮಾಸಿಕದಲ್ಲಿ ಸಾಮಾಜಿಕ ಕಾರ್ಯಗಳ ವಲಯಕ್ಕೆ ಹೆಚ್ಚಿನ ಹಣವನ್ನು ವೆಚ್ಚ ಮಾಡಿದೆ. ಈ ಹಣದಲ್ಲಿ ಹೆಚ್ಚಿನ ಪಾಲು ಆರೋಗ್ಯ ಸೇವೆಗಳಿಗೆ ವ್ಯಯವಾಗಿದೆ ಎನ್ನುತ್ತವೆ ಆರ್ಥಿಕ ಸಮೀಕ್ಷೆಯ ದತ್ತಾಂಶಗಳು.

2019–20ರಲ್ಲಿ ಸಮಾಜಿಕ ಸೇವಾ ವಲಯಕ್ಕೆ ಕೇಂದ್ರ ಸರ್ಕಾರವು ₹2.73 ಲಕ್ಷ ಕೋಟಿಯಷ್ಟು ಅನುದಾನವನ್ನು ನೀಡಿತ್ತು. 2021–22ರಲ್ಲಿ ಪರಿಷ್ಕೃತ ಅಂದಾಜೂ ಸೇರಿ, ₹4.72 ಲಕ್ಷ ಕೋಟಿ ಅನುದಾನವನ್ನು ಕೇಂದ್ರ ಸರ್ಕಾರವು ಈ ವಲಯಕ್ಕಾಗಿ ತೆಗೆದಿರಿಸಿದೆ. ಇದು ಶೇ 73ರಷ್ಟು ಏರಿಕೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ವಿವರಿಸಲಾಗಿದೆ.

ಈ ಅನುದಾನದಲ್ಲಿ ಶಿಕ್ಷಣಕ್ಕಾಗಿ ಶೇ 36.6ರಷ್ಟು ಮೊತ್ತವನ್ನು ಮೀಸಲಿರಿಸಲಾಗಿದ್ದರೆ, ಆರೋಗ್ಯ ಕ್ಷೇತ್ರಕ್ಕೆ ಶೇ 24.7ರಷ್ಟು ಮೊತ್ತವನ್ನು ಮೀಸಲಿರಿಸಲಾಗಿದೆ. ಈ ಎರಡೂ ಕ್ಷೇತ್ರಗಳಿಗೆ ನೀಡಲಾದ ಮೊತ್ತವು, ಒಟ್ಟು ಅನುದಾನದ ಶೇ 61ಕ್ಕೂ ಹೆಚ್ಚು.

ಆಧಾರ: ಆರ್ಥಿಕ ಸಮೀಕ್ಷೆ 2021–22



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 33

ಸೃಷ್ಟಿ-ಸ್ಥಿತಿ ಪಡೆದ ಬ್ರಹ್ಮ-ವಿಷ್ಣು

ಮಹಾಶಿವ ತನ್ನ ಐದು ಕರ್ತವ್ಯಗಳನ್ನು ಹೇಳಿದ ನಂತರ, ಬ್ರಹ್ಮ ಮತ್ತು ವಿಷ್ಣುವಿಗೆ ಈಗಾಗಲೇ ಸೃಷ್ಟಿ ಮತ್ತು ಸ್ಥಿತಿಕಾರ್ಯಗಳನ್ನು ಅನುಗ್ರಹಿಸಿದ್ದನ್ನು ತಿಳಿಸುತ್ತಾನೆ. ಹಾಗೆಯೇ ರುದ್ರ ಮತ್ತು ಮಹೇಶ್ವರರು ಸಹ ತಪಸ್ಸಿನಿಂದ ಸಂಹಾರ ಮತ್ತು ನಿಗ್ರಹಗಳ ಕೃತ್ಯಗಳನ್ನು ಪಡೆದಿರುವರು. ಅನುಗ್ರಹವೆಂಬ ಐದನೆಯ ಕೃತ್ಯವನ್ನು ಯಾರಿಗೂ ಕೊಡಲು ಸಾಧ್ಯವಿಲ್ಲ. ಆದ್ದರಿಂದ ಮೋಕ್ಷ ಕೊಡುವ ಕೆಲಸ ತನ್ನ ಹೊರತು ಬೇರಾವ ದೇವರಿಗೂ ಕೊಡಲು ಸಾಧ್ಯವಿಲ್ಲ ಎನ್ನುತ್ತಾನೆ. 'ನಿಮಗೆ ಒಪ್ಪಿಸಿದ್ದ ಸೃಷ್ಟಿ-ಸ್ಥಿತಿ ಕರ್ಮಗಳನ್ನು ಮರೆತು ಪ್ರತಿಷ್ಠೆಯ ಕದನಕ್ಕೆ ಇಳಿದುಬಿಟ್ಟಿರಿ. ಆದರೆ ರುದ್ರ ಮತ್ತು ಮಹೇಶ್ವರರು ಸಂಹಾರ ಮತ್ತು ನಿಗ್ರಹ ಕರ್ಮಗಳನ್ನು ಮರೆಯದೆ ಕರ್ತವ್ಯ ನಿಷ್ಠರಾಗಿ ದುಡಿಯುತ್ತಿದ್ದಾರೆ' ಎಂದು ಬ್ರಹ್ಮ-ವಿಷ್ಣುವಿನ ತಪ್ಪನ್ನು ಒತ್ತಿ ಹೇಳುತ್ತಾನೆ.

ಕರ್ತವ್ಯನಿಷ್ಠರಾದ ರುದ್ರ-ಮಹೇಶ್ವರರಿಗೆ ನನ್ನಂತೆ ರೂಪ, ವೇಷ, ಕೃತ್ಯ, ವಾಹನ, ಆಸನ, ಆಯುಧ ಮುಂತಾದವುಗಳನ್ನು ಕಲ್ಪಿಸಿ ಶಿವ ಸಾಮ್ಯವನ್ನು ಅನುಗ್ರಹಿಸಿದ್ದೇನೆ. ನನ್ನ ಧ್ಯಾನ ಮಾಡದೆ ಇದ್ದರಿಂದ ನಿಮಗೆ ಅಹಂಭಾವದ ಅವಿವೇಕವುಂಟಾಯಿತು. ಪರಸ್ಪರ ಯುದ್ಧ ಮಾಡಿ ತಪ್ಪು ಮಾಡಿದಿರಿ. ನನ್ನ ಸ್ವರೂಪ ಜ್ಞಾನ ನಿಮಗಿದ್ದಿದ್ದರೆ 'ನಾನೇ ಈಶ್ವರ'ನೆಂಬ ಅಹಂಕಾರ ನಿಮಗೆ ಬರುತ್ತಿರಲಿಲ್ಲ. ಇದರಿಂದ ನನ್ನ ಸಮಾನವಾದ ರೂಪವೂ ನಿಮಗೆ ಲಭಿಸದೆ, ಕಳೆದುಕೊಂಡಿರಿ. ನೀವು ನನ್ನ ಸ್ವರೂಪಜ್ಞಾನ ಪಡೆಯಬೇಕೆಂದರೆ ಓಂಕಾರವೆಂಬ ಮಂತ್ರವನ್ನು ಜಪಿಸಿರಿ. ಆಗ ನಿಮ್ಮ ಅಹಂಕಾರವೂ ತೊಲಗಿ ವಿವೇಕಜ್ಞಾನ ಉಂಟಾಗುವುದು ಎಂದು ಬ್ರಹ್ಮ-ವಿಷ್ಣುವಿಗೆ ಪರಮೇಶ್ವರ ತಿಳಿಸುತ್ತಾನೆ.

ನನ್ನ ಮೂಲಮಂತ್ರವಾದ ಮತ್ತು ಮಂಗಳಕರವಾದ ಓಂಕಾರವನ್ನು ನಿಮಗೆ ಉಪದೇಶಿಸಿರುವೆನು. ನನ್ನ ಸ್ವರೂಪವನ್ನು ಬೋಧಿಸುವ ಈ ಓಂಕಾರವು ಮೊದಲು ನನ್ನ ಮುಖದಿಂದಲೇ ಜನಿಸಿರುವುದು. ಓಂಕಾರವು ನನ್ನ ವಾಚಕ. ಅದರಿಂದ ಬೋಧಿಸಲ್ಪಡುವ ವಸ್ತುವೂ ನಾನೇ. ಓಂಕಾರವು ನನ್ನ ಸ್ವರೂಪವಾದುದರಿಂದ, ಓಂಕಾರವನ್ನು ಸ್ಮರಿಸಿದರೆ ನನ್ನನ್ನು ಸ್ಮರಣೆ ಮಾಡಿದಂತೆಯೇ ಆಗುವುದು. ಓಂಕಾರದಲ್ಲಿನ ಮೊದಲನೆಯ ಆಕಾರವು ನನ್ನ ಉತ್ತರ ಮುಖದಿಂದ ಜನಿಸಿತು. ಉಕಾರವು ಪಶ್ಚಿಮಮುಖದಿಂದ ಜನಿಸಿತು. ಮಕಾರವು ದಕ್ಷಿಣ ಮುಖದಿಂದ ಜನಿಸಿತು. ಕೊನೆಯದಾದ ಅನುಸ್ವಾರವಾದ ಸೊನ್ನೆಯು ಪೂರ್ವಮುಖದಿಂದ ಜನಿಸಿತು. ಓಂಕಾರದ ನಾದವು ನನ್ನ ಮಧ್ಯಮುಖದಿಂದ ಜನಿಸಿತು.

ಹೀಗೆ ಐದು ಮುಖಗಳಿಂದ ಐದು ವಿಧವಾದ ಓಂಕಾರವು ಜನಿಸಿರುವುದು. ಅದೆಲ್ಲವೂ ಒಟ್ಟು ಸೇರಿ 'ಓಂ' ಎಂಬ ಅಕ್ಷರವಾಗಿರುವುದು. ನಾಮರೂಪಮಯವಾದ ಪ್ರಪಂಚ, ವೇದಗಳು, ಪಂಚಭೂತಗಳೆಲ್ಲವೂ ಈ ಓಂಕಾರದಿಂದಲೇ ವ್ಯಾಪಿಸಲ್ಪಟ್ಟಿರುವುದು. ಓಂಕಾರವು ಶಿವಶಕ್ತಿಯನ್ನೂ ಬೋಧಿಸುವುದು. ಓಂಕಾರದಿಂದ ಸಕಲ ಸ್ವರೂಪವನ್ನು ಬೋಧಿಸುವ ಪಂಚಾಕ್ಷರೀಮಂತ್ರವು ಹುಟ್ಟಿತು. ಆಕಾರಾದಿಯಾದ ಕ್ರಮದಿಂದಲೇ ನಕಾರ ಮೊದಲುಗೊಂಡು ಕ್ರಮವಾಗಿ ಜನಿಸಿತು. ಅಂದರೆ ಆಕಾರದಿಂದ ನಕಾರವು ಜನಿಸಿತು, ಉಕಾರದಿಂದ ಮಕಾರವೂ, ಮಕಾರದಿಂದ ಶಿಕಾರವೂ, ಸೊನ್ನೆಯಿಂದ ವಕಾರವೂ, ಕೊನೆಯದಾದ ನಾದದಿಂದ ಯಕಾರವೂ ಜನಿಸಿತು. ಇದೇ 'ನಮಃ ಶಿವಾಯ' ಎಂಬ ಪಂಚಾಕ್ಷರೀಮಂತ್ರ.

ಇದರಿಂದ ಐದು ಮಾತೃಕೆಗಳು ಜನಿಸಿದುವು. ಈ ಮಂತ್ರದಿಂದಲೇ ನಾಲ್ಕು ಮುಖಗಳುಳ್ಳ, ಮೂರು ಪಾದಗಳುಳ್ಳ ಗಾಯತ್ರಿಯ ಶಿರಸ್ಸಿನೊಡನೆ ಜನಿಸಿತು. ಇದರಿಂದಲೇ ವೇದಗಳೆಲ್ಲವೂ ಜನಿಸಿದುವು. ಇದರಿಂದ ಕೋಟ್ಯಂತರ ಮಂತ್ರಗಳು ಉತ್ಪತ್ತಿಯಾದವು. ಆಯಾಯ ದೇವತೆಗಳ ಮಂತ್ರದಿಂದ ಆಯಾಯ ಫಲವೊಂದೇ ಸಿದ್ಧಿಸುವುದು. ಆದರೆ, ಈ ಪಂಚಾಕ್ಷರೀಮಂತ್ರ ಜಪಿಸಿದರೆ ಸಕಲವೂ ಸಿದ್ಧಿಸುವುದು; ಭೋಗವೂ ಮೋಕ್ಷವೂ ಲಭಿಸುವುದು. ಮಿಕ್ಕ ಮಂತ್ರೋತ್ತಮಗಳೆಲ್ಲವೂ ಸಾಕ್ಷಾತ್ತಾಗಿ ಭೋಗವನ್ನು ಮಾತ್ರ ಕೊಡಬಲ್ಲವು. ಮೋಕ್ಷವನ್ನು ಕೊಡಲು ಸಮರ್ಥವಲ್ಲ – ಎಂದು ವಿಷ್ಣು ಬ್ರಹ್ಮರಿಗೆ ಶಿವನು ತನ್ನ ಪಂಚಕೃತ್ಯದ ಲಕ್ಷಣಗಳನ್ನು ವಿವರಿಸಿದನು.

ಹೀಗೆ ಬ್ರಹ್ಮ-ವಿಷ್ಣು ಇಬ್ಬರಿಗೂ ಮಹಾಶಿವ ಹೇಳಿದ ಪಂಚಕೃತ್ಯವಿಚಾರವನ್ನು ಮಂದಾರಪರ್ವತದಲ್ಲಿ ತಪಸ್ಸು ಮಾಡುತ್ತಿದ್ದ ಸನತ್ಕುಮಾರನಿಗೆ ತಿಳಿಸಿದ ನಂದಿಕೇಶ್ವರ, ಮುಂದೆ ಪರಶಿವನು ಬ್ರಹ್ಮ-ವಿಷ್ಣುವಿಗೆ ಪಂಚಾಕ್ಷರೀಮಂತ್ರವನ್ನ ಬೋಧಿಸಿದ ವಿವರವನ್ನು ಹೇಳತೊಡಗುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತೀಯ ಸೇನೆಯಲ್ಲಿರುವ ಸಿಖ್ ರೆಜಿಮೆಂಟಿನ ಯೋಧರು ಚೀನಾ ಗಡಿಯಲ್ಲಿ ಗುರುದ್ವಾರವನ್ನು ನಿರ್ಮಿಸಿದ್ದು, ಸಿಖ್ ಧ್ವಜ ಸ್ಥಾಪಿಸಿದ್ದಾರೆ ಎಂಬ ಸುದ್ದಿ ಹರಡಿದೆ. ಇದನ್ನು ಪುಷ್ಟೀಕರಿಸುವ ವಿಡಿಯೊ ಸಹ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಶಾಸಕ ಸೌರಭ್ ಶ್ರೀವಾಸ್ತವ್ ಸೇರಿದಂತೆ ಹಲವರು ಈ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಹರ್ಪಾಲ್ ಸಿಂಗ್ ಎಂಬುವರು ಫೇಸ್‌ಬುಕ್‌ನಲ್ಲಿ ಅಪ್ಲೋಡ್ ಮಾಡಿರುವ ಈ ವಿಡಿಯೊವನ್ನು 25 ಸಾವಿರ ಜನರು ವೀಕ್ಷಿಸಿದ್ದಾರೆ.



ಇದು ಸುಳ್ಳು ಸುದ್ದಿ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಸಿಖ್ ರೆಜಿಮೆಂಟ್ ಯೋಧರು ಚೀನಾ ಗಡಿಯಲ್ಲಿ ಗುರುದ್ವಾರ ನಿರ್ಮಿಸಿಲ್ಲ. ಬದಲಿಗೆ, 2021ರ ಅಕ್ಟೋಬರ್‌ನಲ್ಲಿ ಲೇಹ್‌ನಲ್ಲಿರುವ ಶ್ರೀ ಪಥರ್ ಸಾಹಿಬ್ ಗುರುದ್ವಾರದಲ್ಲಿ 80 ಅಡಿಯ ನಿಶಾನ್ ಸಾಹಿಬ್ ಅನ್ನು ಭಾರತೀಯ ಸೇನೆ ನಿರ್ಮಿಸಿದೆ. 'ಪಿಟಿಸಿ ಪಂಜಾಬ್ ಯುಕೆ' ಎಂಬ ಫೇಸ್‌ಬುಕ್ ಪೇಜ್‌ನಲ್ಲಿ ಒಂದು ಗಂಟೆ ಅವಧಿಯ ವಿಡಿಯೊ ಅಪ್ಲೋಡ್ ಮಾಡಲಾಗಿದ್ದು, ವೈರಲ್ ಆಗಿರುವ ವಿಡಿಯೊದ ತುಣುಕು ಇದರಲ್ಲಿ ಇದೆ. ಭಾರತೀಯ ಸೇನೆಯು ನಿಶಾನ್ ಸಾಹಿಬ್ ಅನ್ನು ನಿರ್ಮಿಸಿದೆ ಎಂದು ವಿಡಿಯೊ ತಿಳಿಸುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಫೆಬ್ರುವರಿ 1, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ –ಹೇಮಂತ ಋತು ಮಕರ ಮಾಸದ 18 ನೇ ದಿನ
ತಿಥಿ: (ಪೌಷ ಕೃಷ್ಣ) ಅಮಾವಾಸ್ಯೆ ಗಂ. 11-16 ನಕ್ಷತ್ರ: ಶ್ರವಣ ಗಂ. 19-44 ಯೋಗ: ಸಿದ್ಧಿ ಗಂ. 06-41, ವ್ಯತೀಪಾತ ಗಂ 27-09, ಕರಣ: ನಾಗವಾನ್ ಗಂ. 11-16. ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 07-01 ಸೂರ್ಯಾಸ್ತ : 06-27 ಮುಸ್ಲಿಂ ದಿನಾಂಕ : 28 ಜುಮಾದುಸ್ಸಾನಿ ದಿನ ವಿಶೇಷ : ಮೌನಿ ಅಮಾವಾಸ್ಯೆ, ಮಹೋದಯ ಯೋಗ ಅದೃಷ್ಟ ಸಂಖ್ಯೆ: 1, 5

ಮೇಷ: ಕೆಲಸದಲ್ಲಿ ಹಲವು ವಿಘ್ನಗಳು ಕಾಣುವುದರಿಂದ ಬೇಸರಗೊಳ್ಳುವಂತಿಲ್ಲ, ಏಕೆಂದರೆ ಪ್ರಯತ್ನವು ಅಧಿಕವಾಗಿರಬೇಕೆಂಬುವುದು ಅದರ ಸಂಕೇತ. ಈ ದಿನ ಆದಾಯದಲ್ಲಿ ಸಣ್ಣ ಹೊಡೆತವನ್ನು ಎದುರಿಸುವಂತಾಗಬಹುದು.

ವೃಷಭ: ನೀರಿನ ಹತ್ತಿರದಲ್ಲಿ ಅಥವಾ ನೀರಿಗೆ ಸಂಬಂಧಿಸಿದ ಕೆಲಸ ನಡೆಸುವವರಿಗೆ ವೃತ್ತಿಯಲ್ಲಿ ಭೀತಿ. ವಿದ್ಯಾರ್ಥಿನಿಯರಿಗೆ ವಿಶೇಷವಾಗಿ ಪ್ರಗತಿ ಪ್ರಾಪ್ತಿಯಾಗಬಹುದು. ಪ್ರಯಾಣದಲ್ಲಿ ವಿಳಂಬವಾಗುತ್ತದೆ.

ಮಿಥುನ: ಗೃಹದಲ್ಲಿ ಸುಖ-ಶಾಂತಿ ಸಮೃದ್ಧಿಯಾಗಿ ಕಾಣಲಿದೆ. ನಿಮ್ಮ ನಿಲುವು ಸ್ಪಷ್ಟಪಡಿಸಿಕೊಂಡಲ್ಲಿ ಗೆಲುವು ನಿಮ್ಮದಾಗುವುದು. ವಸ್ತ್ರಗಳ ವ್ಯಾಪಾರಿಗಳಿಗೆ ಹೆಚ್ಚಿನ ಆದಾಯ. ಸ್ನೇಹಿತರೊಡನೆ ವ್ಯವಹಾರ ನಡೆಸುವ ನಿರ್ಧಾರ ಕೈಬಿಡಿ.

ಕರ್ಕಾಟಕ: ನಿಮ್ಮ ದೈನಂದಿನದ ಯಾಂತ್ರಿಕ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ಕುಟುಂಬದೊಂದಿಗೆ ಕಾಲ ಕಳೆಯುವಿರಿ. ಅಧಿಕಾರ ಹಾಗೂ ಅನುಭವದಿಂದ ಆತ್ಮಾಭಿಮಾನ ಹೆಚ್ಚುವುದು.

ಸಿಂಹ: ಹೊಸ ಜವಾಬ್ದಾರಿಗಳನ್ನು ಪೂರೈಸುವತ್ತ ಗಮನಾರ್ಹ ಹೆಜ್ಜೆಯಿಡುವ ಮೂಲಕ ಅಚ್ಚರಿಯ ಫಲಿತಾಂಶಗಳನ್ನು ಕಾಣುವಿರಿ. ವಾದವಿವಾದಗಳಿಗೆ ಎಡೆ ಮಾಡಿಕೊಡಬೇಡಿ. ಹೊಸ ಎಂಜಿನಿಯರುಗಳಿಗೆ ಉತ್ತಮ ಅವಕಾಶ.

ಕನ್ಯಾ: ನೀವಿಂದು ಸ್ವತಂತ್ರ ಮನೋಭಾವದಿಂದ ಹೊರಬಂದು ಆತ್ಮೀಯರ ಸಲಹೆಗಳಿಗೆ ಹೊಂದಿಕೊಳ್ಳುವಿರಿ. ನಿಮ್ಮ ಬುದ್ಧಿವಂತಿಕೆ ಹಾಗೂ ಯೋಜನೆಗಳು ನಿಮ್ಮ ಸಂವಹನವನ್ನು ಸುಲಭಗೊಳಿಸುತ್ತದೆ. ಕಿರು ಸಂಚಾರವು ಇರುವುದು.

ತುಲಾ: ಇಂದು ಹೊಸ ಉದ್ಯೋಗಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಧಾರಗಳನ್ನು ಕೈಗೊಳ್ಳದಿರಿ. ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ಹಣ ಇಂದು ನಿಮ್ಮ ಕೈ ಸೇರಲಿದೆ. ಮನೆಯಲ್ಲಿ ಅನಿವಾರ್ಯವಾದ ಹೊಂದಾಣಿಕೆ ಮಾಡಿಕೊಳ್ಳುವಿರಿ.

ವೃಶ್ಚಿಕ: ಗುಂಪು ಚಟುವಟಿಕೆಗಳಿಗೆ ಈ ದಿನ ನಿಮ್ಮ ಮುಂದಾಳತ್ವ ಅಗತ್ಯವಾಗಿರುವುದು. ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಇಂದಿನ ಕೊಡುಗೆಯಿಂದ ಎಲ್ಲರ ಪ್ರಶಂಸೆಗೆ ಪಾತ್ರರಾಗುತ್ತೀರಿ. ಇದು ನಿಮ್ಮ ಆನಂದವನ್ನು ಹೆಚ್ಚಿಸುತ್ತದೆ.

ಧನು: ನಿಮ್ಮ ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಯನ್ನು ಎದುರಿಸಬೇಕಾಗಬಹುದು. ಆದರೆ ಸ್ವಲ್ಪ ಪ್ರಯತ್ನ ಪಟ್ಟರೆ ನೀವೇ ಇದರಲ್ಲಿ ಜಯಗಳಿಸಬಹುದು. ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ನಿಮ್ಮ ಸಮಯವನ್ನು ಮೀಸಲಿಡಿ.

ಮಕರ: ನೀವು ಇಂದು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗಬೇಕಾಗಬಹುದು. ನಿಮ್ಮ ವರಮಾನದಲ್ಲಿ ಈ ದಿನ ಯಾವುದೇ ರೀತಿಯ ಕೊರತೆ ಇರುವುದಿಲ್ಲ. ಇಂದು ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣವಿರುತ್ತದೆ.

ಕುಂಭ: ಗಂಭೀರ ಹಂತದಲ್ಲಿರುವ ನಿಮ್ಮ ವೈಯಕ್ತಿಕ ಹಾಗೂ ಉದ್ಯೋಗಿಕ ಸಂಬಂಧಗಳನ್ನು ಸರಿಗೊಳಿಸುವ ಪ್ರಯತ್ನವನ್ನು ನಡೆಸಬಹುದು. ನಿಮ್ಮ ಬದುಕನ್ನು ಒಂದು ವ್ಯವಸ್ಥೆಗೆ ತರಲು ಮಾರ್ಗದರ್ಶಕರ ಸಲಹೆ ಪಡೆಯಿರಿ.

ಮೀನ: ಹೊರದೇಶದಲ್ಲಿನ ಉದ್ಯೋಗದ ಅನ್ವೇಷಣೆಗೆ ಒಳ್ಳೆಯ ದಿನ. ನಿಮ್ಮ ಮುಕ್ತ ಮನೋಭಾವ ಇಂದು ನೀವಾಡುವ ಮಾತುಗಳಿಂದ ಬಹಿರಂಗಗೊಳ್ಳಲಿದೆ. ಪ್ರಯಾಣ ನೀವು ಅಂದುಕೊಂಡಂತೆ ಸುಗಮವಾಗಿರುತ್ತದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಸತ್ಯದ ಪೂರ್ಣದರ್ಶನ

ಚೂರುಗಳು ಹದಿನಾರು ಚಂದ್ರಮಂಡಲಕಂತೆ |
ನೂರಾರು ಚೂರುಗಳು ಸತ್ಯ ಚಂದ್ರನವು ||
ಸೇರಿಸುತಲವುಗಳನು ಬಗೆಯರಿತು ಬೆಳೆಸುತಿರೆ |
ಸಾರ ಋತಪೂರ್ಣಿಮೆಯೊ – ಮಂಕುತಿಮ್ಮ
|| 553 ||

ಪದ-ಅರ್ಥ: ಚಂದ್ರಮಂಡಲಕಂತೆ = ಚಂದ್ರಮಂಡಲಕ್ಕೆ + ಅಂತೆ, ಸೇರಿಸುತಲವುಗಳನು = ಸೇರಿಸುತಲಿ + ಅವುಗಳನು, ಋತಪೂರ್ಣಿಮೆ = ಸತ್ಯದ ಪೂರ್ಣದರ್ಶನ.

ವಾಚ್ಯಾರ್ಥ: ಚಂದ್ರಮಂಡಲಕ್ಕೆ ಹದಿನಾರು ಚೂರುಗಳಂತೆ, ಸತ್ಯವೆಂಬ ಚಂದ್ರನಿಗೆ ನೂರಾರು ಚೂರುಗಳು. ಅವುಗಳನ್ನು ಸೇರಿಸುತ್ತ, ಹದವರಿತು ಬೆಳೆಸಿದರೆ ಸಂಪೂರ್ಣ ಸತ್ಯದ ದರ್ಶನವಾದೀತು.

ವಿವರಣೆ: ಚಂದ್ರನ ನಿಜವಾದ ರೂಪ ಯಾವುದು? ಪಾಡ್ಯದ ದಿನ ಕಂಡ ಕೇವಲ ಒಂದು ಬೆಳ್ಳಿಗೆರೆಯೆ? ಮುಂದೆ ಪ್ರತಿ ದಿನ ಸ್ವಲ್ಪ ಸ್ವಲ್ಪ ಬೆಳೆಯುತ್ತ ಹದಿನಾರನೇ ದಿನ ಪೂರ್ಣಚಂದ್ರನಾಗುತ್ತಾನೆ. ಹೀಗಾಗಿ ಪೂರ್ಣಚಂದ್ರನ ದರ್ಶನಕ್ಕೆ ಹದಿನಾರು ಚೂರುಗಳು ಎಂದು ಹೇಳುತ್ತಾರೆ. ಆ ಹದಿನಾರು ಚೂರುಗಳನ್ನು ಸೇರಿದಾಗ ಚಂದ್ರದರ್ಶನ. ನಮಗೆ ಕಣ್ಣಿಗೆ ಕಾಣುವ ಚಂದ್ರದರ್ಶನಕ್ಕೇ ಹದಿನಾರು ಚೂರುಗಳು ಇರುವುದಾದರೆ ಕಣ್ಣಿಗೆ ಕಾಣದ ಪರಮಸತ್ಯಕ್ಕೆ ಎಷ್ಟು ಮುಖಗಳಿರಬೇಕು?

ಸತ್ಯವೆಂಬುದು ನಮಗೆ ಮುಖ್ಯವಾಗಿದ್ದು ಯಾವುದರಿಂದ? ಅದರಿಂದ ಧರ್ಮಸಾಧನೆಯಾಗುತ್ತದೆ ಎಂಬುದರಿಂದಲ್ಲವೆ? ಧರ್ಮ ನಮಗೆ ಅವಶ್ಯವಾಗಿರುವುದರಿಂದ ಸತ್ಯ ನಮಗೆ ಕರ್ತವ್ಯವಾಗುತ್ತದೆ. ಆದರೆ ಕೆಲವೊಮ್ಮೆ ನಾವು ಸತ್ಯವೆಂದು ಭಾವಿಸಿದ್ದು ಧರ್ಮಕ್ಕೆ ಹಾನಿಯನ್ನು ಮಾಡಬಹುದು. ಹಾಗೆ ಆದಾಗ ನಮ್ಮ ಕರ್ತವ್ಯವೇನು? ಸತ್ಯವೆಂದುಕೊಂಡದ್ದನ್ನು ನಡೆಸುವುದೋ, ಧರ್ಮವನ್ನು ಕಾಪಾಡುವುದೋ?

ಒಂದು ಕಾಡಿನಲ್ಲಿ ಕೌಶಿಕನೆಂಬ ಋಷಿ ತಪಸ್ಸು ಮಾಡಿಕೊಂಡಿದ್ದ. ಒಂದು ದಿನ ಅವನ ಆಶ್ರಮಕ್ಕೆ ಕೆಲಪ್ರವಾಸಿಗರು ಓಡಿಬಂದರು. ಅವರನ್ನು ದರೋಡೆಕಾರರು ಬೆನ್ನಟ್ಟಿದ್ದಾರೆ. ಅವರು ಋಷಿಯ ಅನುಮತಿ ಪಡೆದು ಬೇಲಿಯ ಹಿಂದೆ ಅಡಗಿ ಕುಳಿತರು. ಸ್ವಲ್ಪ ಸಮಯದ ನಂತರ ದರೋಡೆಕಾರರ ಗುಂಪು ಅಲ್ಲಿಗೆ ಬಂದಿತು. ಅವರು ತಪಸ್ಸು ಮಾಡುತ್ತಿದ್ದ ಋಷಿಯನ್ನು ಕೇಳಿದರು, 'ಇಲ್ಲಿಗೆ ಯಾರಾದರೂ ಪ್ರವಾಸಿಗರು ಬಂದರೇ?' ಈಗ ಋಷಿ ಏನು ಮಾಡಬೇಕು? ಋಷಿ ಕೌಶಿಕ ಮಹಾನ್ ಸತ್ಯವಾದಿ. ಎಂದೆಂದೂ ಸುಳ್ಳು ಹೇಳಿದವನಲ್ಲ. ಅವನು ಸತ್ಯಕ್ಕೇ ಕಟ್ಟುಬಿದ್ದವನಾದ್ದರಿಂದ, 'ಹೌದು, ಪ್ರವಾಸಿಗರು ಇಲ್ಲಿಗೆ ಬಂದಿದ್ದರು. ನಾನೇ ಅವರಿಗೆ ಬೇಲಿಯ ಹಿಂದೆ ಅಡಗಿ ಕುಳಿತುಕೊಳ್ಳಲು ಹೇಳಿದ್ದೇನೆ' ಎಂದ. ದರೋಡೆಕಾರರು ಸಂತೋಷದಿಂದ ಆ ಕಡೆಗೆ ಹೋಗಿ ಪ್ರವಾಸಿಗರಲ್ಲಿ ಕೆಲವರನ್ನು ಕೊಂದು, ಮತ್ತೆ ಉಳಿದವರನ್ನು ಹೊಡೆದು ಎಲ್ಲ ವಸ್ತುಗಳನ್ನು ದೋಚಿಕೊಂಡು ಹೋದರು. ಕೆಲವರ್ಷಗಳ ನಂತರ ಕೌಶಿಕ ತೀರಿಹೋದ. ಅಲ್ಲಿ ಚಿತ್ರಗುಪ್ತರು ಆ ಎಲ್ಲ ಪ್ರವಾಸಿಗರಿಗೆ ಆದ ತೊಂದರೆಯನ್ನು ಕೌಶಿಕನ ಪಾಪದ ಲೆಕ್ಕಕ್ಕೆ ಹಾಕಿದ್ದರು. ಆದ್ದರಿಂದ ಸತ್ಯವನ್ನು ನಿಜಾರ್ಥದಲ್ಲಿ ತಿಳಿಯುವುದು ಕಷ್ಟ.

ಯತ್ರಾನೃತಂ ಭವೇತ್ ಸತ್ಯಂ |
ಸತ್ಯಂ ಚಾಪ್ಯನೃತಂ ಭವೇತ್ ||


(ಸುಳ್ಳೇ ಸತ್ಯದಂತೆ ಒಳ್ಳೆಯದಾಗುವ ಸಂದರ್ಭವುಂಟು. ಸತ್ಯವೇ ಸುಳ್ಳಿನಂತೆ ಕೇಡಾಗುವ ಸಂದರ್ಭವೂ ಉಂಟು). ಅದಕ್ಕೇ ಕಗ್ಗ, ಸತ್ಯದ ಅನೇಕ ಮುಖಗಳನ್ನು ಸೇರಿಸಿಕೊಂಡು, ಅವುಗಳ ನಿಜಾರ್ಥವನ್ನು ಗಮನಿಸಿ ಬೆಳೆಸಿದಾಗ ಸತ್ಯದ ಪೂರ್ಣದರ್ಶನವಾಗುತ್ತದೆ ಎನ್ನುತ್ತದೆ.

ಪದಬಂಧ 4856

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ವಿಶೇಷವಾದ ದ್ರೋಹ (3)
3. ಕೆಡುಕಾಗಲೆಂದು ಬಯಸಿ ಹೇಳುವ ಮಾತಿದು (2)
5. ಮದುವೆಯ ಗಂಡು (2)
6. ಸಂಪ್ರದಾಯವನ್ನು ಅನುಸರಿಸುವವನು (4)
7. ತಾನೇ ಊಹಿಸಿದುದು (7)
10. ಅನಿರೀಕ್ಷಿತ ಘಟನೆ (4)
11. ಮರಗಳ ಗುಂಪು (2)
13. ಶ್ರಮ ನಿರ್ವಹಿಸುವುದು (2)
14. ತಾರೆ ಇಲ್ಲಿ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ
1. ಹಣ ಅಥವಾ ಐಶ್ವರ್ಯ (2)
2. ಭಾರವಲ್ಲದ್ದು ಇದು! (3)
4. ಅಗಲವಾದ ತಟ್ಟೆ (3)
5. ಉಲ್ಟಾ ಆಗಿರುವ ಹುಟ್ಟುಗುಣ (3)
6. ಕರುವಿಗೆ ತೋರಿದ ದಯೆ! (3)
8. ಈತ ಕಾಪಾಡುವವನು (3)
9. ಒನಪು ತೋರಿದಾಗ ಬಂದಿರುವ ಸ್ಮರಣೆ! (3)
10. ವಾಸಸ್ಥಳವಿದು (3)
11. ತೂಕ ಮಾಡುವುದು (3)
12. ನಾಟಕ ಮುಂತಾದವುಗಳಲ್ಲಿ ನಟ ಪ್ರತಿನಿಧಿಸುವ ವ್ಯಕ್ತಿತ್ವ (2)



4855ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪೂರ್ವಾಗ್ರಹ 3.ಪರಿಹಾರ 5.ಕೆರ 7.ತರುಣ 8.ಮಾರ 10.ಶವ 11.ಕಶೇರು 13.ಮ3 15.ಕಲರವ 16.ರಸಭಂಗ

ಮೇಲಿಂದ ಕೆಳಕ್ಕೆ: 1.ಪೂರೈಕೆ 2.ಹರಿತ 3.ಪಯಣ 4.ರಸರ 6.ರಜತೋತ್ಸವ 8.ಮಾರಣಹೋಮ 10.ಶತಕ 11.ಕಕವ 12.ರುಧಿರ 14.ತಿಣಗ

ಸುಡೊಕು 5242

	6				8			5
1		3		6		8	9	4
	8		5					
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5241 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಆಸ್ತಿ ನಗದೀಕರಣಕ್ಕೆ 3,400 ಎಕರೆ ಗುರುತು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ರಾಷ್ಟ್ರೀಯ ಜಮೀನು ನಗದೀಕರಣ ನಿಗಮವನ್ನು (ಎನ್‌ಎಲ್‌ಎಂಸಿ) ಸ್ಥಾಪಿಸಿದ್ದು, ಇದರ ಮೂಲಕ ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಜಮೀನು ಮತ್ತು ಪ್ರಮುಖವಲ್ಲದ ಆಸ್ತಿಗಳ ನಗದೀಕರಣ ಪ್ರಕ್ರಿಯೆಗೆ ವೇಗ ನೀಡಲಿದೆ. ಈ ಅಂಶವು ಸೋಮವಾರ ಸಂಸತ್ತಿನಲ್ಲಿ ಮಂಡನೆಯಾದ ಆರ್ಥಿಕ ಸಮೀಕ್ಷಾ ವರದಿಯಲ್ಲಿ ಇದೆ.


ಕೇಂದ್ರೋದ್ಯಮಗಳು ಇದುವರೆಗೆ ಒಟ್ಟು 3,400 ಎಕರೆ ಜಮೀನನ್ನು ಮತ್ತು ಇತರ ಕೆಲವು ಪ್ರಮುಖವಲ್ಲದ ಆಸ್ತಿಗಳನ್ನು ನಗದೀಕರಣಕ್ಕಾಗಿ ಗುರುತಿಸಿವೆ. ಎಂಟಿಎನ್‌ಎಲ್, ಬಿಎಸ್‌ಎನ್‌ಎಲ್, ಬಿಪಿಸಿಎಲ್, ಬಿಇಎಂಎಲ್, ಎಚ್‌ಎಂಟಿ, ಇನ್‌ಸ್ಟ್ರುಮೆಂಟೇಷನ್ ಲಿಮಿಟೆಡ್ ಕಂಪನಿಗಳ ಆಸ್ತಿಗಳು ಇದರಲ್ಲಿ ಸೇರಿವೆ.

ಪ್ರಮುಖವಲ್ಲದ ಆಸ್ತಿಗಳ ನಗದೀಕರಣಕ್ಕೆ ಬೇಕಿರುವ ಕೌಶಲವು ಕೇಂದ್ರ ಸರ್ಕಾರದ ಬಳಿ ಅಗತ್ಯ ಪ್ರಮಾಣದಲ್ಲಿ ಇಲ್ಲವಾಗಿದ್ದ ಕಾರಣ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021-22ರ ಬಜೆಟ್‌ನಲ್ಲಿ, ಆಸ್ತಿ ನಗದೀಕರಣಕ್ಕೆ ವಿಶೇಷ ವ್ಯವಸ್ಥೆಯೊಂದನ್ನು ಹುಟ್ಟು ಹಾಕುವ ಪ್ರಸ್ತಾಪ ಮಾಡಿದ್ದರು.

‘ಬಜೆಟ್‌ನಲ್ಲಿನ ಘೋಷಣೆಗೆ ಅನುಗುಣವಾಗಿ, ಎನ್‌ಎಲ್‌ಎಂಸಿ ಸ್ಥಾಪಿಸಲಾಗುತ್ತಿದೆ. ಇದರ ಪೂರ್ಣ ಮಾಲೀಕತ್ವವು ಕೇಂದ್ರ ಸರ್ಕಾರದ್ದಾಗಿರಲಿದೆ’ ಎಂದು ಸಮೀಕ್ಷೆಯ ವರದಿ ಹೇಳಿದೆ. 2021-22ರಿಂದ 2024-25ರ ನಡುವಿನ ಅವಧಿಯಲ್ಲಿ ನಗದೀಕರಣ ಮಾಡಿಕೊಳ್ಳಬಹುದಾದ ಸಾಮರ್ಥ್ಯವು ಒಟ್ಟು ₹ 6 ಲಕ್ಷ ಕೋಟಿ ಎಂದು ವರದಿಯಲ್ಲಿ ಹೇಳಲಾಗಿದೆ. ಈ ಮೊತ್ತದಲ್ಲಿ ಶೇ 83ರಷ್ಟು ಪಾಲು ರಸ್ತೆಗಳು, ರೈಲ್ವೆ, ಇಂಧನ, ತೈಲ ಮತ್ತು ಅನಿಲ ಕೊಳವೆ, ದೂರಸಂಪರ್ಕ ವಲಯಗಳದ್ದಾಗಿದೆ.

ಮುಖ್ಯಾಂಶಗಳು
- ಕೇಂದ್ರದ ಮಾಲೀಕತ್ವದ ರಾಷ್ಟ್ರೀಯ ಜಮೀನು ನಗದೀಕರಣ ನಿಗಮ
- ನಗದೀಕರಣ ಸಾಮರ್ಥ್ಯ ₹ 6 ಲಕ್ಷ ಕೋಟಿ

ಷೇರುಪೇಟೆ ವಹಿವಾಟು 814



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,102
ಇಂದಿನ ಅಂತ್ಯ	17,340
▲	238
ದಿನದ ಗರಿಷ್ಠ	17,410

ವಿನಿಮಯ ದರ

$ ಡಾಲರ್	74.65
£ ಪೌಂಡ್	100.34
€ ಯುರೊ	83.41
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹64
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1340 (1330)
ಸೋಯಾ (ರಿಫೈನ್ಡ್)	₹1265 (1260)
ಸೂರ್ಯಕಾಂತಿ (ರಿಫೈನ್ಡ್)	₹1285 (1285)
ಪಾಮೋಲಿನ್	₹1225 (1219)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಪುತ್ತೂರು	₹4000-10500
ತುಮಕೂರು	---
ತುರುವೇಕೆರೆ	₹17100-17200

ಸಂಶೋಧನಾ ಸಂಸ್ಥೆ ಕೌಂಟರ್‌ಪಾಯಿಂಟ್ ವರದಿ

ಸ್ಮಾರ್ಟ್‌ಫೋನ್ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಭಾರತದಲ್ಲಿ ಸ್ಮಾರ್ಟ್‌ಫೋನ್ ಮಾರಾಟವು 2020ಕ್ಕೆ ಹೋಲಿಸಿದರೆ 2021ರಲ್ಲಿ ಶೇಕಡ 11ರಷ್ಟು ಹೆಚ್ಚಾಗಿದ್ದು, ಒಟ್ಟು 16.9 ಕೋಟಿ ಸ್ಮಾರ್ಟ್‌ಫೋನ್‌ಗಳು ಮಾರಾಟ ಆಗಿವೆ ಎಂದು ಸಂಶೋಧನಾ ಸಂಸ್ಥೆ ಕೌಂಟರ್‌ಪಾಯಿಂಟ್ ತಿಳಿಸಿದೆ.

2021ರಲ್ಲಿ ಸ್ಮಾರ್ಟ್‌ಫೋನ್ ಮಾರುಕಟ್ಟೆಯ ವರಮಾನವು ₹ 2.85 ಲಕ್ಷ ಕೋಟಿಯಷ್ಟಾಗಿದ್ದು, 2020ಕ್ಕೆ ಹೋಲಿಸಿದರೆ ಶೇ 27ರಷ್ಟು ಹೆಚ್ಚಳವಾಗಿದೆ.

2021ರಲ್ಲಿ ಭಾರತದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಕಂಡುಬಂದಿದೆ. ಕೋವಿಡ್‌ನ ಎರಡನೇ ಅಲೆಯ ಪರಿಣಾಮ ಮತ್ತು ಬಿಡಿಭಾಗಗಳ ಕೊರತೆ ಹಾಗೂ ಬೆಲೆ ಏರಿಕೆಯ ನಡುವೆಯೇ ಈ ಮಟ್ಟದ ಬೇಡಿಕೆ ಬಂದಿದೆ ಎಂದು ಸಂಸ್ಥೆಯ ಹಿರಿಯ ಸಂಶೋಧನಾ ವಿಶ್ಲೇಷಕ ಪ್ರಾಚೀರ್ ಸಿಂಗ್ ತಿಳಿಸಿದ್ದಾರೆ.

ಪ್ರಮುಖ ಐದು ಬ್ರ್ಯಾಂಡ್‌ಗಳ ಪೈಕಿ ರಿಯಲ್‌ಮಿ ಕಂಪನಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದೆ.

ಪ್ರೀಮಿಯಂ ವಿಭಾಗದಲ್ಲಿ ಶೇ 44ರಷ್ಟು ಪಾಲು ಹೊಂದಿರುವ ಆ್ಯಪಲ್ ಕಂಪನಿಯು ಮೊದಲ ಸ್ಥಾನದಲ್ಲಿದೆ.



ಒನ್‌ಪ್ಲಸ್ 2021ರಲ್ಲಿ ಗರಿಷ್ಠ ಮಾರಾಟ ಕಂಡಿದೆ. ₹ 30 ಸಾವಿರಕ್ಕಿಂತ ಅಧಿಕ ಬೆಲೆಯ ಪ್ರೀಮಿಯಂ ಸ್ಮಾರ್ಟ್‌ಫೋನ್ ವಿಭಾಗದಲ್ಲಿ ಶೇ 19ರಷ್ಟು ಮಾರುಕಟ್ಟೆ ಷೇರು ಹೊಂದುವ ಮೂಲಕ ಕಂಪನಿಯು ಎರಡನೇ ಸ್ಥಾನ ಪಡೆದುಕೊಂಡಿದೆ.

ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ 5 ಪ್ರಮುಖ ಬ್ರ್ಯಾಂಡ್‌ಗಳ ಪಾಲು

24%	ಶಿಯೋಮಿ
18%	ಸ್ಯಾಮ್ಸಂಗ್
15%	ವಿವೊ
14%	ರಿಯಲ್‌ಮಿ
10%	ಒಪ್ಪೊ

ಮುಖ್ಯಾಂಶಗಳು
- ಮೊಬೈಲ್ ಮಾರುಕಟ್ಟೆ ಶೇ 7ರಷ್ಟು ಪ್ರಗತಿ
- ಮೊಬೈಲ್ ಮಾರುಕಟ್ಟೆಯಲ್ಲಿ ಸ್ಯಾಮ್ಸಂಗ್‌ಗೆ ಮೊದಲ ಸ್ಥಾನ

ಟಾಟಾ ಸ್ಟೀಲ್‌ಗೆ ನೀಲಾಚಲ್ ಇಸ್ಪತ್: ಕೇಂದ್ರದ ಒಪ್ಪಿಗೆ

ನವದೆಹಲಿ (ಪಿಟಿಐ): ನಷ್ಟದಲ್ಲಿರುವ ನೀಲಾಚಲ್ ಇಸ್ಪತ್ ನಿಗಮ ನಿಯಮಿತವನ್ನು (ಎನ್‌ಐಎನ್‌ಎಲ್) ₹ 12,100 ಕೋಟಿಗೆ ಟಾಟಾ ಸ್ಟೀಲ್ ಕಂಪನಿಗೆ ಮಾರಾಟ ಮಾಡಲು ಒಪ್ಪಿಗೆ ನೀಡಿರುವುದಾಗಿ ಕೇಂದ್ರ ಸರ್ಕಾರ ಸೋಮವಾರ ಹೇಳಿದೆ.

ಎನ್‌ಐಎನ್‌ಎಲ್ ಒಡಿಶಾದ ಕಳಿಂಗ ನಗರದಲ್ಲಿ 11 ಲಕ್ಷ ಟನ್ ಸಾಮರ್ಥ್ಯದ ಉಕ್ಕು ಘಟಕವನ್ನು ಹೊಂದಿದೆ. ಕಂಪನಿಯು ಭಾರಿ ನಷ್ಟದಲ್ಲಿದ್ದು 2020ರ ಮಾರ್ಚ್ 30ರಿಂದ ಅದರ ಘಟಕವನ್ನು ಮುಚ್ಚಲಾಗಿದೆ.

ಎನ್‌ಐಎನ್‌ಎಲ್ ಖರೀದಿಸಲು ಜಿಂದಾಲ್ ಸ್ಟೀಲ್ ಆ್ಯಂಡ್ ಪವರ್ ಲಿಮಿಟೆಡ್, ನಲ್ವಾ ಸ್ಟೀಲ್ ಆ್ಯಂಡ್ ಪವರ್ ಲಿಮಿಟೆಡ್ ಒಕ್ಕೂಟ, ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್ ಹಾಗೂ ಟಾಟಾ ಸ್ಟೀಲ್ ಹಣಕಾಸಿನ ಬಿಡ್ ಸಲ್ಲಿಸಿದ್ದವು. ಇದರಲ್ಲಿ ಟಾಟಾ ಸ್ಟೀಲ್ ಸಲ್ಲಿಸಿರುವ ಬಿಡ್ ಅನ್ನು ಸರ್ಕಾರ ಒಪ್ಪಿಕೊಂಡಿದ್ದು, ಷೇರು ಖರೀದಿ ಒಪ್ಪಂದಕ್ಕೆ ಸಹಿ ಹಾಕುವಂತೆ ಸರ್ಕಾರವು ಟಾಟಾ ಸ್ಟೀಲ್‌ಅನ್ನು ಆಹ್ವಾನಿಸಿದೆ.

ಮಾರಾಟಕ್ಕೆ ಒಪ್ಪಿಗೆ ನೀಡಿರುವ ಕುರಿತು ಹೂಡಿಕೆ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಟ್ವೀಟ್ ಮಾಡಿದ್ದಾರೆ. 2021ರ ಮಾರ್ಚ್ 31ರವರೆಗಿನ ಮಾಹಿತಿಯ ಪ್ರಕಾರ, ಕಂಪನಿಯ ನಷ್ಟ ಮತ್ತು ಹೊಣೆಗಾರಿಕೆ ₹ 6,600 ಕೋಟಿ ದಾಟಿದೆ. ನಷ್ಟ ₹ 4,228 ಕೋಟಿ ಇದೆ.

ಮುಂದಿನ ವರ್ಷ ತಗ್ಗಲಿದೆ ಜಿಡಿಪಿ

ಒಂದನೇ ಪುಟದಿಂದ

ಕೋವಿಡ್ ಸಾಂಕ್ರಾಮಿಕದ ಪರಿಣಾಮವು ಅತ್ಯಂತ ಕಡಿಮೆ ಇದ್ದ ಕೃಷಿ ವಲಯವು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 3.9ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಹೇಳಲಾಗಿದೆ. ಆದರೆ, ಜಾಗತಿಕ ಮಟ್ಟದಲ್ಲಿ ಇಂಧನ ಬೆಲೆಯು ದುಬಾರಿ ಆಗಿರುವ ಕಾರಣ ಹಣದುಬ್ಬರ ಹೆಚ್ಚಳದ ಮೇಲೆ ದೇಶವು ಒಂದು ಕಣ್ಣು ಇರಿಸಬೇಕಾಗುತ್ತದೆ ಎಂದು ಕಿವಿಮಾತು ಹೇಳಿದೆ.

ದೇಶದ ಆರ್ಥಿಕ ಚಟುವಟಿಕೆಗಳ ಪಾಲಿನ ಬೆನ್ನೆಲುಬಿನಂತೆ ಇರುವ ಸೇವಾ ವಲಯದ ಬೆಳವಣಿಗೆ ವಿಚಾರವಾಗಿ ಆರ್ಥಿಕ ಸಮೀಕ್ಷೆಯು ಆಶಾಭಾವನೆಯನ್ನು ಹೊಂದಿದೆ. ಸಾಂಕ್ರಾಮಿಕದ ಕಾರಣದಿಂದಾಗಿ ದೊಡ್ಡ ಮಟ್ಟದ ನಷ್ಟಕ್ಕೆ ಗುರಿಯಾಗಿದ್ದ ಈ ವಲಯವು, ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 8.2ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅಂದಾಜಿಸಿದೆ. ಹಿಂದಿನ ವರ್ಷದಲ್ಲಿ ಈ ವಲಯವು ಶೇ (–)8.4ರಷ್ಟು ಕುಸಿತ ಕಂಡಿತ್ತು.

ಸಾರ್ವಜನಿಕರ ಕಡೆಯಿಂದ ಮಾರುಕಟ್ಟೆಯಲ್ಲಿ ಉತ್ಪನ್ನಗಳಿಗೆ ಹಾಗೂ ಸೇವೆಗಳಿಗೆ ಬರುವ ಬೇಡಿಕೆಯು ಗಣನೀಯವಾಗಿ ಹೆಚ್ಚಳ ಕಂಡಿದೆ ಎಂದು ಅಂದಾಜಿಸಲಾಗಿದೆ. ಸರ್ಕಾರದ ಕಡೆಯಿಂದ ಬರುವ ಬೇಡಿಕೆಗಳು ಶೇ 7.6ರ ಪ್ರಮಾಣದಲ್ಲಿ ಹೆಚ್ಚಳವಾಗಿ, ಕೋವಿಡ್ ಪೂರ್ವದ ಸ್ಥಿತಿಯನ್ನು ದಾಟಿವೆ ಎಂದು ವರದಿಯಲ್ಲಿ ಹೇಳಲಾಗಿದೆ. ಹೂಡಿಕೆಗಳು ಶೇ 15ರಷ್ಟು ಏರಿಕೆ ದಾಖಲಿಸಿ, ಕೋವಿಡ್ ಪೂರ್ವ ಸ್ಥಿತಿಯನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿಯೇ ತಲುಪುವ ಸಾಧ್ಯತೆ ಇದೆ ಎನ್ನಲಾಗಿದೆ.

2020–21ರಲ್ಲಿ ಜಿಡಿಪಿ ಬೆಳವಣಿಗೆ ಶೇ (–)6.6ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೇಶದ ಜಿಡಿಪಿಯು 2020–21ನೇ ಹಣಕಾಸು ವರ್ಷದಲ್ಲಿ ಶೇಕಡ (–)6.6ರಷ್ಟು ಕುಸಿತ ಕಂಡಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಸೋಮವಾರ ಮಾಹಿತಿ ನೀಡಿದೆ.

2021ರ ಮೇ ತಿಂಗಳಿನಲ್ಲಿ ತಾತ್ಕಾಲಿಕ ಅಂದಾಜು ಬಿಡುಗಡೆ ಮಾಡಿದ್ದಾಗ ಜಿಡಿಪಿಯು ಶೇ (–)7.3ರಷ್ಟು ಕುಸಿತ ಕಂಡಿದೆ ಎಂದು ಹೇಳಲಾಗಿತ್ತು.

ಸುದ್ದಿ 2 ನಿಮಿಷ

ಎಂಟು ಕೈಗಾರಿಕಾ ವಲಯಗಳ ಬೆಳವಣಿಗೆ ಶೇ 3.8ರಷ್ಟು

ನವದೆಹಲಿ (ಪಿಟಿಐ): ಮೂಲಸೌಕರ್ಯ ವಲಯದ ಪ್ರಮುಖ ಎಂಟು ಕೈಗಾರಿಕೆಗಳ ಬೆಳವಣಿಗೆಯು 2021ರ ಡಿಸೆಂಬರ್‌ನಲ್ಲಿ ಶೇ 3.8ರಷ್ಟಾಗಿದೆ. 2020ರ ಡಿಸೆಂಬರ್‌ನಲ್ಲಿ ಇದು ಶೇ 0.4ರಷ್ಟಿತ್ತು.

ಕಲ್ಲಿದ್ದಲು, ಸಿಮೆಂಟ್, ಸಂಸ್ಕರಣಾ ಉತ್ಪನ್ನಗಳ ಉತ್ತಮ ಬೆಳವಣಿಗೆಯಿಂದ ಈ ಪ್ರಗತಿ ಸಾಧ್ಯವಾಗಿದೆ.

ಈ ವಲಯಗಳ ಬೆಳವಣಿಗೆಯ ಅಂಕಿ-ಅಂಶವನ್ನು ಕೇಂದ್ರ ಸರ್ಕಾರ ಸೋಮವಾರ ಬಿಡುಗಡೆ ಮಾಡಿದೆ.

ಕಚ್ಚಾ ತೈಲ ಹೊರತುಪಡಿಸಿ, ಉಳಿದ ಎಲ್ಲ ವಲಯಗಳ ಬೆಳವಣಿಗೆಯು ಸಕಾರಾತ್ಮಕ ಮಟ್ಟದಲ್ಲಿದೆ. 2021ರ ನವೆಂಬರ್‌ನಲ್ಲಿ ಈ ವಲಯಗಳ ಬೆಳವಣಿಗೆಯು ಶೇ 3.4ರಷ್ಟಾಗಿತ್ತು.



ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಈ ವಲಯಗಳ ಬೆಳವಣಿಗೆಯು ಶೇ 12.6ರಷ್ಟಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬೆಳವಣಿಗೆಯು ಶೇ 9.8ರಷ್ಟಿತ್ತು.

ಕೈಗಾರಿಕಾ ಉತ್ಪಾದನೆ ಸೂಚ್ಯಂಕಕ್ಕೆ (ಐಐಪಿ) ಈ ಎಂಟು ವಲಯಗಳು ಶೇ 40.27ರಷ್ಟು ಕೊಡುಗೆ ನೀಡುತ್ತಿವೆ.

ಟಾಟಾ ಮೋಟರ್ಸ್‌ಗೆ ₹ 1,451 ಕೋಟಿ ನಷ್ಟ

ನವದೆಹಲಿ (ಪಿಟಿಐ): ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಟಾಟಾ ಮೋಟರ್ಸ್ ಕಂಪನಿಯ ನಿವ್ವಳ ನಷ್ಟವು ₹ 1,451 ಕೋಟಿ ಆಗಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹ 2,941 ಕೋಟಿ ನಿವ್ವಳ ಲಾಭ ದಾಖಲಿಸಿತ್ತು.

ಈ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಆದಾಯವು ₹ 72,229 ಕೋಟಿ ಆಗಿದೆ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 75,653 ಕೋಟಿ ನಿವ್ವಳ ಆದಾಯ ಹೊಂದಿತ್ತು.

ಮುಂಬೈ ಧಾರಣೆ

ಶೇಂಗಾ

31-1-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1350 (1340)
ಒಂದು ವಾರದ ಡೆಲಿವರಿ	1345 (1335)
ಸೋಯಾ ಕಚ್ಚಾ	1212 (1212)
ಪಾಮ್ ವಾರದ ಡೆಲಿವರಿ	1223 (1217)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1215)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,650 (47,900)
ಬೆಳ್ಳಿ ಕೆ.ಜಿ	61,100 (61,000)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	25019-31089
ಕೋಕ	18509-27019
ಫ್ಯಾಕ್ಟರಿ	13509-19169
ಹಳೆಚಾಲಿ	47609-49399
ಹೊಸಚಾಲಿ	36509-40700
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	21799-29099
ಚಾಲಿ	46899-47599
ಕೋಕ	21499-30482
ಹೊಸಚಾಲಿ	33099-41089
ಕೆಂಪುಗೋಟು	25699-33909
ರಾಶಿ	43899-47599
ತಟ್ಟಿಬೆಟ್ಟೆ	33369-46699
ಶಿರಸಿ	
ಬೆಟ್ಟೆ	37239-45699
ಬಿಳಿಗೋಟು	21099-32099
ಚಾಲಿ	32899-41039
ರಾಶಿ	39699-48009
ಯಲ್ಲಾಪುರ	
ಬಿಳಿಗೋಟು	26860-32399
ಕೋಕ	21769-28109
ಹಳೆಚಾಲಿ	46630-48280
ಹೊಸಚಾಲಿ	36599-41099
ಕೆಂಪುಗೋಟು	30036-37316
ರಾಶಿ	44319-52899
ತಟ್ಟಿಬೆಟ್ಟೆ	38509-43850
ರಾಮನಗರ ರೇಷ್ಮೆ	
ಮಿಶ್ರತಳಿ	400-781
ದ್ವಿತಳಿ	512-950

ಮೂಡಿಗೆರೆ ಕಾಫಿ (50 ಕೆ.ಜಿಗೆ)

	ಮುದ್ರೆಮನೆ
ಎಪಿ	15600
ಎಸಿ	7310
ಆರ್‌ಪಿ	7200
ಆರ್‌ಸಿ	4000

ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ: ಭಾರತೀಯ ಮೂಲದ ವ್ಯಕ್ತಿಗೆ ಜೈಲು

ನ್ಯೂಯಾರ್ಕ್ (ಪಿಟಿಐ): ವಿಮಾನದಲ್ಲಿ ತನ್ನ ಪಕ್ಕ ಕುಳಿತಿದ್ದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಭಾರತೀಯ ಮೂಲದ 41 ವರ್ಷದ ವ್ಯಕ್ತಿಯೊಬ್ಬರಿಗೆ 15 ತಿಂಗಳ ಕಾಲ ಜೈಲು ಶಿಕ್ಷೆ ವಿಧಿಸಲಾಗಿದೆ.

ಬೋಸ್ಟನ್‌ನಿಂದ ಮಿನ್ನಿಯಾಪೊಲೀಸ್‌ಗೆ ತೆರಳುತ್ತಿದ್ದ ವಿಮಾನವೊಂದರಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ ನೀರಜ್ ಚೋಪ್ರಾಗೆ ಜಿಲ್ಲಾ ನ್ಯಾಯಾಧೀಶ ನ್ಯಾನ್ಸಿ ಇ.ಬ್ರಸೆಲ್ ಸೆರೆವಾಸ ವಿಧಿಸಿದ್ದಾರೆ ಎಂದು ಅಮೆರಿಕದ ನ್ಯಾಯಾಂಗ ಇಲಾಖೆಯು ಹೇಳಿಕೆಯೊಂದರಲ್ಲಿ ತಿಳಿಸಿದೆ.

ಮೂರು ದಿನಗಳ ವಿಚಾರಣೆಯ ನಂತರ ಕಳೆದ ವರ್ಷ ಜುಲೈನಲ್ಲಿ ನೀರಜ್ ಅನ್ನು ಅಪರಾಧಿ ಎಂದು ಘೋಷಿಸಲಾಗಿತ್ತು.

2019ರ ಏಪ್ರಿಲ್‌ನಲ್ಲಿ ಬೋಸ್ಟನ್‌ನಿಂದ ಮಿನ್ನಿಯಾಪೊಲೀಸ್‌ಗೆ ತೆರಳುತ್ತಿದ್ದ ಬ್ಲ್ಯೂ ಜೆಟ್ ವಿಮಾನದಲ್ಲಿ ಚೋಪ್ರಾ ತನ್ನ ಪಕ್ಕ ಕುಳಿತಿದ್ದ 16 ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ನ್ಯಾಯಾಲಯದ ದಾಖಲೆಗಳಿಂದ ಗೊತ್ತಾಗಿದೆ.

ತಾಲಿಬಾನಿಗಳಿಂದ 100ಕ್ಕೂ ಹೆಚ್ಚು ಅಧಿಕಾರಿಗಳ ಹತ್ಯೆ: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಎಎಫ್‌ಪಿ): ತಾಲಿಬಾನ್ ಮತ್ತು ಅದರ ಮೈತ್ರಿ ಪಡೆಗಳು ಅಫ್ಗಾನಿಸ್ತಾನದ ಹಿಂದಿನ ಸರ್ಕಾರದಲ್ಲಿ ಕಾರ್ಯನಿರ್ವಹಿಸಿದ್ದ ಅಧಿಕಾರಿಗಳು, ಭದ್ರತಾ ಸಿಬ್ಬಂದಿ, ಅಂತರರಾಷ್ಟ್ರೀಯ ಪಡೆಗಳಲ್ಲಿ ಕೆಲಸ ಮಾಡಿದವರೂ ಸೇರಿದಂತೆ 100ಕ್ಕೂ ಹೆಚ್ಚು ಮಂದಿಯನ್ನು ಹತ್ಯೆ ಮಾಡಿವೆ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ.

ಅಫ್ಗಾನಿಸ್ತಾನದಲ್ಲಿ ಹೊಸ ಮೂಲಭೂತವಾದಿ ಆಡಳಿತಗಾರರಿಂದ ಮಾನವಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ರಾಜಕೀಯ ಹತ್ಯೆಗಳು ಹೆಚ್ಚಾಗಿವೆ. ಮಹಿಳೆಯರ ಹಕ್ಕುಗಳು, ಪ್ರತಿಭಟನೆಯ ಹಕ್ಕುಗಳು ಮೊಟಕುಗೊಂಡಿವೆ ಎಂದು ವರದಿ ತಿಳಿಸಿದೆ.

‘ಹಿಂದಿನ ಸರ್ಕಾರದಲ್ಲಿ, ಭದ್ರತಾಪಡೆಗಳಲ್ಲಿ ಹಾಗೂ ಅಂತರರಾಷ್ಟ್ರೀಯ ಸೇನಾ ಪಡೆಗಳಲ್ಲಿ ಕೆಲಸ ಮಾಡಿದವರಿಗೆ ಕ್ಷಮಾದಾನ ನೀಡಿರುವುದಾಗಿ ತಾಲಿಬಾನ್ ಘೋಷಿಸಿತ್ತು. ಆದಾಗ್ಯೂ ಹತ್ಯೆ ಆರೋಪ, ಕಣ್ಮರೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ವರದಿಯಾಗುತ್ತಲೇ ‘ಇವೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಉಲ್ಲೇಖಿಸಿದೆ.

100ಕ್ಕೂ ಹೆಚ್ಚು ಹತ್ಯೆಗಳಾಗಿರುವ ಬಗ್ಗೆ ವಿಶ್ವಾಸಾರ್ಹ ಮೂಲಗಳಿಂದಲೇ ಮಾಹಿತಿ ದೊರೆತಿದೆ. ಈ ಪೈಕಿ ಮೂರನೇ ಎರಡರಷ್ಟು ಅಧಿಕಾರಿಗಳು ಅಥವಾ ಅವರ ಅಧೀನದಲ್ಲಿರುವ ಸಂಸ್ಥೆಗಳು ಮಾಡಿಸಿದ ಹತ್ಯೆಗಳಾಗಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ನಿರಾಕರಣೆ: ವೈಯಕ್ತಿಕ ದ್ವೇಷದಿಂದ ಈ ಹತ್ಯೆಗಳು ನಡೆದಿವೆ. ಇದಕ್ಕೆ ಅಧಿಕಾರಿಗಳು ಹೊಣೆಯಲ್ಲ, ಆದರೂ ಬಗ್ಗೆ ತನಿಖೆ ನಡೆಸಲಾಗುವುದು ಎಂದು ತಾಲಿಬಾನ್ ಆಡಳಿತದ ಅಧಿಕಾರಿಗಳು ತಿಳಿಸಿದ್ದಾರೆ.

ಕ್ಷಮಾಧಾನ ನೀಡುವುದಾಗಿ ಘೋಷಿಸಿದ ಬಳಿಕ ಯಾವುದೇ ಸಿಬ್ಬಂದಿ ಅಥವಾ ಅಧಿಕಾರಿಯನ್ನು ಹತ್ಯೆ ಮಾಡಿಲ್ಲ ಎಂದು ಗೃಹ ಸಚಿವಾಲಯ ಟ್ವೀಟ್ ಮೂಲಕ ಸ್ಪಷ್ಟನೆ ನೀಡಿದೆ.

ಸಂಕ್ಷಿಪ್ತ ಸುದ್ದಿ

ಹೂತಿ ಭಯೋತ್ಪಾದಕರ ಕ್ಷಿಪಣಿ ಧ್ವಂಸಗೊಳಿಸಿದ ಯುಎಇ

ದುಬೈ(ಪಿಟಿಐ): ಯೆಮನ್‌ನ ಹೂತಿ ಭಯೋತ್ಪಾದಕರ ಗುಂಪು ತನ್ನತ್ತ ಹಾರಿಸಿದ ಖಂಡಾಂತರ ಕ್ಷಿಪಣಿಯೊಂದನ್ನು ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ರಕ್ಷಣಾ ಪಡೆಗಳು ತಡೆದು ಹೊಡೆದುರುಳಿಸಿವೆ ಎಂದು ರಕ್ಷಣಾ ಸಚಿವಾಲಯ ಸೋಮವಾರ ತಿಳಿಸಿದೆ. ಇಸ್ರೇಲ್‌ನ ಅಧ್ಯಕ್ಷ ಐಸಾಕ್ ಹೆರ್ಜಾಗ್ ಅವರ ಐತಿಹಾಸಿಕ ಭೇಟಿಯ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಕ್ಷಿಪಣಿ ದಾಳಿಯಿಂದ ಯಾವುದೇ ಸಾವು ನೋವು ಸಂಭವಿಸಿಲ್ಲ. ಕ್ಷಿಪಣಿಯ ತುಣುಕುಗಳು ವಸತಿ ಪ್ರದೇಶದ ಹೊರಗೆ ಬಿದ್ದಿವೆ.

ಯೆಮನ್‌ನ ಅಲ್ ಜಾಫ್‌ನಲ್ಲಿ ಕ್ಷಿಪಣಿಯನ್ನು ರಾತ್ರಿ 12.50ಕ್ಕೆ (ಸ್ಥಳೀಯ ಕಾಲಮಾನ) ನಾಶಪಡಿಸಲಾಯಿತು ಎಂದು ರಕ್ಷಣಾ ಸಚಿವಾಲಯ ಟ್ವೀಟ್ ಮಾಡಿದ್ದು ನಾಶಪಡಿಸುತ್ತಿರುವ ವಿಡಿಯೊವನ್ನು ಸಹ ಹಂಚಿಕೊಂಡಿದೆ.

‘ಗುವಾಮ್ ತಲುಪುವ ಸಾಮರ್ಥ್ಯ ಕ್ಷಿಪಣಿಗಿದೆ’

ಸೋಲ್ (ಎಪಿ): ತಾನು ಪರೀಕ್ಷಿಸಿರುವ ಖಂಡಾಂತರ ಕ್ಷಿಪಣಿಯು ಶಕ್ತಿಶಾಲಿಯಾಗಿದ್ದು, ಇದು ಅಮೆರಿಕದ ಗುವಾಮ್ ಪ್ರದೇಶವನ್ನು ತಲುಪುವ ಸಾಮರ್ಥ್ಯ ಹೊಂದಿದೆ ಎಂದು ಉತ್ತರ ಕೊರಿಯಾ ಸೋಮವಾರ ತಿಳಿಸಿದೆ.

ಉತ್ತರ ಕೊರಿಯಾ ಭಾನುವಾರ ಕ್ಷಿಪಣಿಯೊಂದನ್ನು ಪರೀಕ್ಷಿಸಿದ್ದು, ಇದು ಇತ್ತೀಚಿನ ವರ್ಷಗಳಲ್ಲಿ ಆ ದೇಶವು ಪರೀಕ್ಷಿಸಿದ ಅತ್ಯಂತ ಶಕ್ತಿಶಾಲಿ ಕ್ಷಿಪಣಿ ಎಂದು ತಜ್ಞರು ಅಂದಾಜಿಸಿದ್ದಾರೆ. ಭಾನುವಾರ ನಡೆಸಿರುವ ಕ್ಷಿಪಣಿ ಪರೀಕ್ಷೆ ಬಳಿಕ ಉತ್ತರ ಕೊರಿಯಾ ಮೇಲೆ ಹೊಸ ನಿರ್ಬಂಧಗಳನ್ನು ವಿಧಿಸಿದರೆ ಅದು ಇನ್ನಷ್ಟು ದೊಡ್ಡ ಪರೀಕ್ಷೆಗಳನ್ನು ನಡೆಸಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮಾಜಿ ಮಿಸ್ ಅಮೆರಿಕ ಕಟ್ಟಡದಿಂದ ಜಿಗಿದು ಆತ್ಮಹತ್ಯೆ

ನ್ಯೂಯಾರ್ಕ್: ಮಾಜಿ ಮಿಸ್ ಅಮೆರಿಕ ಚೆಸ್ಲಿ ಕ್ರಿಸ್ಟ್ (30) ಅವರು ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಚೆಸ್ಲಿ ಕ್ರಿಸ್ಟ್

ನ್ಯೂಯಾರ್ಕ್‌ನ ಮ್ಯಾನ್‌ಹ್ಯಾಟನ್ ಪ್ರದೇಶದ ಕಟ್ಟಡವೊಂದರಿಂದ ಜಿಗಿದು ಚೆಸ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲವಾದರೂ ಜೀವನದಲ್ಲಿ ಜಿಗುಪ್ಸೆಗೊಂಡಿದ್ದರು ಎಂದು ಕುಟುಂಬದವರು ತಿಳಿಸಿರುವುದಾಗಿ ಪೊಲೀಸರು ಹೇಳಿದ್ದಾರೆ.

30 ವರ್ಷದ ಈ ಮಾಡೆಲ್ 2019ರಲ್ಲಿ ಮಿಸ್ ಯುಎಸ್‌ಎ ಆಗಿ ಆಯ್ಕೆಯಾಗಿದ್ದರು. ‘ಚೆಸ್ಲಿ ನಿಧನದಿಂದ ನಮಗೆ ತೀವ್ರ ಆಘಾತವಾಗಿದೆ’ ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ. ಚೆಸ್ಲಿ ಅವರು ಅಮೆರಿಕದ ಟಿ.ವಿಯೊಂದರ ಮನರಂಜನಾ ಕಾರ್ಯಕ್ರಮ ಎಕ್ಸ್‌ಟ್ರಾದ ನಿರೂಪಕಿಯಾಗಿ ಗಮನ ಸೆಳೆದಿದ್ದರು.



ಮಾಧ್ಯಮ ಪ್ರತಿನಿಧಿಗಳಿಗಾಗಿ ಸೋಮವಾರ ಆಯೋಜಿಸಿದ್ದ ಫೋಟೊ ಶೂಟ್‌ನಲ್ಲಿ ಪ್ರಶಸ್ತಿಯೊಂದಿಗೆ ರಫೆಲ್ ನಡಾಲ್



ಮೆಲ್ಬರ್ನ್‌ನಲ್ಲಿ ಪ್ರಶಸ್ತಿಯೊಂದಿಗೆ ಆ್ಯಶ್ಲಿ ಬಾರ್ಟಿ – ಎಎಫ್‌ಪಿ ಚಿತ್ರಗಳು

ಜೊಕೊವಿಚ್ ಪ್ರಕರಣದಿಂದ ವಿವಾದದ ರೂಪ ಪಡೆದುಕೊಂಡಿದ್ದ ಆಸ್ಟ್ರೇಲಿಯನ್ ಓಪನ್ ಟೂರ್ನಿ

ಮೆರುಗು ತುಂಬಿದ ನಡಾಲ್, ಬಾರ್ಟಿ

ಮೆಲ್ಬರ್ನ್ (ಎಎಫ್‌ಪಿ): ನೊವಾಕ್ ಜೊಕೊವಿಚ್ ಅವರ ಲಸಿಕೆ ಮತ್ತು ವೀಸಾ ಪ್ರಕರಣದ ಮೂಲಕ ವಿವಾದದ ಜೊತೆಯಲ್ಲಿ ಆರಂಭಗೊಂಡ ಈ ಬಾರಿಯ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಗೆ ರಫೆಲ್ ನಡಾಲ್ ಮತ್ತು ಆ್ಯಶ್ಲಿ ಬಾರ್ಟಿ, ಅಮೋಘ ಸಾಧನೆಯ ಮೂಲಕ ಕಳೆ ತುಂಬಿದ್ದಾರೆ. ಈ ವಿಷಯದ ಸುತ್ತ ಈಗ ಟೆನಿಸ್ ಜಗತ್ತಿನಲ್ಲಿ ಚರ್ಚೆ ನಡೆಯುತ್ತಿದೆ.

ಭಾನುವಾರ ಕೊನೆಗೊಂಡ ಟೂರ್ನಿಯ ಪುರುಷರ ವಿಭಾಗದಲ್ಲಿ ಸ್ಪೇನ್‌ನ ರಫೆಲ್ ನಡಾಲ್ ಪ್ರಶಸ್ತಿ ಗೆಲ್ಲುವುದರೊಂದಿಗೆ 21 ಗ್ರ್ಯಾನ್ ಸ್ಲಾಂ ಚಾಂಪಿಯನ್ ಪಟ್ಟ ಅಲಂಕರಿಸಿದ ಮೊದಲ ಆಟಗಾರ ಎನಿಸಿದ್ದರು. ಮಹಿಳಾ ವಿಭಾಗದ ಪ್ರಶಸ್ತಿ ಗೆದ್ದ ಬಾರ್ಟಿ 44 ವರ್ಷಗಳ ಬಳಿಕ ಈ ಸಾಧನೆ ಮಾಡಿದ ಆಸ್ಟ್ರೇಲಿಯಾದ ಮೊದಲ ಆಟಗಾರ್ತಿ ಎನಿಸಿಕೊಂಡಿದ್ದರು. ಸ್ಥಳೀಯ ಆಟಗಾರರಾದ ನಿಕ್ ಕಿರ್ಗಿಯೋಸ್ ಮತ್ತು ತನಸಿ ಕೊಕಿನಕಿಸ್ ಪುರುಷರ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದಿದ್ದರು.

ಕೋವಿಡ್–19ರ ಲಸಿಕೆ ಹಾಕಿಸಿಕೊಳ್ಳದೆ ದೇಶ ಪ್ರವೇಶಿಸಿದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರನ್ನು ವಶಕ್ಕೆ ಪಡೆದುಕೊಂಡು ಹೋಟೆಲ್‌ನಲ್ಲಿ ಇರಿಸಿದ್ದ ಆಸ್ಟ್ರೇಲಿಯಾದ ಅಧಿಕಾರಿಗಳು ಅವರ ವೀಸಾವನ್ನು ರದ್ದುಗೊಳಿಸಿದ್ದರು. ಜೊಕೊವಿಚ್ ನ್ಯಾಯಾಲಯದ ಮೊರೆಹೋಗಿದ್ದರು. ಅವರನ್ನು ಬಿಡುಗಡೆ ಮಾಡುವಂತೆ ನ್ಯಾಯಾಲಯ ಸೂಚಿಸಿದಾಗ ಆಸ್ಟ್ರೇಲಿಯನ್ ಓಪನ್‌ನಲ್ಲಿ ಆಡುವರು ಎಂಬ ನಿರೀಕ್ಷೆ ಮೂಡಿತ್ತು. ಆದರೆ ಆಸ್ಟ್ರೇಲಿಯಾ ಸರ್ಕಾರ ಮತ್ತೊಮ್ಮೆ ವೀಸಾ ರದ್ದು ಮಾಡಿ ಅವರನ್ನು ಹೊರಗಟ್ಟಿತ್ತು.ಟೂರ್ನಿ ಆರಂಭವಾಗುವ ಹಿಂದಿನ ದಿನ ಜೊಕೊವಿಚ್ ತಮ್ಮೂರಿಗೆ ಮರಳಿದ್ದರು. ಅವರನ್ನು ಹೋಟೆಲ್‌ನಲ್ಲಿ ಇರಿಸಿದ್ದ ಸಂದರ್ಭಲ್ಲಿ ಸರ್ಬಿಯಾದಲ್ಲೂ ಆಸ್ಟ್ರೇಲಿಯಾದಲ್ಲೂ ಅಭಿಮಾನಿಗಳು ಪ್ರತಿಭಟನೆ ನಡೆಸಿದ್ದರು. ಈ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ಟೂರ್ನಿ ಸುಗಮವಾಗಿ ನಡೆಯುವ ಬಗ್ಗೆ ಆಯೋಜಕರಿಗೆ ಭರವಸೆ ಇರಲಿಲ್ಲ.

ಚೀನಾದ ಟೆನಿಸ್ ಪಟು ಪೆಂಗ್ ಶುಯಿ ಮೇಲಿನ ಕಾಳಜಿ ಪ್ರದರ್ಶಿಸಲು ಅವಕಾಶ ಇಲ್ಲ ಎಂದು ಹೇಳುವ ಮೂಲಕ ಆಯೋಜಕರು ಮತ್ತೊಂದು ಸಮಸ್ಯೆಯನ್ನು ತಮ್ಮತ್ತ ಎಳೆದುಕೊಂಡಿದ್ದರು. ಪೆಂಗ್ 'ಶುಯಿ ಎಲ್ಲಿ' ಎಂಬ ಬರಹ ಇರುವ ಟಿ–ಶರ್ಟ್ ಧರಿಸಿಕೊಂಡು ಬಂದರೆ ಪ್ರೇಕ್ಷಕರನ್ನು ಒಳಬಿಡಬಾರದು ಎಂದು ತಾಕೀತು ಮಾಡಿದ್ದರು.

ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವ ವಿಷಯದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡ ಕಾರಣ ದಿಂದಲೂ ಆಯೋಜಕರ ಮೇಲೆ ಆರೋಪಗಳು ಕೇಳಿಬಂದಿದ್ದವು.

ಅಲೆಕ್ಸಾಂಡರ್ ಜ್ವೆರೆವ್ ಕೂಡ ಬೇಸರ ವ್ಯಕ್ತಪಡಿಸಿದ್ದರು. ಕೋವಿಡ್ ಪ್ರಕರಣಗಳು ಕಾಣಿಸಿಕೊಳ್ಳಲಿಲ್ಲ ಎಂಬುದು ಕೂಡ ಆಯೋಜಕರಲ್ಲಿ ಸಮಾಧಾನ ಮೂಡಿಸಿದೆ.

ಚಾಂಪಿಯನ್‌ಗೆ ಫೆಡರರ್, ನೊವಾಕ್, ಪೇಸ್ ಅಭಿನಂದನೆ

ಪ್ಯಾರಿಸ್ (ಎಎಫ್‌ಪಿ): ದಾಖಲೆಯ ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಗೆದ್ದುಕೊಂಡ ರಫೆಲ್ ನಡಾಲ್ ಅವರನ್ನು ತಲಾ 20 ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗಳಿಸಿರುವ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ ಅಭಿನಂದಿಸಿದ್ದಾರೆ. ಭಾನುವಾರ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ ರಫೆಲ್ ನಡಾಲ್ 2-6, 6-7 (5/7), 6-4, 6-4, 7-5ರಲ್ಲಿ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಅವರನ್ನು ಮಣಿಸಿದ್ದರು.

'ನನ್ನ ಗೆಳೆಯನೂ ಅತ್ಯುತ್ತಮ ಪ್ರತಿಸ್ಪರ್ಧಿಯೂ ಆಗಿರುವ ನಡಾಲ್‌ಗೆ ಹೃದಯಾಂತರಾಳದ ಅಭಿನಂದನೆಗಳು' ಎಂದು 40 ವರ್ಷದ ಫೆಡರರ್ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಇದು ಶ್ರೇಷ್ಠ ಸಾಧನೆ. ಅವರೊಬ್ಬ ದಿಟ್ಟ ಹೋರಾಟಗಾರ ಎಂಬುದು ಮತ್ತೊಮ್ಮೆ ಸಾಬೀತಾಗಿದೆ' ಎಂದು ಜೊಕೊವಿಚ್ ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಟೆನಿಸ್ ದಿಗ್ಗಜ ಲಿಯಾಂಡರ್ ಪೇಸ್ ಅವರು 'ಚೆನ್ನಾಗಿ ಆಡಿದಿರಿ ರಫಾ! ದಾಖಲೆಗೆ ಅಭಿನಂದನೆಗಳು. ತುದಿಗಾಲ ಮೇಲೆ ನಿಲ್ಲಿಸಿದ ಪಂದ್ಯವದು. ಖುಷಿ ಆಯ್ತು' ಎಂದು ಬರೆದು ನಡಾಲ್ ಅವರೊಂದಿಗಿರುವ ಚಿತ್ರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ರ‍್ಯಾಂಕಿಂಗ್: ಅಗ್ರಸ್ಥಾನದಲ್ಲಿ ಉಳಿದ ಜೊಕೊವಿಚ್, ಬಾರ್ಟಿ

ಪ್ಯಾರಿಸ್ (ಎಎಫ್‌ಪಿ): ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಆಡಲು ಅವಕಾಶ ಸಿಗದೇ ಇದ್ದರೂ ಸರ್ಬಿಯಾದ ನೊವಾಕ್ ಜೊಕೊವಿಚ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ ಸ್ಥಾನ ಉಳಿಸಿಕೊಂಡಿದ್ದಾರೆ. ಆಸ್ಟ್ರೇಲಿಯನ್ ಓಪನ್‌ನ ಚಾಂಪಿಯನ್ ಆ್ಯಶ್ಲಿ ಬಾರ್ಟಿ ಮಹಿಳೆಯರ ವಿಭಾಗದಲ್ಲಿ ಅಗ್ರ ಸ್ಥಾನದಲ್ಲೇ ಮುಂದುವರಿದಿದ್ದಾರೆ. ಆಸ್ಟ್ರೇಲಿಯನ್ ಓಪನ್‌ನ ಪುರುಷರ ವಿಭಾಗದ ಪ್ರಶಸ್ತಿ ವಿಜೇತ ರಫೆಲ್ ನಡಾಲ್ ಐದನೇ ಸ್ಥನದಲ್ಲಿ ಮುಂದುವರಿದಿದ್ದು ಅವರ ವಿರುದ್ಧ ಸೆಮಿಫೈನಲ್‌ನಲ್ಲಿ ಸೋತ ಇಟಲಿಯ ಮಟಿಯೊ ಬೆರೆಟಿನಿ ಒಂದು ಸ್ಥಾನದ ಏರಿಕೆಯೊಂದಿಗೆ ಆರನೇ ಸ್ಥಾನದಲ್ಲಿದ್ದಾರೆ. ಸ್ಪೇನ್‌ನ ಪ್ಯಾಬ್ಲೊ ಕರೆನೊ ಅಗ್ರ 20ರೊಳಗೆ ಪ್ರವೇಶಿಸಿದ್ದು 17ನೇ ಸ್ಥಾನಗಳಲ್ಲಿದ್ದಾರೆ.

ಅಗ್ರ 5ರೊಳಗಿನವರು: ಪುರುಷರು: ನೊವಾಕ್ ಜೊಕೊವಿಚ್ (ಸರ್ಬಿಯಾ)–1, ಡ್ಯಾನಿಲ್ ಮೆಡ್ವೆಡೆವ್ (ರಷ್ಯಾ)–2, ಅಲೆಕ್ಸಾಂಡರ್ ಜ್ವೆರೆವ್ (ಜರ್ಮನಿ)–3, ಸ್ಟೆಫನೊಸ್ ಸಿಟ್ಸಿಪಾಸ್ (ಗ್ರೀಸ್)–4, ರಫೆಲ್ ನಡಾಲ್ (ಸ್ಪೇನ್)–5.

ಮಹಿಳೆಯರ ವಿಭಾಗ: ಆ್ಯಶ್ಲಿ ಬಾರ್ಟಿ (ಆಸ್ಟ್ರೇಲಿಯಾ)–1, ಅರಿನಾ ಸಬಲೆಂಕ (ಬೆಲಾರಸ್)–2, ಬಾರ್ಬೊರಾ ಕ್ರೆಜಿಕೋವ (ಜೆಕ್ ಗಣರಾಜ್ಯ)–3, ಇಗಾ ಸ್ವಾಟೆಕ್ (ಪೋಲೆಂಡ್)–4, ಕರೊಲಿನ ಪ್ಲಿಸ್ಕೋವ (ಜೆಕ್ ಗಣರಾಜ್ಯ)–5.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ 16ರಂದು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳ ಬಿಡುವಿನ ನಂತರ ನಡೆಯಲಿರುವ ರಣಜಿ ಟೂರ್ನಿಯ ಪಂದ್ಯಗಳು ಫೆಬ್ರುವರಿ 16ರಂದು ಆರಂಭಗೊಳ್ಳಲಿವೆ. ಟೂರ್ನಿಯ ಪರಿಷ್ಕೃತ ವೇಳಾಪಟ್ಟಿಯನ್ನು ಬಿಸಿಸಿಐ ಸೋಮವಾರ ಬಿಡುಗಡೆ ಮಾಡಿದ್ದು ಮಾರ್ಚ್ ಐದರ ವರೆಗೆ ಪಂದ್ಯಗಳು ನಡೆಯಲಿವೆ ಎಂದು ತಿಳಿಸಿದೆ.

ದೇಶಿ ಕ್ರಿಕೆಟ್‌ನ ರಾಜ ಎಂದೇ ಹೇಳಲಾಗುವ ರಣಜಿ ಟೂರ್ನಿಯ ಈ ಬಾರಿಯ ಪಂದ್ಯಗಳನ್ನು ಜನವರಿ 13ರಂದು ಆರಂಭಿಸಲು ನಿರ್ಧರಿಸಲಾಗಿತ್ತು. ಆದರೆ ಕೋವಿಡ್–19ರ ಪ್ರಕರಣಗಳು ಹೆಚ್ಚುತ್ತಿದ್ದ ಕಾರಣ ಟೂರ್ನಿಯನ್ನು ಮುಂದೂಡಲು ನಿರ್ಧರಿಸಲಾಗಿತ್ತು.

ಹೊಸ ವೇಳಾಪಟ್ಟಿ ಪ್ರಕಾರ ಪಂದ್ಯಗಳು ಬೆಂಗಳೂರು, ಅಹಮದಾಬಾದ್, ಕೋಲ್ಕತ್ತ, ತಿರುವನಂತಪುರ, ಕಟಕ್, ಚೆನ್ನೈ, ಗುವಾಹಟಿ, ಹೈದರಾಬಾದ್ ಮತ್ತು ರಾಜ್‌ಕೋಟ್‌ನಲ್ಲಿ ಪಂದ್ಯಗಳನ್ನು ಆಯೋಜಿಸುವ ಸಾಧ್ಯತೆ ಇದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಟೂರ್ನಿಯಲ್ಲಿ 38 ತಂಡಗಳು



ರಣಜಿ ಟ್ರೋಫಿ

ಪಾಲ್ಗೊಳ್ಳಲಿವೆ. ತಲಾ ನಾಲ್ಕು ತಂಡಗಳ ಎಂಟು ಗುಂಪುಗಳು ಇರಲಿವೆ. ಪ್ಲೇಟ್ ಗುಂಪಿನಲ್ಲಿ ಆರು ತಂಡಗಳು ಇರಲಿವೆ. ಮೊದಲು ನಿಗದಿ ಮಾಡಿದ ವೇಳಾಪಟ್ಟಿ ಪ್ರಕಾರ ಪ್ರತಿ ತಂಡಕ್ಕೆ ಗುಂಪು ಹಂತದಲ್ಲಿ ಐದು ಪಂದ್ಯಗಳು ಸಿಗುವ ಸಾಧ್ಯತೆ ಇತ್ತು. ಇದನ್ನು ಪರಿಷ್ಕರಿಸಲಾಗಿದ್ದು ಈಗ ಮೂರು ಪಂದ್ಯಗಳನ್ನಷ್ಟೇ ಆಡಲು ಸಾಧ್ಯ. ಫೆಬ್ರುವರಿ 16ರಿಂದ 19ರ ವರೆಗೆ ಮೊದಲ ಸುತ್ತು, 23ರಿಂದ 26ರ ವರೆಗೆ ಎರಡನೇ ಸುತ್ತು ಮತ್ತು ಮಾರ್ಚ್ 2ರಿಂದ 5ರ ವರೆಗೆ ಮೂರನೇ ಸುತ್ತಿನ ಪಂದ್ಯಗಳು ನಡೆಯಲಿವೆ. ಫೆಬ್ರುವರಿ ಎರಡನೇ ವಾರದಲ್ಲಿ ತಂಡಗಳು ಬಯೊಬಬಲ್ ಪ್ರವೇಶಿಸಬೇಕಾಗಿದೆ. ಅಹಮದಾಬಾದ್‌ನಲ್ಲಿ ಸೋಮವಾರ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಕರ್ನಾಟಕ ತಂಡವು ರೈಲ್ವೇಸ್, ಜಮ್ಮು ಮತ್ತು ಕಾಶ್ಮೀರ ಹಾಗೂ ಪುದುಚೇರಿ ಎದುರು ಗುಂಪು ಹಂತದಲ್ಲಿ ಸೆಣಸಲಿದ್ದು ಎಲ್ಲ ಪಂದ್ಯಗಳನ್ನು ಚೆನ್ನೈನಲ್ಲಿ ಆಡಲಿದೆ.

ಶ್ರೀಜೇಶ್‌ಗೆ 'ವಿಶ್ವ ಗೇಮ್ಸ್ ವರ್ಷದ ಅಥ್ಲೀಟ್' ಗೌರವ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಅನುಭವಿ ಗೋಲ್‌ಕೀಪರ್ ಪಿ. ಆರ್. ಶ್ರೀಜೇಶ್ ಅವರಿಗೆ ಪ್ರತಿಷ್ಠಿತ 'ವಿಶ್ವ ಗೇಮ್ಸ್ ವರ್ಷದ ಅಥ್ಲೀಟ್' ಗೌರವ ಸಂದಿದೆ. ಅವರು ಈ ಪುರಸ್ಕಾರ ಪಡೆದ ಭಾರತದ ಎರಡನೇ ಕ್ರೀಡಾಪಟು ಎನಿಸಿದ್ದಾರೆ.



ಪಿ.ಆರ್.ಶ್ರೀಜೇಶ್

2021ರಲ್ಲಿ ಶ್ರೀಜೇಶ್ ಅವರು ತೋರಿದ ಸಾಧನೆಯನ್ನು ಪರಿಗಣಿಸಿ ಈ ಗೌರವ ನೀಡಲಾಗಿದೆ. 2020ರಲ್ಲಿ ಭಾರತ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಈ ಗೌರವಕ್ಕೆ ಭಾಜನರಾಗಿದ್ದರು.

ಶ್ರೀಜೇಶ್, ಸ್ಪೇನ್‌ನ ಪರ್ವತಾರೋಹಿ ಅಲ್ಬರ್ಟೊ ಗಿನೆಸ್ ಲೋಪೇಜ್ ಮತ್ತು ಇಟಲಿಯ ವುಷು ಪಟು ಮಿಚೆಲೆ ಜಿಯೊರ್ಡಾನೊ ಅವರನ್ನು ಹಿಂದಿಕ್ಕಿ ಈ ಪುರಸ್ಕಾರ ಗಳಿಸಿದ್ದಾರೆ.

ಭಾರತ ಹಾಕಿ ತಂಡದ ಮಾಜಿ ನಾಯಕ ಮತ್ತು ಟೋಕಿಯೊ ಒಲಿಂಪಿಕ್ಸ್‌-ಕಂಚಿನ ಪದಕ ವಿಜೇತ ತಂಡದ ಭಾಗವಾಗಿರುವ ಶ್ರೀಜೇಶ್ ಅವರು 2012ರ ಲಂಡನ್ ಒಲಿಂಪಿಕ್ಸ್ ಮತ್ತು ನಂತರ 2014ರ ವಿಶ್ವಕಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ಮಹಿಳಾ ಹಾಕಿ: ಭಾರತ ಜಯಭೇರಿ

ಮಸ್ಕತ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ. ಸೋಮವಾರ ನಡೆದ ಪಂದ್ಯದಲ್ಲಿ ಚೀನಾ ತಂಡವನ್ನು 7–1 ಗೋಲುಗಳಿಂದ ಸೋಲಿಸಿತು.

ಭಾರತದ ಪರ ಸುಶೀಲಾ ಚಾನು (47, 52ನೇ ನಿಮಿಷ), ನವನೀತ್ ಕೌರ್ (5ನೇ ನಿ.), ನೇಹಾ (12ನೇ ನಿ.), ವಂದನಾ ಕಟಾರಿಯಾ (40ನೇ ನಿ.), ಶರ್ಮಿಳಾ ದೇವಿ (48ನೇ ನಿ.) ಹಾಗೂ ಗುರ್ಜಿತ್ ಕೌರ್ (50ನೇ ನಿ.) ಗೋಲು ದಾಖಲಿಸಿದರು. ಚೀನಾ ತಂಡದ ಜು ಡೆಂಗ್ 43ನೇ ನಿಮಿಷದಲ್ಲಿ ಏಕೈಕ ಗೋಲು ಹೊಡೆದರು.

ಕಬಡ್ಡಿ: ಗುಜರಾತ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಡರ್ ಜೋಡಿ ಅಜಯ್ ಕುಮಾರ್ ಮತ್ತು ಪ್ರದೀಪ್ ಕುಮಾರ್ ಅವರು ಮಿಂಚಿನ ಆಟವಾಡಿದರು. ಅಜಯ್ ಅವರ 'ಸೂಪರ್ ಟೆನ್' ಮತ್ತು ಪ್ರದೀಪ್ ಆಲ್‌ರೌಂಡ್ ಆಟದ ನೆರವಿನಿಂದ ಗುಜರಾತ್ ಜೈಂಟ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಸೋಮವಾರ ಗೆಲುವು ದಾಖಲಿಸಿತು.

ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನಲ್ಲಿ ನಡೆದ ಹಣಾಹಣಿಯಲ್ಲಿ ತಂಡ 32–26ರಲ್ಲಿ ಹರಿಯಾಣ ಸ್ಟೀಲರ್ಸ್ ಎದುರು ಜಯಭೇರಿ ಮೊಳಗಿಸಿತು. ಮೊದಲ ನಿಮಿಷದಲ್ಲೇ ಆಧಿಪತ್ಯ ಸ್ಥಾಪಿಸಿದ ಗುಜರಾತ್ ತಂಡ ಎದುರಾಳಿ ಡಿಫೆಂಡರ್‌ಗಳಿಗೆ ಮೇಲುಗೈ ಸಾಧಿಸಲು ಅವಕಾಶ ನೀಡಲಿಲ್ಲ. ಅಜಯ್ ಕುಮಾರ್ 9 ಟಚ್ ಪಾಯಿಂಟ್ ಸೇರಿದಂತೆ 11 ಪಾಯಿಂಟ್ ಗಳಿಸಿದರೆ ಪ್ರದೀಪ್ ಒಂದು ಟ್ಯಾಕಲ್ ಪಾಯಿಂಟ್ ಸೇರಿದಂತೆ 10 ಪಾಯಿಂಟ್ ಕಲೆ ಹಾಕಿದರು.

ಗುಜರಾತ್ ತಂಡದ ಡಿಫೆಂಡರ್‌ಗಳು ಕೂಡ ಅತ್ಯುತ್ತಮ ಆಟ ಪ್ರದರ್ಶಿಸಿದರು. ರವೀಂದ್ರ ಪೆಹಲ್ ಹಾಗೂ ಗಿರೀಶ್ ಎರ್ನಕ್ ತಂಡದ ರೇಡರ್‌ಗಳ ಆಟಕ್ಕೆ ಉತ್ತಮ ಬೆಂಬಲ ನೀಡಿದರು. ಸ್ಟೀಲರ್ಸ್‌ಗೆ ಕೇವಲ ಐದು ಟ್ಯಾಕಲ್ ಪಾಯಿಂಟ್ ಗಳಿಸಲು ಸಾಧ್ಯವಾಯಿತು. ನಾಯಕ ವಿಕಾಸ್ ಖಂಡೋಲ ರೇಡಿಂಗ್‌ನಲ್ಲಿ ಏಳು ಪಾಯಿಂಟ್ ತಂದುಕೊಟ್ಟರು. ಮೀತು ಎಂಟು ಮತ್ತು ರೋಹಿತ್ ಗುಲಿಯಾ ನಾಲ್ಕು ಪಾಯಿಂಟ್ ಗಳಿಸಿದರು.

ದಬಂಗ್ ಜಯಭೇರಿ: ಮತ್ತೊಂದು ಪಂದ್ಯದಲ್ಲಿ ದಬಂಗ್ ಡೆಲ್ಲಿ ತಂಡ ಯು ಮುಂಬಾವನ್ನು 36–30ರಲ್ಲಿ ಮಣಿಸಿತು. ಆಲ್‌ರೌಂಡರ್ ವಿಜಯ್ ಆರು ಬೋನಸ್ ಮತ್ತು ಒಂದು ಟ್ಯಾಕಲ್ ಸೇರಿದಂತೆ 12 ಪಾಯಿಂಟ್ ತಂದುಕೊಟ್ಟರು.

ಇಂದಿನ ಪಂದ್ಯ (ರಾತ್ರಿ)

ಬೆಂಗಾಲ್ ವಾರಿಯರ್ಸ್ – ಗುಜರಾತ್ ಜೈಂಟ್ಸ್ 7.30

ಬೆಂಗಳೂರು ಬುಲ್ಸ್ – ಯುಪಿ ಯೋಧಾ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	15	9	4	2	53
ಬೆಂಗಳೂರು ಬುಲ್ಸ್	16	8	7	1	46
ಪಟ್ನಾ ಪೈರೇಟ್ಸ್	13	8	4	1	45
ಹರಿಯಾಣ ಸ್ಟೀಲರ್ಸ್	15	6	6	3	43
ಯು ಮುಂಬಾ	14	5	4	5	42
ಬೆಂಗಾಲ್ ವಾರಿಯರ್ಸ್	14	7	6	1	41
ಯುಪಿ ಯೋಧಾ	14	5	6	3	40
ಜೈಪುರ ಪಿಂಕ್ ಪ್ಯಾಂಥರ್ಸ್	14	6	6	2	40
ತಮಿಳ್ ತಲೈವಾಸ್	14	4	4	6	39
ಪುಣೇರಿ ಪಲ್ಟನ್	14	7	7	0	37
ಗುಜರಾತ್ ಜೈಂಟ್ಸ್	13	4	6	3	33
ತೆಲುಗು ಟೈಟನ್ಸ್	14	1	10	3	22

(ಸೋಮವಾರದ ಪಂದ್ಯಗಳ ಅಂತ್ಯಕ್ಕೆ)

ಕಿರಿಯರ ಕ್ರಿಕೆಟ್: ಸೆಮಿಯಲ್ಲಿ ಇಂಗ್ಲೆಂಡ್ ಎದುರಾಳಿ

ಐತಿಹಾಸಿಕ ಸಾಧನೆಯ ನಿರೀಕ್ಷೆಯಲ್ಲಿ ಅಫ್ಗಾನಿಸ್ತಾನ

ನಾರ್ತ್ ಸೌಂಡ್, ಆ್ಯಂಟಿಗಾ (ಪಿಟಿಐ): 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿ ಇತಿಹಾಸ ಬರೆದಿರುವ ಅಫ್ಗಾನಿಸ್ತಾನ ತಂಡವು ಮಂಗಳವಾರ ಮತ್ತೊಂದು ಸಾಧನೆಯ ತುಡಿತದಲ್ಲಿದೆ. ನಾಲ್ಕರ ಘಟ್ಟದ ಪಂದ್ಯದಲ್ಲಿ ಇಂಗ್ಲೆಂಡ್‌ಅನ್ನು ಎದುರಿಸಲಿದ್ದು ಗೆಲುವಿನ ವಿಶ್ವಾಸದಲ್ಲಿದೆ.

ವೀಸಾ ಸಂಬಂಧಿತ ಸಮಸ್ಯೆಯಿಂದಾಗಿ ಕಣಿವೆ ದೇಶದ ತಂಡವು ಆತಿಥೇಯ ಕೆರಿಬಿಯನ್ ನಾಡಿಗೆ ತಡವಾಗಿ ಆಗಮಿಸಿತ್ತು. ಇದರಿಂದಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ತಂಡದ ಗುಂಪು ಹಂತದ ಪಂದ್ಯಗಳನ್ನು ಮರುನಿಗದಿ ಮಾಡಬೇಕಾಯಿತು. ಆದರೆ ಅಫ್ಗಾನಿಸ್ತಾನವು ಅಮೋಘ ಸಾಧನೆಯೊಂದಿಗೆ ತನ್ನ ಸಾಮರ್ಥ್ಯವನ್ನು ಸಾಬೀತು ಮಾಡಿದೆ.

ಕ್ರಿಕೆಟ್‌ನಿಂದ ಬಹುದೂರವಿರುವ ಮತ್ತು ಸಮಸ್ಯೆಗಳ ಸುಳಿಗೆ ಒಗ್ಗಿ ಕೊಂಡಿರುವ ದೇಶದ ತಂಡವು ಟೂರ್ನಿಯಲ್ಲಿ ಇನ್ನಷ್ಟು ಉತ್ತಮ ಸಾಧನೆಯ ನಿರೀಕ್ಷೆಯಲ್ಲಿದೆ. ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ನಡೆಯುವ ಹಣಾಹಣಿಯಲ್ಲಿ ಇಂಗ್ಲೆಂಡ್‌ಅನ್ನು ಮಣಿಸಿ ಮೊದಲ ಬಾರಿ ಟೂರ್ನಿಯ ಫೈನಲ್ ತಲುಪುವ ಉತ್ಸಾಹ ಅಫ್ಗಾನಿಸ್ತಾನ ತಂಡದ್ದು.



ಅಫ್ಗಾನಿಸ್ತಾನ ತಂಡದ ಆಟಗಾರರು– ಟ್ವಿಟರ್ ಚಿತ್ರ

ಕ್ವಾರ್ಟರ್‌ಫೈನಲ್‌ನಲ್ಲಿ ಶ್ರೀಲಂಕಾ ತಂಡವನ್ನು ನಾಲ್ಕು ರನ್‌ಗಳಿಂದ ಅಫ್ಗಾನಿಸ್ತಾನ ಸೋಲಿಸಿತ್ತು.

ಅಫ್ಗಾನಿಸ್ತಾನ ತಂಡಕ್ಕೆ ಇಂಗ್ಲೆಂಡ್‌ನ ಬ್ಯಾಟಿಂಗ್ ಪಡೆ ಬಹುದೊಡ್ಡ ಸವಾಲು ಒಡ್ಡಬಹುದು. ಆಲ್‌ರೌಂಡರ್ ಜಾಕೊಬ್ ಬೆಥೆಲ್ ಆ ತಂಡದ ಶಕ್ತಿಯಾಗಿದ್ದಾರೆ. ದಕ್ಷಿಣ ಆಫ್ರಿಕಾ ಎದುರಿನ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 42 ಎಸೆತಗಳಲ್ಲಿ 88 ರನ್ ಸಿಡಿಸಿದ್ದ ಅವರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲೂ ಇಂಗ್ಲೆಂಡ್ ಉತ್ತಮ ಲಯವನ್ನು ಮುಂದುವರಿಸುವ ಛಲದಲ್ಲಿದೆ.

ಬುಧವಾರ ನಡೆಯುವ ಮತ್ತೊಂದು ಸೆಮಿಫೈನಲ್ ಹಣಾಹಣಿಯಲ್ಲಿ ಭಾರತ ತಂಡವು ಆಸ್ಟ್ರೇಲಿಯಾವನ್ನು ಎದುರಿಸಲಿದೆ.

'ತಂಡಕ್ಕೆ ಕೊಡುಗೆ ನೀಡಲು ನಾಯಕನೇ ಆಗಬೇಕಿಲ್ಲ'

ನವದೆಹಲಿ (ಪಿಟಿಐ): ತಂಡಕ್ಕೆ ಕೊಡುಗೆ ನೀಡಲು ನಾಯಕನೇ ಆಗಬೇಕೆಂದೇನಿಲ್ಲ. ಬ್ಯಾಟಿಂಗ್ ಮೂಲಕವೂ ಅದನ್ನು ಸಾಧಿಸಬಹುದು ಎಂದು ಭಾರತ ಕ್ರಿಕೆಟ್ ತಂಡದ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಹೇಳಿದ್ದಾರೆ.

ಈ ತಿಂಗಳ ಆರಂಭದಲ್ಲಿ ದಕ್ಷಿಣ ಆಫ್ರಿಕಾದಲ್ಲಿ 1-2ರ ಸರಣಿ ಸೋಲಿನ ನಂತರ ಭಾರತ ಟೆಸ್ಟ್ ನಾಯಕತ್ವದಿಂದ ಕೆಳಗಿಳಿದ ಕೊಹ್ಲಿ ಅವರು ಕ್ರಿಕೆಟ್ ಜಗತ್ತನ್ನು ಅಚ್ಚರಿಗೆ ದೂಡಿದ್ದರು. ಇದಕ್ಕೂ ಮೊದಲು ಅವರನ್ನು ಏಕದಿನ ನಾಯಕತ್ವದಿಂದ ಕೈಬಿಡಲಾಗಿತ್ತು.

'ಫರ್ಸ್‌ಸೈಡ್ ಚಾಟ್ ವಿಥ್ ವಿಕೆ (ವಿರಾಟ್ ಕೊಹ್ಲಿ)' ಎಂಬ ಕಾರ್ಯಕ್ರಮದಲ್ಲಿ ಮಾತನಾಡಿರುವ ಅವರು, ಮುಂದಾಳು ಆಗಿಲ್ಲದಿದ್ದರೂ ತಂಡಕ್ಕೆ ಕೊಡುಗೆ ನೀಡಲು ಸಾಧ್ಯವಿದೆ ಎಂದಿದ್ದಾರೆ.

'ಪ್ರತಿಯೊಂದಕ್ಕೂ ಅಧಿಕಾರಾವಧಿ ಎಂಬುದು ಇದೆ. ಅದರ ಬಗ್ಗೆ ತಿಳಿದಿರಬೇಕು. ಜನರು 'ಈ ವ್ಯಕ್ತಿ ಏನು ಮಾಡಿದ್ದಾರೆ' ಎಂದು ಕೇಳಬಹುದು. ಆದರೆ ಹೆಚ್ಚಿನದನ್ನು ಸಾಧಿಸಿದಾಗ ನೀವು ಮಾಡಿದ ಕೆಲಸ ನಿಮಗೆ ಅರಿವಾಗುತ್ತದೆ' ಎಂದು ಅವರು ಮಾರ್ಮಿಕವಾಗಿ ನುಡಿದರು.



ವಿರಾಟ್ ಕೊಹ್ಲಿ– ಎಎಫ್‌ಪಿ ಚಿತ್ರ

'ಮಹೇಂದ್ರ ಸಿಂಗ್ ಧೋನಿ ಅವರು ತಂಡದಲ್ಲಿದ್ದಾಗ ಒಬ್ಬ ಮುಂದಾಳುವಿನಂತೆ ಇದ್ದರು. ಅವರಿಂದ ನಿರಂತರವಾಗಿ ನಾವು ಸಲಹೆಗಳನ್ನು ಪಡೆಯುತ್ತಿದ್ದೆವು. ಅದು ಸಹಜ ಬೆಳವಣಿಗೆಯಾಗಿತ್ತು' ಎಂದು ವಿರಾಟ್‌ಅವರು ಹೇಳಿದ್ದಾರೆ.

'ಒಬ್ಬರು ಎಲ್ಲಾ ರೀತಿಯ ಜವಾಬ್ದಾರಿಗಳನ್ನು ಸ್ವೀಕರಿಸಬೇಕು. ನಾನು ಧೋನಿ ನಾಯಕತ್ವದಲ್ಲಿ ಆಡಿದ್ದೇನೆ ಮತ್ತು ದೀರ್ಘಕಾಲದವರೆಗೆ ತಂಡದ ನಾಯಕನಾಗಿದ್ದೇನೆ. ನನ್ನ ಮನಸ್ಥಿತಿಯಲ್ಲಿ ಬದಲಾವಣೆ ಆಗಿಲ್ಲ' ಎಂದು ಅವರು ನುಡಿದರು.

ಪ್ರೈಮ್ ವಾಲಿಬಾಲ್: ಟಾರ್ಪಿಡೋಸ್‌ಗೆ ಕೊಚ್ಚಿ ಎದುರಾಳಿ

ಬೆಂಗಳೂರು: ಬೆಂಗಳೂರು ಟಾರ್ಪಿಡೋಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್‌ನ ಮೊದಲ ಪಂದ್ಯದಲ್ಲಿ ಕೊಚ್ಚಿ ಬ್ಲೂಸ್ ಸ್ಪೈಕರ್ಸ್ ಸವಾಲು ಎದುರಿಸಲಿದೆ. ಫೆಬ್ರುವರಿ 8ರಂದು ಈ ಪಂದ್ಯವು ಹೈದರಾಬಾದ್‌ನ ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಫೆಬ್ರುವರಿ 5ರಿಂದ ಲೀಗ್ ನಡೆಯಲಿದೆ.

ಈ ಕುರಿತು ಸೋಮವಾರ ನಡೆದ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ಟಾರ್ಪಿಡೋಸ್ ತಂಡದ ಮುಖ್ಯ ಕೋಚ್ ಲಕ್ಷ್ಮಿನಾರಾಯಣ್ ಅವರು 'ಭಾರತದಲ್ಲಿ ಪ್ರತಿಭಾನ್ವಿತ ವಾಲಿಬಾಲ್ ಆಟಗಾರರಿದ್ದಾರೆ. ಪ್ರೈಮ್ ವಾಲಿಬಾಲ್ ಲೀಗ್‌ನ ಮೂಲಕ ಆಟಗಾರರು ಉತ್ತಮ ಅವಕಾಶಗಳನ್ನು ಪಡೆಯಬಹುದು. ಟಾರ್ಪಿಡೋಸ್ ತಂಡದಲ್ಲಿ ಹಲವು ಯುವ ಆಟಗಾರರಿದ್ದಾರೆ. ಭಾರತದ ಅನುಭವಿ ಆಟಗಾರರೊಂದಿಗೆ ಆಡುವ ಅವಕಾಶ ಗಿಟ್ಟಿಸುವ ಮೂಲಕ ಅವರು ಪ್ರಮುಖ ಆಟಗಾರರಾಗಿ ಹೊರಹೊಮ್ಮಬಹುದು' ಎಂದರು.

ಟಾರ್ಪಿಡೋಸ್ ಮಾಲೀಕತ್ವ ಗ್ರೂಪ್‌ನ ಅಂಕಿತ್ ನಾಗೋರಿ, ವಿಶಾಲ್ ಜೈಸನ್ ಮತ್ತು ಯಶವಂತ್ ಬಿಯ್ಯಾಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ

ಹೈದರಾಬಾದ್‌ಗೆ ಭರ್ಜರಿ ಗೆಲುವು

ಫತೋರ್ಡ (ಪಿಟಿಐ): ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಎಂಟನೇ ಆವೃತ್ತಿಯಲ್ಲಿ ಅಮೋಘ ಆಟವಾಡುತ್ತಿರುವ ನೈಜೀರಿಯಾದ ಬಾರ್ತೊಲೊಮೆ ಒಗ್ಬೆಚೆ ಸೋಮವಾರ ಮತ್ತೊಮ್ಮೆ ಮಿಂಚಿದರು. ಅವರು ಗಳಿಸಿದ ಎರಡು ಗೋಲುಗಳ ಬಲದಿಂದ ಹೈದರಾಬಾದ್ ಎಫ್‌ಸಿ ತಂಡ ನಾರ್ತ್ ಈಸ್ಟ್ ಯುನೈಟೆಡ್ ವಿರದ್ಧ 5–0 ಗೋಲುಗಳಿಂದ ಜಯ ಗಳಿಸಿತು.

ಮೂರನೇ ನಿಮಿಷದಲ್ಲೇ ಗೋಲು ಗಳಿಸಿ ಹೈದರಾಬಾದ್‌ಗೆ ಮುನ್ನಡೆ ತಂದುಕೊಟ್ಟ ಬಾರ್ತೊಲೊಮೆ 60ನೇ ನಿಮಿಷದಲ್ಲಿ ಮತ್ತೊಮ್ಮೆ ಚೆಂಡನ್ನು ಗುರಿ ಮುಟ್ಟಿಸಿದರು. 45ನೇ ನಿಮಿಷದಲ್ಲಿ ಆಕಾಶ್ ಮಿಶ್ರಾ, 84ನೇ ನಿಮಿಷದಲ್ಲಿ ನಿಖಿಲ್ ಪೂಜಾರಿ ಮತ್ತು 88ನೇ ನಿಮಿಷದಲ್ಲಿ ಎಜು ಗಾರ್ಸಿಯಾ ಗೋಲು ಗಳಿಸಿದರು. ಈ ಜಯದೊಂದಿಗೆ ಹೈದರಾಬಾದ್ ಎಫ್‌ಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿತು.

ಗೋವಾ ತಂಡಕ್ಕೆ ಗೆಲುವಿನ ಹಂಬಲ: ಸತತ ನಾಲ್ಕು ಪಂದ್ಯಗಳಲ್ಲಿ ಗೆಲುವು ಕಾಣದ ಆತಿಥೇಯ ಎಫ್‌ಸಿ ಗೋವಾ ತಂಡವು ಮಂಗಳವಾರ ಒಡಿಶಾ ಎಫ್‌ಸಿ ಸವಾಲು ಎದುರಿಸಲಿದೆ. ಬ್ಯಾಂಬೋಲಿಮ್‌ನಲ್ಲಿ ಪಂದ್ಯ ನಡೆಯಲಿದೆ. 14 ಪಂದ್ಯಗಳನ್ನು ಆಡಿರುವ ಗೋವಾ ತಂಡವು ಅಷ್ಟೇ ಪಾಯಿಂಟ್ಸ್ ಕಲೆಹಾಕಿದೆ. ಪ್ಲೇ ಆಫ್ ಆಸೆ ಜೀವಂತವಾಗಿರಲು ತಂಡವು ಮುಂಬರುವ ಪಂದ್ಯಗಳನ್ನು ಗೆಲ್ಲುತ್ತ ಸಾಗಬೇಕು.

ಒಡಿಶಾ ಕೂಡ ಇದುವರೆಗೆ ಉತ್ತಮ ಸಾಮರ್ಥ್ಯವನ್ನೇನೂ ತೋರಿಲ್ಲ. ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದ ತಂಡವು ಸದ್ಯ 13 ಪಂದ್ಯಗಳಿಂದ 17 ಪಾಯಿಂಟ್ಸ್ ಗಳಿಸಿದ್ದು ತಂಡಕ್ಕೆ ಪ್ಲೇ ಆಫ್‌ಗೇರಲು ಇನ್ನೂ ಅವಕಾಶವಿದೆ.

ಗೋವಾ ತಂಡ ಈ ಋತುವಿನ ಒಂದು ಪಂದ್ಯದಲ್ಲಿ ಹೆಚ್ಚು ಕ್ರಾಸ್‌ಗಳನ್ನು ಮಾಡಿದ ದಾಖಲೆ ಮಾಡಿದೆ. ಈಸ್ಟ್ ಬೆಂಗಾಲ್ ಎದುರಿನ ಹಣಾಹಣಿಯಲ್ಲಿ 31 ಕ್ರಾಸ್‌ಗಳು ದಾಖಲಾಗಿದ್ದವು. ಬ್ರೆಂಡನ್ ಫರ್ನಾಂಡಿಸ್ ಈ ಪಂದ್ಯದಲ್ಲೂ ಕಣಕ್ಕಿಳಿಯಲಿದ್ದು, ತಂಡದ ಬಲ ಹೆಚ್ಚಿದೆ.ಜೊನಾಥಸ್ ಮತ್ತು ಅರಿದಾಯಿ ಕ್ಯಾಬ್ರೆರಾ ಈ ಬಾರಿ ಒಡಿಶಾ ತಂಡದಲ್ಲಿ ಮಿಂಚಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಹೈದರಾಬಾದ್ ಎಫ್‌ಸಿಯ ಬಾರ್ತೊಲೊಮೆ ಒಗ್ಬೆಚೆ ಗೋಲು ಗಳಿಸಿ ಸಂಭ್ರಮಿಸಿದರು

ಮುಂಬೈ ಸಿಟಿ ಎಫ್‌ಸಿಗೆ ರವಿ, ಲಾಲಿಯಾಂಜುವಾಲ

ಮುಂಬೈ (ಪಿಟಿಐ): ಗೋಲ್ ಕೀಪರ್ ರವಿ ಕುಮಾರ್ ಅವರನ್ನು ಒಡಿಶಾ ಎಫ್‌ಸಿ ತಂಡದಿಂದ ಮುಂಬೈ ಸಿಟಿ ಎಫ್‌ಸಿ (ಎಂಎಫ್‌ಸಿ) ಪಡೆದುಕೊಂಡಿದ್ದು ಭಾನುವಾರ ಒಪ್ಪಂದಕ್ಕೆ ಸಹಿ ಮಾಡಿದೆ. 28 ವರ್ಷದ ರವಿ ಈ ಹಿಂದೆ ಮುಂಬೈ ಸಿಟಿಯ ಜೊತೆಯಲ್ಲಿದ್ದರು. ಈ ಬಾರಿ ಮೇ 31ರ ವರೆಗೆ ತಂಡದ ಜೊತೆ ಇರುವರು.

ಟಾಟಾ ಫುಟ್‌ಬಾಲ್ ಅಕಾಡೆಮಿಯಲ್ಲಿ ಬೆಳೆದ ರವಿ ಅವರು ಇಂಡಿಯನ್ ಆ್ಯರೋಸ್ ತಂಡದ ಮೂಲಕ ವೃತ್ತಿಪರ ಫುಟ್‌ಬಾಲ್‌ಗೆ ಕಾಲಿಟ್ಟಿದ್ದರು. ನಂತರ ಸ್ಪೋರ್ಟಿಂಗ್ ಕ್ಲಬ್ ಡಿ ಗೋವಾ ಸೇರಿದ್ದರು. ಡೆಲ್ಲಿ ಡೈನಾಮೊಸ್ ಮತ್ತು ಮಿನರ್ವ ಪಂಜಾಬ್ ತಂಡದಲ್ಲೂ ಆಡಿರುವ ಅವರು 2017ರಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಮೂಲಕ ಮೊದಲ ಬಾರಿ ಐಎಸ್‌ಎಲ್‌ನಲ್ಲಿ ಕಾಣಿಸಿಕೊಂಡಿದ್ದರು. 2018ರಿಂದ ಎರಡು ವರ್ಷ ಮುಂಬೈ ಸಿಟಿ ಎಫ್‌ಸಿಯಲ್ಲಿದ್ದರು. ಚೆನ್ನೈಯಿನ್ ಎಫ್‌ಸಿಯಿಂದ ಲಾಲಿಯಾಂಜುವಾಲ ಚಾಂಗ್ಟೆ ಅವರನ್ನು ಮುಂಬೈ ತಂಡ ಪಡೆದುಕೊಂಡಿದೆ. 24 ವರ್ಷದ ಅವರು ಕೂಡ ಮೇ 31ರ ವರೆಗೆ ತಂಡದೊಂದಿಗೆ ಇರುವರು.

ಭಾರತ ಎದುರಿನ ಟ್ವೆಂಟಿ20 ಸರಣಿಗೆ ತಂಡ ಪ್ರಕಟ; ಪೊಲಾರ್ಡ್ ನಾಯಕತ್ವ

ವೆಸ್ಟ್ ಇಂಡೀಸ್‌ಗಿಲ್ಲ ಶಿಮ್ರಾನ್ ಬಲ



ನಾಯಕ ಕೀರನ್ ಪೊಲಾರ್ಡ್ (ಎಡ) ಮತ್ತು ಒಡೀನ್ ಸ್ಮಿತ್



ಜೇಸನ್ ಹೋಲ್ಡರ್ –ಎಎಫ್‌ಪಿ ಚಿತ್ರಗಳು

ಸೇಂಟ್ ಜಾನ್ಸ್ (ಪಿಟಿಐ): ಸ್ಫೋಟಕ ಶೈಲಿಯ ಬ್ಯಾಟರ್ ಶಿಮ್ರಾನ್ ಹೆಟ್ಮೆಯರ್ ಅವರು ಭಾರತ ಎದುರಿನ ಟ್ವೆಂಟಿ20 ಸರಣಿಗೆ ಪ್ರಕಟಿಸಿರುವ ವೆಸ್ಟ್ ಇಂಡೀಸ್ ತಂಡದಲ್ಲಿ ಸ್ಥಾನ ಪಡೆದುಕೊಂಡಿಲ್ಲ. 16 ಮಂದಿಯ ತಂಡವನ್ನು ಸೋಮವಾರ ಪ್ರಕಟಿಸಿದ್ದು ಫಿಟ್‌ನೆಸ್ ಸಮಸ್ಯೆಯಿಂದಾಗಿ ಹೆಟ್ಮೆಯರ್ ಅವರನ್ನು ಸೇರಿಸಿಕೊಳ್ಳಲಿಲ್ಲ.

ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿ ಫೆಬ್ರುವರಿ 6ರಿಂದ 11ರ ವರೆಗೆ ಅಹಮದಾಬಾದ್‌ನಲ್ಲಿ ನಡೆಯಲಿದ್ದು 16ರಿಂದ 20ರ ವರೆಗೆ ಕೋಲ್ಕತ್ತ-ದಲ್ಲಿ ಮೂರು ಪಂದ್ಯಗಳ ಟ್ವೆಂಟಿ20 ಸರಣಿ ನಡೆಯಲಿದೆ. ಏಕದಿನ ಸರಣಿಗೆ ಕೀರನ್ ಪೊಲಾರ್ಡ್ ನಾಯಕತ್ವದ ತಂಡವನ್ನು ಈಗಾಗಲೇ ಪ್ರಕಟಿಸ-ಲಾಗಿದೆ. ಪೊಲಾರ್ಡ್ ಸೇರಿದಂತೆ ಏಕದಿನ ಪಂದ್ಯಗಳಲ್ಲಿ ಆಡುವ 11 ಮಂದಿ ಟ್ವೆಂಟಿ20 ತಂಡದಲ್ಲೂ ಸ್ಥಾನ ಗಳಿಸಿದ್ದಾರೆ.

ಹೆಟ್ಮೆಯರ್ ದೈಹಿಕ ಫಿಟ್‌ನೆಸ್ ಕಡೆಗೆ ಗಮನ ನೀಡುತ್ತಿಲ್ಲ ಎಂದು ವೆಸ್ಟ್ ಇಂಡೀಸ್ ತಂಡದ ಕೋಚ್ ಫಿಲ್ ಸಿಮೋನ್ಸ್ ಜನವರಿ ಮೊದಲ ವಾರದಲ್ಲಿ ಅಸಮಾಧಾನ ವ್ಯಕ್ತಪಡಿಸಿ-ದ್ದರು. ಇಂಗ್ಲೆಂಡ್ ಎದುರಿನ ಮೂರನೇ ಪಂದ್ಯದಲ್ಲಿ ರೊವ್ಮನ್ ಪೊವೆಲ್ ಅವರಿಗೆ ಅವಕಾಶ ನೀಡುವುದಕ್ಕಾಗಿ ಒಡೀನ್ ಸ್ಮಿತ್ ಅವರನ್ನು ತಂಡದಲ್ಲಿ ಸೇರಿಸಿಕೊಂಡಿದ್ದು ವಿವಾದಕ್ಕೆ ಕಾರಣವಾಗಿತ್ತು. ಒಡೀನ್ ಅವರನ್ನು ಭಾರತ ಎದುರಿನ ಸರಣಿಗೆ ಆಯ್ಕೆ ಮಾಡಲಾಗಿದೆ.

ಟ್ವೆಂಟಿ20 ತಂಡ: ಕೀರನ್ ಪೊಲಾರ್ಡ್ (ನಾಯಕ), ನಿಕೋಲಸ್ ಪೂರನ್ (ಉಪನಾಯಕ), ಫ್ಯಾಬಿಯನ್ ಅಲೆನ್, ಡರೆನ್ ಬ್ರಾವೊ, ರಾಸ್ಟನ್ ಚೇಸ್, ಶೆಲ್ಡನ್ ಕಾಟ್ರೆಲ್, ಡೊಮಿನಿಕ್ ಡ್ರೇಕ್ಸ್, ಜೇಸನ್ ಹೋಲ್ಡರ್, ಶಾಯಿ ಹೋಪ್, ಅಕೀಲ್ ಹೊಸೇನ್, ಬ್ರೆಂಡನ್ ಕಿಂಗ್, ರೊವ್ಮನ್ ಪೊವೆಲ್, ರೊಮಾರಿಯೊ ಶೆಫರ್ಡ್, ಒಡೀನ್ ಸ್ಮಿತ್, ಕೈಲ್ ಮೇಯರ್ಸ್, ಹೇಡನ್ ವಾಲ್ಶ್ ಜೂನಿಯರ್.

ಹೋಲ್ಡರ್‌ಗೆ 4 ಎಸೆತಗಳಲ್ಲಿ 4 ವಿಕೆಟ್

ಕೊನೆಯ ಓವರ್‌ನ ನಾಲ್ಕು ಎಸೆತಗಳಲ್ಲಿ ನಾಲ್ಕು ವಿಕೆಟ್ ಉರುಳಿಸಿದ ಜೇಸನ್ ಹೋಲ್ಡರ್ ಅವರು ವೆಸ್ಟ್ ಇಂಡೀಸ್ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟರು. ಭಾನುವಾರ ರಾತ್ರಿ ನಡೆದ ಇಂಗ್ಲೆಂಡ್ ಎದುರಿನ ಕೊನೆಯ ಮತ್ತು ಐದನೇ ಟ್ವೆಂಟಿ20 ಪಂದ್ಯದಲ್ಲಿ ತಂಡ 17 ರನ್‌ಗಳಿಂದ ಗೆದ್ದು 3–2ರಲ್ಲಿ ಸರಣಿ ತನ್ನದಾಗಿಸಿಕೊಂಡಿತು.

ಕೆನ್ಸಿಂಗ್ಟನ್ ಓವಲ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ 179 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ಇಂಗ್ಲೆಂಡ್‌ಗೆ ಕೊನೆಯ ಓವರ್‌ನಲ್ಲಿ 20 ರನ್ ಬೇಕಾಗಿತ್ತು. ಮೊದಲ ಎಸೆತದಲ್ಲಿ ಹೋಲ್ಡರ್ ಎರಡು ರನ್ ನೀಡಿದರು. ನಂತರ ನಾಲ್ಕು ಎಸೆತದಲ್ಲಿ ಕ್ರಿಸ್ ಜೋರ್ಡನ್, ಸ್ಯಾಮ್ ಬಿಲಿಂಗ್ಸ್, ಆದಿಲ್ ರಶೀದ್ ಮತ್ತು ಸಕೀಬ್ ಮಹಮೂದ್ ಅವರನ್ನು ವಾಪಸ್ ಕಳುಹಿಸಿದರು.

ಮೂರನೇ ಕ್ರಮಾಂಕದ ಜೇಮ್ಸ್ ವಿನ್ಸ್ (55; 35 ಎಸೆತ, 7 ಬೌಂಡರಿ, 1 ಸಿಕ್ಸರ್) ಮತ್ತು ಸ್ಯಾಮ್ ಬಿಲಿಂಗ್ಸ್ (41; 28 ಎ, 1 ಬೌಂ, 2 ಸಿ) ಅವರ ಉತ್ತಮ ಬ್ಯಾಟಿಂಗ್ ನೆರವಿನಿಂದ ಇಂಗ್ಲೆಂಡ್ ಜಯದತ್ತ ಹೆಜ್ಜೆ ಹಾಕಿತ್ತು. ಕೊನೆಯ ಐವರು ಎರಡಂಕಿ ಮೊತ್ತವನ್ನೂ ದಾಟದೆ ಔಟಾದರು.

ಬ್ರೆಂಡನ್ ಕಿಂಗ್ಸ್ ಮತ್ತು ಕೈಲ್ ಮೇಯರ್ಸ್ ಅವರ 59 ರನ್‌ಗಳ ಮೊದಲ ವಿಕೆಟ್ ಜೊತೆಯಾಟದ ನೆರವಿನಿಂದ ವೆಸ್ಟ್ ಇಂಡೀಸ್ ಉತ್ತಮ ಆರಂಭ ಕಂಡಿತ್ತು. ಕೀರನ್ ಪೊಲಾರ್ಡ್ ಮತ್ತು ರೋವ್ಮನ್ ಪೊವೆಲ್ ಕೊನೆಯಲ್ಲಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 4ಕ್ಕೆ 179 (ಬ್ರೆಂಡನ್ ಕಿಂಗ್ 34, ಕೈಲ್ ಮೇಯರ್ಸ್ 31, ನಿಕೋಲಸ್ ಪೂರನ್ 21, ಕೀರನ್ ಪೊಲಾರ್ಡ್ ಔಟಾಗದೆ 41, ರೋವ್ಮನ್ ಪೊವೆಲ್ ಔಟಾಗದೆ 35; ಆದಿಲ್ ರಶೀದ್ 17ಕ್ಕೆ2, ಲಿಯಾಮ್ ಲಿವಿಂಗ್‌ಸ್ಟನ್ 17ಕ್ಕೆ2); ಇಂಗ್ಲೆಂಡ್: 19.5 ಓವರ್‌ಗಳಲ್ಲಿ 162 (ಜೇಮ್ಸ್ ವಿನ್ಸ್ 55, ಸ್ಯಾಮ್ ಬಿಲಿಂಗ್ಸ್ 41; ಅಕೀಲ್ ಹೊಸೇನ್ 30ಕ್ಕೆ4, ಜೇಸನ್ ಹೋಲ್ಡರ್ 27ಕ್ಕೆ5). ಫಲಿತಾಂಶ: ವೆಸ್ಟ್ ಇಂಡೀಸ್‌ಗೆ 17 ರನ್‌ಗಳ ಜಯ; 5 ಪಂದ್ಯಗಳ ಸರಣಿಯಲ್ಲಿ 3-2ರ ಗೆಲುವು.

ಏಕದಿನ ಸರಣಿ: ಅಹಮದಾಬಾದ್ ತಲುಪಿದ ರೋಹಿತ್ ಶರ್ಮಾ ಬಳಗ



ರೋಹಿತ್ ಶರ್ಮಾ– ಪಿಟಿಐ ಚಿತ್ರ

ಅಹಮದಾಬಾದ್: ಏಕದಿನ ಸರಣಿಯಲ್ಲಿ ಆಡುವ ಭಾರತ ತಂಡದ ಆಟಗಾರರು ಸೋಮವಾರ ಇಲ್ಲಿಗೆ ತಲುಪಿದ್ದಾರೆ. ಎಲ್ಲ ಆಟಗಾರರೂ ಬಯೊಬಬಲ್ ಪ್ರವೇಶಿಸಿದ್ದು ಮೂರು ದಿನಗಳ ಕ್ವಾರಂಟೈನ್‌ಗೆ ಒಳಗಾಗಲಿದ್ದಾರೆ ಎಂದು ಬಿಸಿಸಿಐ ಪದಾಧಿಕಾರಿಗಳು ತಿಳಿಸಿದ್ದಾರೆ.

ಏಕದಿನ ತಂಡದ ನಾಯಕನಾದ ನಂತರ ರೋಹಿತ್ ಶರ್ಮಾ ಅವರಿಗೆ ಇದು ಮೊದಲ ಸರಣಿಯಾಗಿದೆ. ಮಂಡಿರಜ್ಜು ನೋವಿನ ಸಮಸ್ಯೆಯಿಂದಾಗಿ ರೋಹಿತ್ ಶರ್ಮಾ ಅವರು ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಲಭ್ಯ ಇರಲಿಲ್ಲ.

ವಿಮಾನದಲ್ಲಿ ತೆರಳುವ ಚಿತ್ರವನ್ನು ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಟ್ವೀಟ್ ಮಾಡಿದ್ದು ಅವರ ಬಳಿ ಎಡಗೈ ಬ್ಯಾಟರ್ ಶಿಖರ್ ಧವನ್ ಕುಳಿತಿದ್ದಾರೆ.

ಬಿಸಿಸಿಐ: ಮಲ್ಹೋತ್ರಾ ರಾಜೀನಾಮೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಗೇಮ್ ಡೆವಲಪ್‌ಮೆಂಟ್ ವಿಭಾಗದ ಪ್ರಧಾನ ವ್ಯವಸ್ಥಾಪಕ ಧೀರಜ್ ಮಲ್ಹೋತ್ರಾ ತಮ್ಮ ಸ್ಥಾನಕ್ಕೆ ಸೋಮವಾರ ರಾಜೀನಾಮೆ ನೀಡಿದ್ದಾರೆ. ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸ್ ಸೇರುವ ಸಾಧ್ಯತೆ ಇದೆ.

ಜನವರಿ ಮೊದಲ ವಾರದಲ್ಲಿ ಅವರು ರಾಜೀನಾಮೆ ಸಲ್ಲಿಸಿದ್ದರು. ಅದು ಈಗ ಅಂಗೀಕಾರ ಆಗಿದೆ ಎಂದು ಮಂಡಳಿಯ ಪದಾಧಿಕಾರಿಗಳು ತಿಳಿಸಿದ್ದಾರೆ. ಧೀರಜ್ ಅವರನ್ನು ಭಾರತ ತಂಡದ ಆಯ್ಕೆ ಮಂಡಳಿಯ ಮಾಜಿ ಮುಖ್ಯಸ್ಥ ಸಾಬಾ ಕರೀಂ ಅವರ ಬದಲಿಗೆ ಕಳೆದ ಫೆಬ್ರುವರಿಯಲ್ಲಿ ನೇಮಕ ಮಾಡಲಾಗಿತ್ತು. ಅದಕ್ಕೂ ಮೊದಲು ಡೆಲ್ಲಿ ಕ್ಯಾಪಿಟಲ್ಸ್‌ನ ಮುಖ್ಯ ಕಾರ್ಯ-ನಿರ್ವಾಹಕ ಅಧಿಕಾರಿಯಾಗಿದ್ದರು. ಈಗ, ಇನ್ನಷ್ಟು ಮಹತ್ವದ ಹುದ್ದೆಯಲ್ಲಿ ಮುಂದುವರಿಯುವ ಸಾಧ್ಯತೆ ಇದೆ.





